ಮಂಗಳವಾರ, ಅಕ್ಟೋಬರ್ 3, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 274 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ ಹೃದಯಾಘಾತದ ಬಳಿಕ ಚಿಕಿತ್ಸೆ ಮುಖ್ಯ; ಆ ಬಳಿಕ ಎಚ್ಚರಿಕೆಯೂ ಅಷ್ಟೇ ಮುಖ್ಯ



ಆಳ-ಅಗಲ ಹಿರಿಯರಿಗಿಲ್ಲ ಆರ್ಥಿಕ ಭದ್ರತೆ

ಹಿಂಸಾಚಾರ: ಬಿಜೆಪಿ-ಕಾಂಗ್ರೆಸ್ ವಾಕ್ಸಮರ 5

ಬಿಜೆಪಿ ಅಧಿಕಾರಕ್ಕೆ ಬಂದರೆ ಯಾವುದೇ ಯೋಜನೆ ನಿಲ್ಲಿಸುವುದಿಲ್ಲ: ಪ್ರಧಾನಿ

‘ಬೆದರಿಕೆಗೆ ಹೆದರಲ್ಲ, ಗೌಡರಿಗೂ ಗೊತ್ತು’ 7


ಸೋಲು ಒಪ್ಪಿಕೊಂಡ ಕಾಂಗ್ರೆಸ್: ಮೋದಿ 10

ಬಿಹಾರ ಸಮೀಕ್ಷೆಯ ವರದಿ ಬಿಡುಗಡೆ ಮಾಡಿದ ಮುಖ್ಯಮಂತ್ರಿ ನಿತೀಶ್ ಕುಮಾರ್

ರಾಷ್ಟ್ರೀಯ ಜಾತಿಗಣತಿಗೆ ಒತ್ತಡ

ಧರ್ಮವಾರು ಜನಸಂಖ್ಯೆ								
	10.71 ಕೋಟಿ ಹಿಂದೂ (ಶೇ 81.99)	2.31 ಕೋಟಿ ಮುಸ್ಲಿಂ (ಶೇ 17.70)	75,238 ಕ್ರೈಸ್ತ (ಶೇ 0.05)	14,753 ಸಿಖ್ (ಶೇ 0.01)	1.11 ಲಕ್ಷ ಬೌದ್ಧ (ಶೇ 0.08)	12,523 ಜೈನ (ಶೇ 0.009)	1.66 ಲಕ್ಷ ಇತರೆ (ಶೇ 0.12)	2,146 ಧರ್ಮಾತೀತ (ಶೇ 0.001)

ಪ್ರಜಾವಾಣಿ ವಾರ್ತೆ



ನಿತೀಶ್ ಕುಮಾರ್


ಪಟ್ನಾ: ಬಿಹಾರ ಸರ್ಕಾರವು ಜಾತಿ ಗಣತಿಯ ವರದಿಯನ್ನು ಸೋಮವಾರ ಬಿಡುಗಡೆ ಮಾಡಿದೆ. ದೇಶದಾದ್ಯಂತ ಜಾತಿ ಗಣತಿ ನಡೆಸಬೇಕು ಎಂಬ ಕೂಗು ಏಳುವುದಕ್ಕೆ ಇದು ಕಾರಣವಾಗಬಹುದು ಎಂದು ವಿಶ್ಲೇಷಿಸಲಾಗಿದೆ. ಬಿಹಾರದಲ್ಲಿ ಇತರ ಹಿಂದುಳಿದ ವರ್ಗಗಳು (ಒಬಿಸಿ) ಮತ್ತು ಅತ್ಯಂತ ಹಿಂದುಳಿದ ವರ್ಗಗಳಿಗೆ (ಇಬಿಸಿ) ಸೇರಿದ ಜನರ ಪ್ರಮಾಣವು ಶೇ 63.13ರಷ್ಟಿದೆ ಎಂಬ ಅಂಶವು ಜಾತಿ ಗಣತಿ ವರದಿಯಿಂದಾಗಿ ಬಯಲಾಗಿದೆ.

ಇಬಿಸಿ ವರ್ಗಗಳ ಜನಸಂಖ್ಯೆಯ ಪ್ರಮಾಣವು ಶೇ 36.01ರಷ್ಟಿದೆ (4.70 ಕೋಟಿ). ಒಬಿಸಿ ಪ್ರಮಾಣವು ಶೇ 27.12ರಷ್ಟಿದೆ (3.54 ಕೋಟಿ).

ಮುಖ್ಯಮಂತ್ರಿ ನಿತೀಶ್ ಕುಮಾರ್ ಗಾಂಧಿ ಜಯಂತಿಯಂದು ಜಾತಿ ಗಣತಿಯ ವರದಿ ಬಿಡುಗಡೆ ಮಾಡಿದ್ದಾರೆ.

5ನೇ ಪುಟ ನೋಡಿ

ವರ್ಗವಾರು ಜನಸಂಖ್ಯೆ



ಒಟ್ಟು ಜನಸಂಖ್ಯೆ 13.07 ಕೋಟಿ

ಒಬಿಸಿ (ಶೇ 27.12)	3.54 ಕೋಟಿ
ಇಬಿಸಿ (ಶೇ 36.01)	4.70 ಕೋಟಿ
ಎಸ್‌ಸಿ (ಶೇ 19.65)	2.56 ಕೋಟಿ
ಎಸ್‌ಟಿ (ಶೇ 1.68)	21.99 ಲಕ್ಷ
ಸಾಮಾನ್ಯ ವರ್ಗ (ಶೇ 15.52)	2.02 ಕೋಟಿ

ಪ್ರಮುಖ ಜಾತಿಗಳ ಜನಸಂಖ್ಯೆ

ಯಾದವ	1.86 ಕೋಟಿ (ಶೇ 14.26)
ಕುರ್ಮಿ	37.22 ಲಕ್ಷ (ಶೇ 2.87)
ಕುಶ್ವಾಹ	55.05 ಲಕ್ಷ (ಶೇ 4.21)
ಬ್ರಾಹ್ಮಣ	47.81 ಲಕ್ಷ (ಶೇ 3.65)
ರಜಪೂತ	45.10 ಲಕ್ಷ (ಶೇ 3.45)
ಭೂಮಿಹಾರ	37.5 ಲಕ್ಷ (ಶೇ 2.86)
ಕಾಯಸ್ಥ	7.85 ಲಕ್ಷ (ಶೇ 0.60)

ಜನಸಂಖ್ಯೆಗೆ ತಕ್ಕಂತೆ ಪ್ರಾತಿನಿಧ್ಯಕ್ಕೆ ಆಗ್ರಹ

ಜಾತಿ ಗಣತಿಯ ವರದಿ ಬಿಡುಗಡೆ ಮಾಡಿರುವುದನ್ನು ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಸ್ವಾಗತಿಸಿವೆ. ದೇಶದಾದ್ಯಂತ ಜಾತಿ ಗಣತಿ ನಡೆಸಲು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಹಿಂದೇಟು ಹಾಕುತ್ತಿದೆ ಎಂದು ಈ ಪಕ್ಷಗಳು ದೂರಿವೆ. ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ಇರಬೇಕು ಎಂಬ ಬೇಡಿಕೆಯನ್ನು ಕಾಂಗ್ರೆಸ್ ಮುಂದಿಟ್ಟಿದೆ.

5ನೇ ಪುಟ ನೋಡಿ

‘ಜಾತಿ ಗಣತಿ ವರದಿ ಬಿಡುಗಡೆ ಮಾಡಿ’

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು 2015ರಲ್ಲಿ ಜಾತಿ ಗಣತಿ ನಡೆಸಿತ್ತು. ಆದರೆ, ಈ ಗಣತಿಯ ವರದಿ ಇನ್ನೂ ಬಹಿರಂಗ ಆಗಿಲ್ಲ. ಈ ವರದಿಯನ್ನು ಬಿಡುಗಡೆ ಮಾಡಬೇಕು ಎಂಬ ಕೂಗು ಜೋರಾಗಿಯೇ ಕೇಳಿ ಬರುತ್ತಿದೆ.

‘ಇಂಡಿಯಾ ಮೈತ್ರಿಕೂಟದ ಭಾಗವಾಗಿರುವ ಪಕ್ಷಗಳು ಬಿಹಾರದಲ್ಲಿ ಆಡಳಿತ ನಡೆಸುತ್ತಿವೆ. ಬಿಹಾರದ ಜಾತಿ ಗಣತಿಯನ್ನು ರಾಹುಲ್ ಗಾಂಧಿ ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಕರ್ನಾಟಕ ಸರ್ಕಾರವು ಜಾತಿ ಗಣತಿ ವರದಿಯನ್ನು ಬಹಿರಂಗ ಮಾಡಬೇಕು’ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ಒತ್ತಾಯಿಸಿದ್ದಾರೆ.

ಅಥ್ಲೀಟ್‌ಗಳ ಬೆಳ್ಳಿ ಮಿಂಚು





ಬೆಳ್ಳಿ — **ಅನ್ನು ಸೋಜನ್** ಲಾಂಗ್ ಜಂಪ್ 6.63 ಮೀ.

ಬೆಳ್ಳಿ — **ಪಾರುಲ್ ಚೌಧರಿ** 3000 ಮೀ ಸ್ಟೀಪಲ್ ಚೇಸ್ 9ನಿ.27.63ಸೆ

ಕಂಚು — ಪ್ರೀತಿ 9ನಿ.43.32ಸೆ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಖಾತೆಗೆ ಸೋಮವಾರ ಮತ್ತೆ ಏಳು ಪದಕಗಳು ಸೇರ್ಪಡೆಯಾದವು. ಇದರಲ್ಲಿ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್‌ಗಳು ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗಳಿಸಿದರು. ರೋಲರ್ ಸ್ಕೇಟಿಂಗ್‌ನಲ್ಲಿ ಎರಡು ಕಂಚು ಮತ್ತು ಮಹಿಳೆಯರ ಟೇಬಲ್ ಟೆನಿಸ್ ಡಬಲ್ಸ್‌ನಲ್ಲಿ ಕಂಚಿನ ಪದಕ ಭಾರತಕ್ಕೆ ಒಲಿದವು. ಇದರೊಂದಿಗೆ ಒಟ್ಟು ಪದಕಗಳಿಕೆಯು 60ಕ್ಕೇರಿತು.

ಪುಟ 12



ಬೆಳ್ಳಿ — **4x400 ಮಿಶ್ರ ರಿಲೆ** ಮೊಹಮ್ಮದ್ ಅಜ್ಮಲ್, ವಿದ್ಯಾ ರಾಮರಾಜ್, ರಾಜೇಶ್ ರಮೇಶ್, ಶುಭಾ ವೆಂಕಟೇಶನ್ 3ನಿ.14.34ಸೆ

ಕಂಚು
- **ರೋಲರ್ ಸ್ಕೇಟಿಂಗ್** 3000 ಮೀ ರಿಲೆ: ಪುರುಷರ ವಿಭಾಗ **ಆನಂದಕುಮಾರ್ ವೇಲಕುಮಾರ್, ಸಿದ್ಧಾಂತ್ ಕಾಂಬ್ಳೆ ಮತ್ತು ವಿಕ್ರಂ ಇಂಗಳೆ.** ಮಹಿಳೆಯರ ವಿಭಾಗ: **ಕಾರ್ತಿಕಾ ಜಗದೀಶ್ವರನ್, ಹೀರಲ್ ಸಾಧು ಮತ್ತು ಆರತಿ ಕಸ್ತೂರಿ ರಾಜ್**
- **ಟೇಬಲ್ ಟೆನಿಸ್** ಮಹಿಳೆಯರ ಡಬಲ್ಸ್: **ಸುತೀರ್ಥಾ ಮುಖರ್ಜಿ–ಐಹಿಕಾ ಮುಖರ್ಜಿ**

ಕೋವಿಡ್ ಲಸಿಕೆಗೆ ನೆರವಾದ ಸಂಶೋಧನೆ


ಇಬ್ಬರಿಗೆ ವೈದ್ಯಕೀಯ ನೊಬೆಲ್

ಸ್ಟಾಕ್‌ಹೋಮ್ (ಎಪಿ): ಕೊರೊನಾ ಸೋಂಕು ತಡೆಯುವುದಕ್ಕಾಗಿ ಎಂಆರ್‌ಎನ್‌ಎ ಲಸಿಕೆ ಅಭಿವೃದ್ಧಿಪಡಿಸಿದ ಹಂಗೇರಿ ಸಂಜಾತೆ ಅಮೆರಿಕ ಪ್ರಜೆ ಕಟಲಿನ್ ಕರಿಕೊ ಮತ್ತು ಅಮೆರಿಕದ ಡ್ರ್ಯೂ ವೈಸ್‌ಮನ್ ಅವರಿಗೆ ವೈದ್ಯಕೀಯ ಕ್ಷೇತ್ರದ ನೊಬೆಲ್ ಪುರಸ್ಕಾರ ಘೋಷಿಸಲಾಗಿದೆ.

ಕರಿಕೊ, ಹಂಗೇರಿಯ ಸಾಗಾನ್ ವಿಶ್ವವಿದ್ಯಾಲಯ ಮತ್ತು ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ. ವೈಸ್‌ಮನ್, ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ. ಈ ಇಬ್ಬರು ಜೊತೆಯಾಗಿ ಲಸಿಕೆ ಅಭಿವೃದ್ಧಿಗೆ ಸಂಶೋಧನೆ ನಡೆಸಿದ್ದರು.



ಕರಿಕೊ



ವೈಸ್‌ಮನ್

‘ಮನುಷ್ಯನ ರೋಗ ನಿರೋಧಕ ವ್ಯವಸ್ಥೆಯ ಜೊತೆಗೆ ಎಂಆರ್‌ಎನ್‌ಎ ಹೇಗೆ ವರ್ತಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವ ನಮ್ಮ ಮೂಲಭೂತ ಗ್ರಹಿಕೆಯಲ್ಲಿ ಇವರ ಸಂಶೋಧನೆಯು ಕ್ರಾಂತಿಕಾರಕ ಬದಲಾವಣೆ ತಂದಿದೆ. ನಮ್ಮ ಕಾಲದಲ್ಲಿ ಮಾನವ ಸಮುದಾಯವು ಎದುರಿಸಿದ ದೊಡ್ಡ ಬೆದರಿಕೆಯಿಂದ ಹೊರಬರುವುದಕ್ಕಾಗಿ ಈ ಹಿಂದೆಂದೂ ಇಲ್ಲದ ಪ್ರಮಾಣದಲ್ಲಿ ಲಸಿಕೆ ತಯಾರಿಸಲು ಈ ಇಬ್ಬರು ಅಪಾರ ಕೊಡುಗೆ ನೀಡಿದ್ದಾರೆ’ ಎಂದು ಆಯ್ಕೆ ಸಮಿತಿಯು ಹೇಳಿದೆ.

ವೇಳಾಪಟ್ಟಿ
- ಮಂಗಳವಾರ– ಭೌತ ವಿಜ್ಞಾನ
- ಬುಧವಾರ– ರಾಸಾಯನ ವಿಜ್ಞಾನ
- ಗುರುವಾರ– ಸಾಹಿತ್ಯ
- ಶುಕ್ರವಾರ– ಅರ್ಥಶಾಸ್ತ್ರ
- ನೊಬೆಲ್ ಶಾಂತಿ ಪ್ರಶಸ್ತಿ– ಅ.9

5ನೇ ಪುಟ ನೋಡಿ

ಸಹಜ ಸ್ಥಿತಿಯತ್ತ ಶಿವಮೊಗ್ಗ

ಕಟೌಟ್ ತೆರವುಗೊಳಿಸಿದ ಮಹಾನಗರ ಪಾಲಿಕೆ, ನಗರಕ್ಕೆ 144 ಸೆಕ್ಷನ್ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಈದ್ ಮಿಲಾದ್ ಮೆರವಣಿಗೆಯ ವೇಳೆ ಇಲ್ಲಿನ ರಾಗಿಗುಡ್ಡ ಹಾಗೂ ಶಾಂತಿನಗರ ಪ್ರದೇಶಗಳಲ್ಲಿ ಭಾನುವಾರ ಸಂಜೆ ನಡೆದಿದ್ದ ಹಿಂಸಾಚಾರದಿಂದ ತತ್ತರಿಸಿದ್ದ ಶಿವಮೊಗ್ಗ ನಗರ ಸೋಮವಾರ ಸಹಜ ಸ್ಥಿತಿಗೆ ಮರಳಿದೆ.

ಇಲ್ಲಿನ ರಾಗಿಗುಡ್ಡ, ಶಾಂತಿನಗರ ಭಾಗದಲ್ಲಿ ಭಾನುವಾರ ವಿಧಿಸಿದ್ದ ನಿಷೇಧಾಜ್ಞೆಯನ್ನು ಜಿಲ್ಲಾಡಳಿತವು ಬೆಳಿಗ್ಗೆ ಇಡೀ ನಗರಕ್ಕೆ ವಿಸ್ತರಿಸಿತು.

ಗಲಭೆಗೆ ಸಂಬಂಧಿಸಿದಂತೆ ಹಿಂದೂ ಹಾಗೂ ಮುಸ್ಲಿಂ ಸಮುದಾಯದ 60 ಜನರನ್ನು ವಶಕ್ಕೆ ಪಡೆಯಲಾಗಿದೆ. 24 ಪ್ರಕರಣ ದಾಖಲಿಸಲಾಗಿದೆ. ಸಂಸದ ಬಿ.ವೈ.ರಾಘವೇಂದ್ರ, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಕಾಂಗ್ರೆಸ್ ಮುಖಂಡ ಎಚ್.ಎಂ.ಯೋಗೀಶ್ ಆಸ್ಪತ್ರೆಗೆ ತೆರಳಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಶಾಸಕ ಎಸ್.ಎನ್. ಚನ್ನಬಸಪ್ಪ ರಾಗಿಗುಡ್ಡದಲ್ಲಿನ ಕೆಲವು ಮನೆಗಳಿಗೆ ಭೇಟಿ ನೀಡಿದ್ದರು.

ಕಟೌಟ್, ಬ್ಯಾನರ್ ತೆರವು: ‘ರಾಗಿಗುಡ್ಡ ಸೇರಿದಂತೆ ವಿವಿಧೆಡೆ ಅಳವಡಿಸಿದ್ದ ಔರಂಗಜೇಬ್, ಟಿಪ್ಪು ಸುಲ್ತಾನ್ ಕಟೌಟ್ ಹಾಗೂ ತಲ್ವಾರ್‌ನ ಪ್ರತಿಕೃತಿಗಳೇ ಘಟನೆಗೆ ಕಾರಣ. ಪೊಲೀಸರು ಅದಕ್ಕೆ ಅವಕಾಶ ನೀಡಿದ್ದೇಕೆ’ ಎಂದು ಬಿಜೆಪಿ ಮುಖಂಡರು ಪತ್ರಿಕಾಗೋಷ್ಠಿ ನಡೆಸಿ ಪ್ರಶ್ನಿಸಿದ್ದರು.

ಮಹಾನಗರ ಪಾಲಿಕೆಯು ಕಟೌಟ್‌ಗಳ ತೆರವು ಕಾರ್ಯ ಕೈಗೊಂಡಿತು. ಪೊಲೀಸರ ಭದ್ರತೆಯಲ್ಲಿ ಕಟೌಟ್‌ಗಳನ್ನು ತೆರವುಗೊಳಿಸಲಾಯಿತು.



ಶಿವಮೊಗ್ಗದ ಶಾಂತಿ ನಗರದಲ್ಲಿ ಅಳವಡಿಸಿದ್ದ ಕಟೌಟ್‌ಗಳನ್ನು ಮಹಾನಗರ ಪಾಲಿಕೆ ಸಿಬ್ಬಂದಿ ಸೋಮವಾರ ತೆರವುಗೊಳಿಸಿದರು

> **ತೋರಣ ಕಟ್ಟಿ ಸ್ವಾಗತಿಸುವುದನ್ನು ನೋಡಿದ್ದೇವೆ. ಆದರೆ ತಲವಾರಿನ ಪ್ರತಿಕೃತಿಗಳನ್ನು ತೂಗುಹಾಕಿ ಹಬ್ಬಕ್ಕೆ ಸ್ವಾಗತಿಸುವ ದುರ್ದೈವ ನಮ್ಮ ಮುಂದೆ ಬಂದಿದೆ**
> **ಬಿ.ವೈ.ರಾಘವೇಂದ್ರ,** ಸಂಸದ

> **ಗಲಾಟೆ ರಾಗಿಗುಡ್ಡಕ್ಕೆ ಸೀಮಿತವಾಗಿದ್ದರೂ ಕೆಲ ಮಾಧ್ಯಮಗಳಲ್ಲಿ ಅತಿರಂಜಿತವಾಗಿ ತೋರಿಸಲಾಗುತ್ತಿದೆ. ಮಾಧ್ಯಮಗಳು ಸಂಯಮ ವಹಿಸಬೇಕು**
> **ಎನ್.ಗೋಪಿನಾಥ್,** ಶಿವಮೊಗ್ಗ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ

ಸರ್ವಧರ್ಮ ಪ್ರಾರ್ಥನೆ

ಶಿವಮೊಗ್ಗದಲ್ಲಿ ಶಾಂತಿ, ಸೌಹಾರ್ದಕ್ಕಾಗಿ ಪ್ರಾರ್ಥಿಸಿ ಗಾಂಧಿ ಪಾರ್ಕ್‌ನಲ್ಲಿರುವ ಮಹಾತ್ಮ ಗಾಂಧಿ ಅವರ ಪ್ರತಿಮೆಗೆ ಸೋಮವಾರ ಸರ್ವಧರ್ಮ ಗುರುಗಳ ನೇತೃತ್ವದಲ್ಲಿ ಹೂವು ಅರ್ಪಿಸಿ ಪ್ರಾರ್ಥನೆ ಸಲ್ಲಿಸಲಾಯಿತು.

ವಿನಯ್ ಗುರೂಜಿ, ಬಸವ ಮರುಳಸಿದ್ಧ ಸ್ವಾಮೀಜಿ, ಮೌಲ್ವಿ ಅಬ್ದುಲ್ ಲತೀಫ್ ಸಾದಿ, ಪಾದ್ರಿ ಕ್ರಿಫರ್ಡ್ ರೋಶನ್ ಪಿಂಟೋ ನೇತೃತ್ವದಲ್ಲಿ ಪ್ರಾರ್ಥನೆ ನಡೆಯಿತು. ವಕೀಲ ಕೆ.ಪಿ.ಶ್ರೀಪಾಲ, ಕಿರಣ್‌ಕುಮಾರ್, ಲಿಯಾಖತ್ ಇದ್ದರು.

‘ಕಾನೂನುಬಾಹಿರ ಚಟುವಟಿಕೆ ಸಹಿಸಲ್ಲ’

ಬೆಂಗಳೂರು: ‘ಯಾವುದೇ ಧಾರ್ಮಿಕ ಕಾರ್ಯಕ್ರಮಕ್ಕೆ ಧಕ್ಕೆ ತರುವುದು, ಕಲ್ಲು ತೂರುವುದು ಕಾನೂನುಬಾಹಿರ. ಇಂಥ ಚಟುವಟಿಕೆಯನ್ನು ಸಹಿಸುವುದಿಲ್ಲ ಮತ್ತು ಹತ್ತಿಕ್ಕುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಶಿವಮೊಗ್ಗದ ರಾಗಿಗುಡ್ಡದಲ್ಲಿ ಈದ್ ಮಿಲಾದ್ ಮೆರವಣಿಗೆಯಲ್ಲಿ ದುಷ್ಕರ್ಮಿಗಳು ಕಲ್ಲು ಹೊಡೆದಿದ್ದಾರೆ. ಪೊಲೀಸರ ಮೇಲೂ ಕಲ್ಲು ಎಸೆದಿದ್ದು, ಅನಿವಾರ್ಯವಾಗಿ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ’ ಎಂದರು.

‘ಗಲಾಟೆಗೆ ಕಾರಣರಾದವರನ್ನು ಬಂಧಿಸಲಾಗಿದ್ದು, ಅವರ ಮೇಲೆ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ. ಶಿವಮೊಗ್ಗ ಸಂಪೂರ್ಣ ನಿಯಂತ್ರಣದಲ್ಲಿದೆ. ಪೊಲೀಸರು ಸೂಕ್ತ ಕ್ರಮ ಕೈಗೊಂಡಿದ್ದು, ಶಾಂತಿ ನೆಲೆಸಿದೆ’ ಎಂದರು.

ಕಠಿಣ ಕ್ರಮ– ಡಿಕೆಶಿ: ‘ಕಾನೂನು ಕೈಗೆತ್ತಿಕೊಳ್ಳುವ ಯಾರೊಬ್ಬರನ್ನು ನಾವು ಸಹಿಸುವುದಿಲ್ಲ. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದು ಸರ್ಕಾರದ ಆದ್ಯತೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಹಿಂಸಾಚಾರದ ಹಿಂದೆ ಯಾರೇ ಇದ್ದರೂ ಕಠಿಣ ಕ್ರಮ ಕೈಗೊಳ್ಳಲಾಗುವುದು. ಪ್ರಚೋದನೆ ನೀಡಲು, ಕಲ್ಲು ತೂರಾಟ ಮಾಡಲು ಮುಂದಾಗಬಾರದು. ಇದಕ್ಕೆ ಸರ್ಕಾರ ಅವಕಾಶ ನೀಡುವುದಿಲ್ಲ. ಕಾನೂನು ಎಲ್ಲರಿಗೂ ಒಂದೇ’ ಎಂದರು.



ರಂಗೋಲಿಯಲ್ಲಿ ಮೂಡಿದ ಬಾಪು

ಬೆಂಗಳೂರಿನ ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ಕಲಾವಿದ ಅಕ್ಷಯ್ ಜಾಲಿಹಾಳ ಸೋಮವಾರ ರಂಗೋಲಿ ಮೂಲಕ ಮಹಾತ್ಮ ಗಾಂಧಿ ಅವರ ಚಿತ್ರ ಬಿಡಿಸಿದರು ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ದನ್

ನಾಂದೇಡ್ ಆಸ್ಪತ್ರೆಯಲ್ಲಿ 24 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ನಾಂದೇಡ್‌ನ ಸರ್ಕಾರಿ ಆಸ್ಪತ್ರೆಯಲ್ಲಿ 12 ನವಜಾತ ಶಿಶುಗಳು ಸೇರಿದಂತೆ 24 ಜನರು, 24 ತಾಸಿನಲ್ಲಿ ಮೃತಪಟ್ಟಿದ್ದಾರೆ.


ನಾಂದೇಡ್‌ನ ಡಾ.ಶಂಕರರಾವ್ ಚವಾಣ್ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಔಷಧಿಗಳ ಕೊರತೆಯಿಂದ ಈ ಘಟನೆ ನಡೆದಿದೆ ಎನ್ನಲಾಗಿದೆ.

‘ನಾಲ್ಕು ದಿನದ ಒಳಗಿನ 12 ನವಜಾತ ಶಿಶುಗಳು ಮೃತಪಟ್ಟಿವೆ. ತಲಾ ಆರು ಮಂದಿ ಪುರುಷರು ಹಾಗೂ ಮಹಿಳೆಯರು ಕೂಡ ಸಾವಿಗೀಡಾಗಿದ್ದಾರೆ. ಇವರಲ್ಲಿ ಹಲವರು ಹಾವಿನ ಕಡಿತಕ್ಕೆ ಚಿಕಿತ್ಸೆ ಪಡೆಯಲು ಬಂದಿದ್ದರು’ ಎಂದು ಆಸ್ಪತ್ರೆಯ ಡಾ.ಶ್ಯಾಮರಾವ್ ವಾಕೋಡೆ ತಿಳಿಸಿದ್ದಾರೆ.

500 ರೋಗಿಗಳಿಗೆ ಚಿಕಿತ್ಸೆ ನೀಡುವಷ್ಟು ಸಾಮರ್ಥ್ಯವನ್ನು ಈ ಆಸ್ಪತ್ರೆ ಹೊಂದಿದೆ. ಆದರೆ, ಇಲ್ಲಿ 1,200ಕ್ಕೂ ಅಧಿಕ ರೋಗಿಗಳು ಇದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಚರಕ’ದೊಂದಿಗೆ ಬೆರೆತ ಶಕ್ತಿಧಾಮ: ನಟ ಶಿವರಾಜ್‌ಕುಮಾರ್ ಭಾವುಕ

ನೂಲು ತೆಗೆದ ಮಕ್ಕಳಿಗೆ ಖಾದಿ ಉಡುಗೊರೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರ ‘ಶಕ್ತಿಧಾಮ’ದ ಮಕ್ಕಳು, ಚರಕದಿಂದ ತಾವೇ ತೆಗೆದಿದ್ದ ನೂಲು ಬಳಸಿ ತಯಾರಿಸಿದ ಖಾದಿ ಬಟ್ಟೆಯನ್ನು ಪಡೆಯುವ ಮೂಲಕ ಗಾಂಧಿ ಜಯಂತಿಯನ್ನು ಸೋಮವಾರ ವಿಶಿಷ್ಟವಾಗಿ ಆಚರಿಸಿದರು.

9ನೇ ತರಗತಿಯ 25 ಮಕ್ಕಳು ನಾಲ್ಕು ತಿಂಗಳಿಂದ ಚರಕದಿಂದ 650 ‘ಲಡಿ’ (ದಾರದ ಉಂಡೆ) ತೆಗೆದಿದ್ದರು. ಅದನ್ನು ಬಳಸಿ ಮೇಲುಕೋಟೆಯ ನೇಕಾರರು 320 ಮೀಟರ್ ಬಟ್ಟೆ ತಯಾರಿಸಿದ್ದರು. ಶಕ್ತಿಧಾಮದ ಪೋಷಕರೂ ಆದ ನಟ ಶಿವರಾಜ್‌ಕುಮಾರ್ ಮಕ್ಕಳು ತೆಗೆದಿದ್ದ ನೂಲಿನ ‘ಖಾದಿ’ಯನ್ನು ಸ್ವೀಕರಿಸಿ ಭಾವುಕರಾದರು.

ಓದಿನ ಜೊತೆಗೆ ನಿತ್ಯವೂ ಚರಕ ತಿರುಗಿಸುತ್ತಾ ತೆಗೆದಿದ್ದ ನೂಲು ವಸ್ತ್ರವಾಗಿ ದೊರೆತ ಖುಷಿಯಲ್ಲಿ ಮಕ್ಕಳಿದ್ದರು. ಅವರ ಮಾತುಗಳಲ್ಲಿ ಗಾಂಧಿಯ ನುಡಿಮುತ್ತುಗಳು ತುಂಬಿದ್ದವು. ಇದು ಗಣ್ಯರು ಹಾಗೂ ಪ್ರೇಕ್ಷಕರಲ್ಲಿ ಅಚ್ಚರಿ ಮೂಡಿಸಿದರೆ, ಸಹಪಾಠಿಗಳು ಚಪ್ಪಾಳೆಯ ಮಳೆಗರೆದರು. ಮಕ್ಕಳು ತೆಗೆದ ನೂಲು ಬಳಸಿ ನೇಕಾರರು ಸಿದ್ಧಪಡಿಸಿರುವ ಖಾದಿ ಬಟ್ಟೆಯನ್ನು ಉಡುಪಾಗಿ ಸಿದ್ಧಪಡಿಸಿಕೊಡಲು ಉದ್ದೇಶಿಸಲಾಗಿದೆ.

ಅನಿಸಿಕೆ ಹಂಚಿಕೊಂಡ ವಿದ್ಯಾರ್ಥಿನಿ ಭವ್ಯಾ, ‘ನೂಲುವಾಗ ನೂಲು ಪದೇ ಪದೇ ತುಂಡಾಗುತ್ತಿತ್ತು. ಇದರಿಂದ ಕೋಪ ಬರುತ್ತಿತ್ತು. ಬಿಸಾಕುವಷ್ಟು ಸಿಟ್ಟು ಆಗಿತ್ತು. ಮೂರನೇ ದಿನ ಕೋಪ ಕಡಿಮೆಯಾಯಿತು. ಚರಕದಿಂದ ನೂಲು ತೆಗೆಯುವುದು ನನ್ನಲ್ಲಿ ತಾಳ್ಮೆ ಕಲಿಸಿದೆ. ಈಗ ನೂಲನ್ನು ಚೆನ್ನಾಗಿ ತೆಗೆಯುತ್ತಿದ್ದೇನೆ. ಚರಕವೆಂದರೆ ಇಷ್ಟವಾಗಿದೆ’ ಎಂದು ಹೇಳಿದರು.

‘ನೂಲು ತೆಗೆಯುವಾಗ ಜಾದೂ ಮಾಡುತ್ತಿದ್ದಾರಾ ಎನಿಸುತ್ತಿತ್ತು. ನಮ್ಮ ನೂಲನ್ನು ಮೇಲುಕೋಟೆಯ ನೇಕಾರರು ಬಟ್ಟೆ ಮಾಡಿಕೊಟ್ಟಾಗ ಆದ ಖುಷಿ ಇನ್ನೆಲ್ಲೂ ಸಿಕ್ಕಿಲ್ಲ’ ಎಂದವರು ವಿದ್ಯಾರ್ಥಿನಿ ಸಾನಿಯಾ.

ವಿದ್ಯಾರ್ಥಿನಿ ಝುಲೇಕಾ ಮಾತನಾಡಿ, ‘ಶ್ರಮಜೀವಿಗಳಾದ ಹತ್ತಿ ಬೆಳೆಯುವ ರೈತ, ನೂಲು ತೆಗೆಯುವ ನೂಲುಗಾರ, ನೇಯುವ ನೇಕಾರ ಸೇರಿದಂತೆ ಶ್ರಮಿಕರ ಮೇಲೆ ಗೌರವ ಮೂಡಿದೆ. ನಾನೂ ಉದ್ಯಮ ಸ್ಥಾಪಿಸಬೇಕೆಂಬ ಆಸೆ ಇದೆ’ ಎಂದರು.

ನಾನೂ ನೂಲುವೆ: ‘ಕಲಾವಿದ ಕೆ.ಜೆ. ಸಚ್ಚಿದಾನಂದ ಚರಕದ ಮೂಲಕ ನಮ್ಮ ಮಕ್ಕಳಿಗೆ ಒಳ್ಳೆಯ ದಾರಿ ತೋರಿದ್ದಾರೆ. ನಾನೂ ಚರಕದಿಂದ ನೂಲು ತೆಗೆಯಲು ನಿತ್ಯ ಒಂದು ಗಂಟೆ ಮೀಸಲಿಡಲು ನಿರ್ಧರಿಸಿದ್ದೇನೆ’ ಎಂದು ನಟ ಶಿವರಾಜ್ ಕುಮಾರ್ ಹೇಳಿದರು

‘ಗಾಂಧಿ ಚರಕ ನೆನಪಷ್ಟೇ ಆಗಬಾರದು. ಸ್ವಾವಲಂಬನೆಯ ಸಂಕೇತವಾದ ಈ ಪರಂಪರೆ ಉಳಿಸಬೇಕು. ತಂದೆ– ತಾಯಿ ಶಕ್ತಿಧಾಮದ ಮೇಲಿಟ್ಟಿದ್ದ ಕನಸು, ಬೇರೆ ರೂಪವನ್ನೇ ಇಂದು ಪಡೆದಿದೆ. ಮಕ್ಕಳ ಆತ್ಮವಿಶ್ವಾಸ, ಕೌಶಲವನ್ನು ಪರಿಚಯಿಸಿದೆ’ ಎಂದು ಹೇಳಿದರು.

5ನೇ ಪುಟ ನೋಡಿ



ಮೈಸೂರಿನ ಶಕ್ತಿಧಾಮದ ಮಕ್ಕಳು ನೂಲಿದ್ದ ‘ಖಾದಿ’ಯನ್ನು ಸೋಮವಾರ ಗಾಂಧಿಜಯಂತಿ ಕಾರ್ಯಕ್ರಮದಲ್ಲಿ ನಟ ಶಿವರಾಜ್ ಕುಮಾರ್ ಸ್ವೀಕರಿಸಿದರು. ಸೂಫಿ ಗಾಯಕ ಮೀರ್ ಮುಖ್ತಿಯಾರ್ ಆಲಿ, ಗೀತಾ ಶಿವರಾಜ್‌ಕುಮಾರ್, ನಿರ್ದೇಶಕಿ ಮಂಜುಳಾ, ಕಲಾವಿದ ಕೆ.ಜೆ.ಸಚ್ಚಿದಾನಂದ ಇದ್ದರು

ಮುಖ್ಯಾಂಶಗಳು
- 650 ‘ಲಡಿ’ಯಿಂದ 320 ಮೀಟರ್ ಬಟ್ಟೆ
- ಮಕ್ಕಳ ಸಾಧನೆಗೆ ಶಿವರಾಜ್ ಕುಮಾರ್ ಪ್ರಶಂಸೆ
- ನಿತ್ಯ ಒಂದು ಗಂಟೆ ನೂಲಲು ನಿರ್ಧಾರ

> **ನೇಯ್ಗೆಯಿಂದ ಸಂಪಾದನೆ ಆಗುತ್ತದೆ ಎಂಬುದಕ್ಕಿಂತ ನೋವು ದೂರಾಗುತ್ತದೆ. ನಾವು ತೆಗೆದ ನೂಲು ಮತ್ತೊಬ್ಬರಿಗೆ ಉದ್ಯೋಗ ನೀಡುತ್ತದೆ**
> **ಶಿವರಾಜ್‌ಕುಮಾರ್,** ನಟ

> **ಗಾಂಧೀಜಿ ಮಾಡಿದ್ದ ಕೆಲಸವನ್ನು ನಾನು ಮಾಡುತ್ತಿದ್ದೇನೆಂಬ ಖುಷಿ ಇದೆ. ಮನೆಯವರಿಗೂ ಚರಕದಿಂದ ನೂಲುವುದನ್ನು ಕಲಿಸಿಕೊಡುವೆ**
> **ಪ್ರಿಯಾಂಕಾ,** ವಿದ್ಯಾರ್ಥಿನಿ

ಮೊಬೈಲ್ ಡೌನ್‌ಲೋಡ್ ವೇಗ: 42ನೇ ಸ್ಥಾನಕ್ಕೆ ಭಾರತ



ನವದೆಹಲಿ (ಪಿಟಿಐ): 5ಜಿ ಸೇವೆಗಳು ಆರಂಭ ಆದ ಬಳಿಕ ಭಾರತದಲ್ಲಿ ಮೊಬೈಲ್ ಡೌನ್‌ಲೋಡ್ ವೇಗವು ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡಿದೆ. ‘ಸ್ಪೀಡ್‌ಟೆಸ್ಟ್ ಗ್ಲೋಬಲ್ ಇಂಡೆಕ್ಸ್’ನಲ್ಲಿ ಭಾರತವು 119ನೇ ಸ್ಥಾನದಿಂದ 42ನೇ ಸ್ಥಾನಕ್ಕೆ ಏರಿಕೆ ಕಂಡಿದೆ ಎಂದು ಓಕ್ಲಾ ಕಂಪನಿಯು ಹೇಳಿದೆ.

ಭಾರತದಲ್ಲಿ 5ಜಿ ಬಳಕೆಗೆ ಬಂದ ಬಳಿಕ ಮೊಬೈಲ್ ಡೌನ್‌ಲೋಡ್ ವೇಗವು 3.59 ಪಟ್ಟು ಏರಿಕೆ ಆಗಿದೆ. 2022ರ ಸೆಪ್ಟೆಂಬರ್‌ನಲ್ಲಿ 13.87 ಎಂಬಿಪಿಎಸ್ ಇದ್ದ ಡೌನ್‌ಲೋಡ್ ವೇಗವು 2023ರ ಆಗಸ್ಟ್‌ನಲ್ಲಿ 50.21 ಎಂಬಿಪಿಎಸ್‌ಗೆ ಏರಿದೆ ಎಂದು ಅದು ತಿಳಿಸಿದೆ.

speedtest.net ಮೂಲಕ ಮೊಬೈಲ್ ಇಂಟರ್ನೆಟ್ ವೇಗದ ಮಾಹಿತಿ ನೀಡುವ ಮತ್ತು ಇಂಟರ್ನೆಟ್ ಬಳಕೆಗೆ ಸಂಬಂಧಿಸಿದಂತೆ ಉಚಿತವಾಗಿ ವಿಶ್ಲೇಷಣೆಗಳನ್ನು ನೀಡುವ ಕಂಪನಿ ಇದಾಗಿದೆ.

ಮೊಬೈಲ್ ಡೌನ್‌ಲೋಡ್ ವೇಗದಲ್ಲಿ ನೆರೆಯ ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಪಾಕಿಸ್ತಾನವನ್ನಷ್ಟೇ ಅಲ್ಲದೆ, ಮೆಕ್ಸಿಕೊ (90) ಟರ್ಕಿ (68), ಬ್ರಿಟನ್ (62), ಜಪಾನ್ (58), ಬ್ರೆಜಿಲ್ (50) ಮತ್ತು ದಕ್ಷಿಣ ಆಫ್ರಿಕಾ (48) ದೇಶಗಳನ್ನು ಸಹ ಭಾರತ ಹಿಂದಿಕ್ಕಿದೆ ಎಂದು ತಿಳಿಸಿದೆ.

ರಿಲಯನ್ಸ್ ಜಿಯೊ ಮತ್ತು ಭಾರ್ತಿ ಏರ್‌ಟೆಲ್ ಕಂಪನಿಗಳು 5ಜಿ ಸೇವೆಗಳಿಗೆ ಚಾಲನೆ ನೀಡಿದ್ದು, 5ಜಿ ಬಳಕೆದಾರರ ಸಂಖ್ಯೆ ಹೆಚ್ಚಾಗುತ್ತಿದೆ.

ಫೈಬರ್ ಮೂಲಕ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸುವುದು ದುಬಾರಿ ಅಥವಾ ಅಸಾಧ್ಯ ಇರುವ ಸ್ಥಳಗಳಲ್ಲಿ 5ಜಿ ಫಿಕ್ಸೆಡ್ ವೈರ್‌ಲೆಸ್ ಅಕ್ಸೆಸ್ (ಎಫ್‌ಡಬ್ಲ್ಯುಎ) ಸೇವೆಗಳನ್ನು ಆರಂಭಿಸಲಾಗಿದೆ ಎಂದೂ ಹೇಳಿದೆ.

ಧಾರವಾಡದ ಗರಗ ಕ್ಷೇತ್ರೀಯ ಸೇವಾ ಸಂಘಕ್ಕೆ 'ಮಹಾತ್ಮಗಾಂಧಿ ಸೇವಾ ಪ್ರಶಸ್ತಿ– ಕರ್ನಾಟಕ 2023' ಪ್ರದಾನ

ಗೋಡ್ಸೆ ಪೂಜಿಸುವವರ ಬಗ್ಗೆ ಎಚ್ಚರ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾತ್ಮಗಾಂಧಿ ಅವರನ್ನು ಕೊಂದ, ಮತಾಂಧ ನಾಥೂರಾಮ್ ಗೋಡ್ಸೆ ಅವನನ್ನು ಪೂಜಿಸುವ, ಆರಾಧಿಸುವ ಜನರಿದ್ದಾರೆ. ಅಂತಹವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸೋಮವಾರ ಮಾತನಾಡಿದ ಅವರು, 'ಗಾಂಧೀಜಿ ವಿಚಾರಧಾರೆಗಳಂತೆ ನಮ್ಮ ಸರ್ಕಾರ ನಡೆಯುತ್ತಿದೆ. ಅವರ ಪ್ರೇರಣೆಯಿಂದಲೇ ಶಕ್ತಿ, ಗೃಹಲಕ್ಷ್ಮಿ ಹಾಗೂ ಅನ್ನಭಾಗ್ಯ ಯೋಜನೆಗಳನ್ನು ಸರ್ಕಾರ ಜಾರಿಗೆ ತಂದಿದ್ದೇನೆ. ಈ ಮೂಲಕ ಮಹಿಳಾ ಸಬಲೀಕರಣದತ್ತ ಹೆಜ್ಜೆ ಇರಿಸಲಾಗಿದೆ' ಎಂದರು.

'2014 ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ಗಾಂಧೀಜಿ ತತ್ವಾದರ್ಶಗಳ ಹಾದಿಯಲ್ಲಿ ನಡೆಯುವ ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳಿಗೆ ಮಹಾತ್ಮಗಾಂಧಿ ಪ್ರಶಸ್ತಿ ನೀಡಲು ಆದೇಶಿಸಲಾಗಿತ್ತು. ಇಡೀ ದೇಶಕ್ಕೆ ರಾಷ್ಟ್ರಧ್ವಜವನ್ನು ಪೂರೈಸುವ ಧಾರವಾಡದ ಗರಗ ಕ್ಷೇತ್ರೀಯ ಸೇವಾ ಸಂಘಕ್ಕೆ ಈ ಬಾರಿಯ ಪ್ರಶಸ್ತಿಗೆ ಪಾತ್ರವಾಗಿರುವುದು ಹೆಮ್ಮೆಯ ಸಂಗತಿ' ಎಂದರು.

'ಲಾಲ್‌ಬಹದ್ದೂರ್ ಶಾಸ್ತ್ರಿ ಅವರು ದೇಶ ಕಂಡ ಅತ್ಯಂತ ಪ್ರಾಮಾಣಿಕ ರಾಜಕಾರಣಿ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದ ಅವರು, ಗಾಂಧಿವಾದಿಯಾಗಿ ಬದುಕಿದ್ದವರು' ಎಂದು ಹೇಳಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಧಾರವಾಡದ ಗರಗ ಕ್ಷೇತ್ರೀಯ ಸೇವಾ ಸಂಘದ ಪದಾಧಿಕಾರಿಗಳಿಗೆ 'ಮಹಾತ್ಮಗಾಂಧಿ ಸೇವಾ ಪ್ರಶಸ್ತಿ– ಕರ್ನಾಟಕ 2023'ಯನ್ನು ಸೋಮವಾರ ಪ್ರದಾನ ಮಾಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್, ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ, ನಿವೃತ್ತ ನ್ಯಾಯಮೂರ್ತಿ ಬಿ. ವೀರಪ್ಪ ಇದ್ದರು

ಖಾದಿ ಉತ್ಪನ್ನ ಮತ್ತು ಮಾರಾಟ ಹಾಗೂ ರಾಷ್ಟ್ರಧ್ವಜ ತಯಾರಿಕೆಯಲ್ಲಿ ಏಳು ದಶಕಗಳಿಂದ ತೊಡಗಿಸಿಕೊಂಡಿರುವ ಗರಗ ಕ್ಷೇತ್ರೀಯ ಸೇವಾ ಸಂಘವು ಅರ್ಜಿ ಸಲ್ಲಿಸದೇ ಪ್ರಶಸ್ತಿಗೆ ಆಯ್ಕೆಯಾಗಿದೆ ಎಂದು ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ, ನಿವೃತ್ತ ನ್ಯಾಯಮೂರ್ತಿ ಬಿ. ವೀರಪ್ಪ ತಿಳಿಸಿದರು.

ಮನವಿ: ಗರಗ ಕ್ಷೇತ್ರೀಯ ಸೇವಾ ಸಂಘದ ವತಿಯಿಂದ ಮಾತನಾಡಿದ ಬಸವಪ್ರಭು ಹೊಸಕೇರಿ ಮಾತನಾಡಿ 'ಒಂದು ಮೀಟರ್ ಬಟ್ಟೆ ನೂಲುವವರಿಗೆ 25 ಪೈಸೆ ಹಾಗೂ ಒಂದು ಲಡಿಗೆ 10 ಪೈಸೆ ಇದ್ದ ಪ್ರೋತ್ಸಾಹಧನವನ್ನು ಸಿದ್ದರಾಮಯ್ಯ ಅವರು ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ, ಕ್ರಮವಾಗಿ ₹7 ಹಾಗೂ ₹3ಗೆ ಹೆಚ್ಚಿಸಿದ್ದರು. ಇದರಿಂದ ನೂಲುವವರಿಗೆ ಪ್ರಯೋಜನವಾಗಿತ್ತು' ಎಂದರು.

'ಸಿದ್ದರಾಮಯ್ಯ ಅವರು ಪ್ರೋತ್ಸಾಹಧನ ಹೆಚ್ಚಿಸಿದ ಆ ಅವಧಿಯಿಂದ ಈ ಅವಧಿಯವರೆಗೆ ಸಾಕಷ್ಟು ಬೆಲೆ ಏರಿಕೆ ಆಗಿದೆ. ಆದ್ದರಿಂದ ಈ ಪ್ರೋತ್ಸಾಹ ಧನವನ್ನು ಒಂದು ಮೀಟರ್ ಬಟ್ಟೆ ನೂಲುವವರಿಗೆ ₹10 ಹಾಗೂ ಒಂದು ಲಡಿಗೆ ₹5ಗೆ ಹೆಚ್ಚಿಸಬೇಕು' ಎಂದು ಮನವಿ ಮಾಡಿದರು.

ಗರಗ ಕ್ಷೇತ್ರೀಯ ಸೇವಾ ಸಂಘದ ವತಿಯಿಂದ ಧ್ವಜದ ಸ್ಮರಣಿಕೆ ಹಾಗೂ ಧಾರವಾಡ ಪೇಢಾವನ್ನು ಸಿದ್ದರಾಮಯ್ಯ ಅವರಿಗೆ ನೀಡಲಾಯಿತು. ವೇದಿಕೆಯಲ್ಲೇ ಮುಖ್ಯಮಂತ್ರಿ ಪೇಢಾವನ್ನು ಸವಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಎನ್. ಜಯರಾಮ್, ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಇದ್ದರು.

'ಗ್ರಾಮ ಸ್ವರಾಜ್ಯದ ಸರಳ ಆರ್ಥಿಕ ನೀತಿ ಗಾಂಧೀಜಿ ಕೊಡುಗೆ'

ಬೆಂಗಳೂರು: 'ಗ್ರಾಮಗಳ ಉದ್ಧಾರ ಮತ್ತು ಅಭಿವೃದ್ಧಿಯೇ ದೇಶದ ನಿಜವಾದ ಅಭಿವೃದ್ಧಿ ಎನ್ನುವ ಸರಳ ಮತ್ತು ವೈಜ್ಞಾನಿಕ ಆರ್ಥಿಕ ನೀತಿಯನ್ನು ನಮಗೆ ಕೊಟ್ಟವರು ಮಹಾತ್ಮಾ ಗಾಂಧೀಜಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಹಾತ್ಮಾ ಗಾಂಧೀಜಿ ಮತ್ತು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನದ ಅಂಗವಾಗಿ ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಹಾತ್ಮಗಾಂಧಿ ಅಪರೂಪದ ಸಂತ ಆಗಿದ್ದರು. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಘನತೆ ಮತ್ತು ಗೌರವದಿಂದ ಬಾಳಬೇಕು ಎನ್ನುವುದು ಅವರ ಗುರಿಯಾಗಿತ್ತು. ನುಡಿದಂತೆ ನಡೆಯುವುದು ಗಾಂಧಿ ಅವರ ಬದುಕಾಗಿತ್ತು' ಎಂದರು.

'ಲಾಲ್ ಬಹುದ್ದೂರ್ ಶಾಸ್ತ್ರಿ ಅವರು ಮಹಾತ್ಮಗಾಂಧಿಯವರ ಸರಳತೆ ಮತ್ತು ಆದರ್ಶಗಳನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡ ಅಪ್ಪಟ ಪ್ರಾಮಾಣಿಕ ನಾಯಕರಾಗಿದ್ದರು. ರೈಲು ಅಪಘಾತದ ಹೊಣೆ ಹೊತ್ತು ರಾಜೀನಾಮೆ ನೀಡಿದ ಆದರ್ಶ ನಾಯಕರಾಗಿದ್ದರು. ಹೀಗಾಗಿ ಗಾಂಧಿ ಮತ್ತು ಶಾಸ್ತ್ರಿ ಇಬ್ಬರೂ ನಮಗೆ ಆದರ್ಶಪ್ರಾಯರು' ಎಂದು ಮೆಚ್ಚುಗೆ ಸೂಚಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ಗ್ರಾಮ ಸ್ವರಾಜ್ಯ ಗಾಂಧೀಜಿ ಕೊಟ್ಟ ದೊಡ್ಡ ಕೊಡುಗೆ. ಕಾಂಗ್ರೆಸ್ ಪಕ್ಷದ ನಾಯಕರು, ಕಾರ್ಯಕರ್ತರು ಸ್ಥಳೀಯ ಮಟ್ಟದಲ್ಲಿ ನಾಯಕತ್ವ ಬೆಳೆಸಿಕೊಳ್ಳಲು ಸಿದ್ಧರಾಗಬೇಕು. ಶಾಸಕರಾಗುವ ಮುನ್ನ ಸ್ಥಳೀಯ ಮಟ್ಟದಲ್ಲಿ ನಾಯಕರಾಗಬೇಕು.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ವಿಧಾನ ಪರಿಷತ್ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಇದ್ದರು.

ಸುದ್ದಿ 2 ನಿಮಿಷ

'ಗಾಂಧಿಗೆ ಹಿಂದುತ್ವದ ಬಗ್ಗೆ ಗೌರವ'

ಬೆಂಗಳೂರು: ಮಹಾತ್ಮಗಾಂಧಿ ಅವರಿಗೆ ಹಿಂದುತ್ವದ ಬಗ್ಗೆ ಅಪಾರ ಗೌರವ ಇತ್ತು. ಆದರೆ, ಕಾಂಗ್ರೆಸ್ ಪಕ್ಷ ಹಿಂದುತ್ವ ಎಂದರೆ ಕೋಮುವಾದ ಎಂದು ಅಪಪ್ರಚಾರ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್‌.ರವಿಕುಮಾರ್ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸೋಮವಾರ ಮಹಾತ್ಮಗಾಂಧೀಜಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಗಾಂಧೀಜಿ ಕೊನೆಯುಸಿರೆಳೆಯುವ ಸಂದರ್ಭದಲ್ಲಿ ಹೇರಾಮ್ ಎಂದು ಸಂಬೋಧಿಸಿ ಜೀವ ತ್ಯಾಗ ಮಾಡಿದರು. ಆದರೆ, ಇದೇ ಕಾಂಗ್ರೆಸ್ ಪಕ್ಷದವರು ಶ್ರೀರಾಮನಿಗೆ ವಿರೋಧ ವ್ಯಕ್ತಪಡಿಸಿದರು. ಹೀಗಾಗಿ ಕಾಂಗ್ರೆಸ್ ಪಕ್ಷವೇ ಗಾಂಧೀಜಿಯವರ ತತ್ವ ಸಿದ್ಧಾಂತವನ್ನು ವಿರೋಧಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಅಲ್ಲದೇ, ಗಾಂಧೀಜಿ ಮದ್ಯಪಾನದ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದರು. ಆದರೆ, ಕಾಂಗ್ರೆಸ್ ಸರ್ಕಾರವು ಪ್ರತಿ ಪಂಚಾಯಿತಿಗೆ ಒಂದು ಮದ್ಯದಂಗಡಿ ತೆರೆಯಲು ಹೊರಟಿರುವುದು ದುರಂತ ಅಲ್ಲವೇ? ಇದರಿಂದ ಗ್ರಾಮಗಳು ರಾಮರಾಜ್ಯವಾಗಲು ಸಾಧ್ಯವೇ ಎಂದೂ ಪ್ರಶ್ನಿಸಿದರು.

ಗಾಂಧಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಸತ್ಯ ಮತ್ತು ಅಹಿಂಸೆ ಧ್ಯೇಯದೊಂದಿಗೆ ಅವರ ಚಿಂತನೆಗಳು ಇಂದು ಇಡೀ ಜಗತ್ತಿಗೆ ಸ್ಫೂರ್ತಿ ಮತ್ತು ಪ್ರೇರಣೆಯಾಗಿವೆ. ಗಾಂಧೀಜಿಯವರ ಕಂಡ ಕನಸು ನನಸು ಮಾಡಲು ಪ್ರಧಾನಿ ಮೋದಿಯವರು ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದೂ ಹೇಳಿದರು.

ನವೆಂಬರ್‌ನಲ್ಲಿ ಕಾರ್ಯಕರ್ತರ ಸಮಾವೇಶ: ಸೋಮಣ್ಣ



ಬೆಂಗಳೂರು: 'ನವೆಂಬರ್‌ನಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಪಕ್ಷದ ಕಾರ್ಯಕರ್ತರ ಸಮಾವೇಶ ನಡೆಸಿ, ಅವರ ಅಭಿಪ್ರಾಯ ಪಡೆದು ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ. ಕಾರ್ಯಕರ್ತರ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತೇನೆ' ಎಂದು ಮಾಜಿ ಸಚಿವ ವಿ. ಸೋಮಣ್ಣ ಹೇಳಿದರು.

ವಿಜಯನಗರದ ತಮ್ಮ ಕಚೇರಿಯಲ್ಲಿ ಸೋಮವಾರ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿಯಲ್ಲಿ ಮಾತನಾಡಿದ ಅವರು,'ನಾನು ಪಕ್ಷದ ಶಿಸ್ತಿನ ಸಿಪಾಯಿ. ರಾಷ್ಟ್ರೀಯ ನಾಯಕರ ಆದೇಶ ಮೇರೆಗೆ ಬೆಂಗಳೂರು ನಗರದಿಂದ ಹೊರಗಡೆ ಸ್ಪರ್ಧಿಸುವಂತಾಯಿತು. ಇಂದು ನನಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸುವುದು ಪಕ್ಷದ ಹಿರಿಯ ನಾಯಕರ ಕರ್ತವ್ಯ' ಎಂದರು.

'ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿಯವರು ದೇಶ ಕಂಡ ಅಮೂಲ್ಯ ರತ್ನಗಳು' ಎಂದರು.

ರಾಜ್ಯ ಬಿಜೆಪಿ ಯುವ ಮುಖಂಡ ಡಾ.ಅರುಣ್ ಸೋಮಣ್ಣ, ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಮಾಜಿ ಮಹಾನಗರ ಪಾಲಿಕೆ ಸದಸ್ಯರಾದ ಮೋಹನ್ ಕುಮಾರ್, ದಾಸೇಗೌಡ, ರೂಪಲಿಂಗೇಶ್ವರ್ ಪಲ್ಲವಿ ಚನ್ನಪ್ಪ, ರಾಜೇಶ್ವರಿ, ಬಿಜೆಪಿ ಮುಖಂಡರಾದ ಸಿ.ಎಂ.ರಾಜಪ್ಪ, ಕಿಟ್ಟಿ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರು ಇದ್ದರು.

ನಗರದಲ್ಲಿ ಇಂದು

'ಎಂಎನ್‌ಡಿ, ಎಎಲ್‌ಎಸ್' ಕಾಯಿಲೆ ಬಗ್ಗೆ ಉಚಿತ ಸಮಾಲೋಚನೆ ಶಿಬಿರ: ಅತಿಥಿಗಳು: ಡಾ. ವೆಂಕಟರಮಣ ಎನ್‌. ಕೆ., ಡಾ. ಶ್ಯಾಮ್ ನಾರಂಗ್, ವಸಂತ್ ರಾವ್ ಯು.ಎ., ಆಯೋಜನೆ ಮತ್ತು ಸ್ಥಳ: ಬ್ರೈನ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಜಯನಗರ, ಬೆಳಿಗ್ಗೆ 10.30ರಿಂದ

ಪ್ರವಚನ ವಾಹಿನಿ: 'ಸಮನ್ವಯ ಸೂತ್ರದಾರ ಶಂಕರ' ಕುರಿತು ಉಪನ್ಯಾಸ: ಮಂಜುನಾಥ ಭಟ್ ವಿನಾಯಕ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಬೆಳ್ಳಿ ತೆರೆಯ ಬೇಲಾ' ನಾಟಕ

ಭಜನ-ಪ್ರವಚನ-ಸಂಕೀರ್ತನ: ಭಜನೆ: ರುಕ್ಮಿಣಿ ಮಹಿಳಾ ಮಂಡಳಿ, 'ಪಿತೃಪಕ್ಷದ ಮಹತ್ವ' ಪ್ರವಚನ: ರಾಮವಿಠಲಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳ ಹಿಂದೂಧರ್ಮ ಪ್ರಚಾರ ಪರಿಷತ್, ಮಾಧ್ವ ಸಂಘ, ರಾಜಾಜಿನಗರ, ಸಂಜೆ 6

ಪ್ರದರ್ಶನ: ಮೂಲ ರಚನೆ: ಸ್ವಾನಂದ ಕಿರ್ಕಿರೆ, ನಿರ್ದೇಶನ: ವೀಣಾ ಶರ್ಮಾ ಭೂಸನೂರಮಠ, ಆಯೋಜನೆ: ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಕ್ಷೇಮ ಕುಶಲ ಪುರವಣಿ ಓದಿರಿ

ಪುಸ್ತಕಗಳ ಜಾಲತಾಣಕ್ಕೆ ಸಚಿವ ಎಚ್‌. ಕೆ. ಪಾಟೀಲ ಚಾಲನೆ

'ಅಹಿಂಸೆಯಿಂದ ವಿಶ್ವವ್ಯಾಪಿಸಿದ ಗಾಂಧೀಜಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಳ ಜೀವನ, ಸತ್ಯ ಮತ್ತು ಅಹಿಂಸೆ ಮಾರ್ಗದ ಮೂಲಕ ವಿಶ್ವದ ಮೂಲೆ ಮೂಲೆ ತಲುಪಿದವರು ಮಹಾತ್ಮ ಗಾಂಧೀಜಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಗಾಂಧಿಭವನದಲ್ಲಿ ನಡೆದ ಗಾಂಧಿ ಜಯಂತಿ ಉದ್ಘಾಟಿಸಿ ಅವರು ಮಾತನಾಡಿ, 'ದೇಶಕ್ಕೆ ಗಾಂಧಿ ಒಬ್ಬರೇ ಮಹಾತ್ಮ ಮತ್ತು ಪಿತಾಮಹ. ಯಾವುದೇ ಪ್ರಚಾರದ ಸಾಮಗ್ರಿ, ತಂತ್ರಜ್ಞಾನ ಇಲ್ಲದೆಯೇ ಜನರ ಮನಸ್ಸುಗಳನ್ನು ಮುಟ್ಟಿದ್ದರು' ಎಂದು ನೆನಪು ಮಾಡಿಕೊಂಡರು.

> ಗಾಂಧೀಜಿ ಬಗ್ಗೆ ಜನರ ಮನಸ್ಸಲ್ಲಿ ಗೊಂದಲ ಹುಟ್ಟು ಹಾಕುವರ ಮತ್ತು ಅವರನ್ನು ಅವಮಾನಿಸುವವರ ವಿರುದ್ಧ ಕ್ರಮ ಜರುಗಿಸಲು ಸರ್ಕಾರ ಚಿಂತನೆ ನಡೆಸಿದೆ
>
> **ಎಚ್‌.ಕೆ. ಪಾಟೀಲ,** ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ

ನುಡಿದಂತೆ ನಡೆದವರು ಗಾಂಧೀಜಿ. ಅವರ ದಾರಿಯಲ್ಲಿ ಸ್ವಲ್ಪವಾದರೂ ನಾವು ಸಾಗಲು ಪ್ರಯತ್ನಿಸಬೇಕು. ಅದೇ ಗಾಂಧೀಜಿಗೆ ಸಲ್ಲಿಸುವ ಗೌರವ ಎಂದರು.

ಗಾಂಧಿ ಭವನದಲ್ಲಿ ಇರುವ ಗಾಂಧಿ ಕುರಿತ ಪುಸ್ತಕಗಳನ್ನು ಯುವ ಜನರಿಗೆ ಆನ್‌ಲೈನ್‌ನಲ್ಲಿ ಓದುವ ಅವಕಾಶ ಒದಗಿಸಿಕೊಡುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ಜಾಲತಾಣಕ್ಕೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಚಾಲನೆ ನೀಡಿದರು.

ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎಂ ಮುರಿಗೆಪ್ಪ ಅವರ 'ಅಹಿಂಸಾ ಪ್ರತಿಪಾದಕ ಹುತಾತ್ಮ ಮೈಲಾರ ಮಹಾದೇವ' ಕೃತಿಗೆ ಜಯಲಕ್ಷ್ಮಿ ಶ್ರೀನಿವಾಸಯ್ಯ ದತ್ತಿ ಸಾಹಿತ್ಯ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು. ಸ್ವಾತಂತ್ರ್ಯ ಹೋರಾಟಗಾರರಾದ ಕೆ.ಸಿ. ನಾರಾಯಣಪ್ಪ, ಎಸ್‌.ವಿ.ಟಿ. ಗುಪ್ತ, ಎಚ್‌.ಎಸ್‌. ಹನುಮಂತರಾವ್ ಮತ್ತು ರಘುನಾಥ್ ರಾವ್ ಎನ್‌. ಅವರುಗಳನ್ನು ಸನ್ಮಾನಿಸಲಾಯಿತು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು.

ರಾಜಭವನದಲ್ಲಿ ನೃತ್ಯ, ಗೀತ ನಮನ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಜನ್ಮದಿನದ ಅಂಗವಾಗಿ ರಾಜಭವನದ ಬ್ಯಾಂಕ್ವೆಟ್ ಸಭಾಂಗಣದಲ್ಲಿ 'ಗಾಂಧಿ ಜಯಂತಿ ಸತ್ಯ ಮತ್ತು ಅಹಿಂಸಾ ಮಹೋತ್ಸವ' ಹಮ್ಮಿಕೊಳ್ಳಲಾಯಿತು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಗಾಂಧಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ನೃತ್ಯ ಹಾಗೂ ಗೀತೆಗಳ ಮೂಲಕ ಮಹಾತ್ಮ ಗಾಂಧೀಜಿಗೆ ನಮನ ಸಲ್ಲಿಸಲಾಯಿತು.

ದೀಪಿಕಾ ಶ್ರೀಕಾಂತ್ ಮತ್ತು ತಂಡದವರು 'ವೈಷ್ಣವ ಜನತೋ...', 'ರಘುಪತಿ ರಾಘವ ರಾಜ ರಾಮ್' ಭಜನೆ ಹಾಡಿದರು. ನೇಹಾ ಸುಳ್ಳದ್ ಭರತನಾಟ್ಯ, ಟಿಶಾ ಶರ್ಮಾ, ರುದ್ರಿಕಾ ಶರ್ಮಾ ಹಾಗೂ ರುದ್ರಾಂಶಿ ಶರ್ಮಾ ವಿವಿಧ ಗಣಪತಿ ವಂದನಾ ನೃತ್ಯ ರೂಪಕವನ್ನು ಪ್ರಸ್ತುತಪಡಿಸಿದರು.

ನಾಟ್ಯ ನಿನಾದ ಅಕಾಡೆಮಿಯ ಕುಚಿಪುಡಿ ತಂಡದಿಂದ 'ಪುಷ್ಪಾಂಜಲಿ ಹಾಗೂ ಭಾರತ ಮಾತೆ ಭುವನ ಶ್ರೇಷ್ಠೆ ನಮೋಸ್ತುತೆ' ನೃತ್ಯ ರೂಪಕ ಪ್ರದರ್ಶನ ನಡೆಯಿತು.

ಉರ್ಜಾ ಸೆಂಟರ್ ಆಫ್ ಪರ್ಫಾಮಿಂಗ್ ಆರ್ಟ್ಸ್ ವತಿಯಿಂದ ವಂದೇ ಮಾತರಂ ಗೀತೆಗೆ ಸೋಹಿನಿ ಬೋಸ್ ಬ್ಯಾನರ್ಜಿ ತಂಡದಿಂದ ಒಡಿಸ್ಸಿ ಶೈಲಿಯ ನೃತ್ಯ ಪ್ರದರ್ಶನ, ತಾತಗುಣಿ ಜ್ಯೋತಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ವತಿಯಿಂದ 'ನಮೋ ಭಾರತಾಂಬೆ' ನೃತ್ಯಗಳು ಕಾರ್ಯಕ್ರಮಕ್ಕೆ ಮೆರಗು ನೀಡಿದವು.



ಬಿಟಿಎಂ ಲೇಔಟ್‌ನಲ್ಲಿ ಸಿಎಂಆರ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಬಿಬಿಎಂಪಿ ಪೌರಕಾರ್ಮಿಕರು ಸ್ವಚ್ಛತಾ ಶ್ರಮದಾನ ಮಾಡಿದರು.

ಸಿಎಂಆರ್ ವಿದ್ಯಾರ್ಥಿಗಳಿಂದ ಶ್ರಮದಾನ

ಬೆಂಗಳೂರು: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ 154ನೇ ಜಯಂತಿ ಅಂಗವಾಗಿ ಸಿಎಂಆರ್ ವಿಶ್ವವಿದ್ಯಾಲಯ ಮತ್ತು ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸ್ವಯಂ ಸೇವಾ ಸಂಘಗಳ ಸಹಯೋಗದಲ್ಲಿ 'ಸ್ವಚ್ಛತಾ ಹಿ ಸೇವಾ' ಅಭಿಯಾನದ ಭಾಗವಾಗಿ ಶ್ರಮದಾನ ಮಾಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದ 'ಸ್ವಚ್ಛ ಸರ್ವೇಕ್ಷಣ್–2023' ಅಭಿಯಾನದಲ್ಲಿ ಸಿಎಂಆರ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು , ಎನ್‌ಸಿಸಿ ಕೆಡೆಟ್‌ಗಳು, ಪೌರಕಾರ್ಮಿಕರ ಜೊತೆಗೆ ಬಿಟಿಎಂ ಲೇಔಟ್, ಕೆ.ಆರ್. ಪುರ, ಕೃಷ್ಣರಾಜ ಮಾರುಕಟ್ಟೆ, ಮಿಟ್ಟಗಾನ ಹಳ್ಳಿ ಸೇರಿದಂತೆ ಹಲವೆಡೆ ಶ್ರಮದಾನ ಮಾಡಿದರು.

ಬಾಗಲೂರು ಕೆರೆಯನ್ನು ದತ್ತು ಪಡೆದು ದೋಣಿ ವಿಹಾರ ಮತ್ತು ಹಸಿರು ವಲಯವಾಗಿ ಸಂರಕ್ಷಣೆ ಮಾಡುತ್ತಿರುವ ಸಿಎಂಆರ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸ್ವಚ್ಛತಾ ಅಭಿಯಾನದಲ್ಲಿ ಕೈಜೋಡಿಸಿ ಇಡೀ ದಿನ ಶ್ರಮದಾನ ಮಾಡುವುದರ ಮೂಲಕ 'ನಗರದ ಸ್ವಚ್ಛತೆ ನಮ್ಮ ಆದ್ಯತೆ' ಎಂಬ ಸಂದೇಶ ನೀಡಿದ್ದಾರೆ.



ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ

ಅಹಿಂಸೆ ಸಾರಿದ ಶಾಂತಿ ದೂತನ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಹಿಂಸೆ, ಅಸಹಕಾರಗಳನ್ನೇ ಪ್ರತಿಭಟನೆಯ ಅಸ್ತ್ರವನ್ನಾಗಿಸಿಕೊಂಡಿದ್ದ, ಸತ್ಯದ ಹಾದಿಯೇ ಸತ್ವದ ಹಾದಿ ಎಂದು ಸಾರಿದ್ದ ಶಾಂತಿ ದೂತ ಮಹಾತ್ಮ ಗಾಂಧಿ ಹಾಗೂ ಅವರ ಅನುಯಾಯಿಯಾಗಿದ್ದ ದೇಶದ ಎರಡನೇ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಸೋಮವಾರ ನಗರದಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

ನೈರುತ್ಯ ರೈಲ್ವೆ:

ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದಿಂದ ಕೆಎಸ್‌ಆರ್ ಬೆಂಗಳೂರು ರೈಲು ನಿಲ್ದಾಣದಲ್ಲಿ ಗಾಂಧೀಜಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಗಾಂಧಿ ಜಯಂತಿಯನ್ನು ಆಚರಿಸಲಾಯಿತು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಕುಸುಮಾ ಹರಿಪ್ರಸಾದ್, ನವಾಯದ್ ತಾಲಿಬ್, ಅಶುತೋಷ್ ಮಾಥೂರ್, ಅಧಿಕಾರಿಗಳು ಮತ್ತು ಸಫಾಯಿ ಕರ್ಮಚಾರಿಗಳು ಇದ್ದರು. ಕಲಾವಿದರು ಸ್ವಚ್ಛತೆಯ ವಿಷಯದ ಮೇಲೆ ಕಂಸಾಳೆ ಜನಪದ ನೃತ್ಯವನ್ನು ಪ್ರದರ್ಶಿಸಿದರು.

ಪಿಇಎಸ್ ವಿವಿ: ಪಿವಿಎಸ್ ವಿಶ್ವವಿದ್ಯಾಲಯದಲ್ಲಿ ಗಾಂಧೀಜಿ ಮತ್ತು ಲಾಲ್ ಬಹದ್ದೂರ ಶಾಸ್ತ್ರಿ ಅವರನ್ನು ಸ್ಮರಿಸಲಾಯಿತು.

ಕುಲಾಧಿಪತಿ ಎಂ.ಆರ್. ದೊರೆಸ್ವಾಮಿಯವರ ಆಶಯದಂತೆ ಗಾಂಧೀಜಿ, ವಿಶ್ವೇಶ್ವರಯ್ಯ, ವಿವೇಕಾನಂದರ ಜೀವನ ಮೌಲ್ಯಗಳನ್ನು ಶೈಕ್ಷಣಿಕ ಪಠ್ಯದಲ್ಲಿ ಅಳವಡಿಸಲಾಗಿದೆ ಎಂದು ಕುಲಸಚಿವ ಕೆ.ಎಸ್. ಶ್ರೀಧರ್ ಹೇಳಿದರು.

ಕ್ಯಾಂಪಸ್ ನಿರ್ದೇಶಕ ಎಂ.ವಿ. ಸತ್ಯನಾರಾಯಣ, ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳಿದ್ದರು.



ಗಿರಿನಗರದ ವಿವೇಕಾನಂದ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ 98 ವಯಸ್ಸಿನ ಡಿ.ಎನ್‌. ಸಂಪತ್ ಅವರನ್ನು ಗೌರವಿಸಲಾಯಿತು

ವಿವೇಕಾನಂದ ಗೆಳೆಯರ ಬಳಗ:

ಗಿರಿನಗರದ ವಿವೇಕಾನಂದ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ 98 ವಯಸ್ಸಿನ ಡಿ.ಎನ್‌. ಸಂಪತ್ ಅವರನ್ನು ಗೌರವಿಸಲಾಯಿತು.

ಬಳಗದ ಅಧ್ಯಕ್ಷ ಚಿನ್ನಪ ರೆಡ್ಡಿ, ಉಪಾಧ್ಯಕ್ಷ ಶಿವರುದ್ರಪ್ಪ, ಕಾರ್ಯದರ್ಶಿ ವೆಂಕಟೇಶ್, ಮಾಜಿ ಅಧ್ಯಕ್ಷ ಶಿವು ಸುರಾಪುರ, ಶಿವಕುಮಾರ್, ರಂಗಕರ್ಮಿ ಜೆಪಿಓ ಚಂದ್ರು, ವಸಂತ್, ಸಾಹಿತಿ ನರಸಿಂಹಮೂರ್ತಿ ಇದ್ದರು.

ಬಿಬಿಎಂಪಿ: ಎಂ.ಜಿ. ರಸ್ತೆಯಲ್ಲಿರುವ ಗಾಂಧಿ ಪ್ರತಿಮೆಗೆ ಬಿಬಿಎಂಪಿ ಆಡಳಿತಗಾರ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾಲಾರ್ಪಣೆ ಮಾಡಿದರು.

ಸರ್ವಧರ್ಮ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಪ್ರತಿಭಾ ಬಾಲಮಂದಿರ ಮಕ್ಕಳಿಂದ ಗೀತ ವಾಚನ, ದೀಪಿಕಾ ಶ್ರೀಕಾಂತ್ ಅವರಿಂದ ವೈಷ್ಣವ ಜನತೋ, ಹಡ್ಸನ್ ಚರ್ಚಿನ ಧರ್ಮಗುರು ರೆವರೆಂಡ್ ಆಲ್ಫ್ರೆಡ್ ಸುದರ್ಶನ್ ಮತ್ತು ತಂಡದಿಂದ ಬೈಬಲ್ ವಾಚನ, ಗುರುದ್ವಾರದ ಗುರುಸಿಂಗ್ ಸಭಾ ಮತ್ತು ತಂಡದಿಂದ ಗುರುಗ್ರಂಥ ವಾಚನ, ಮೌಲ್ವಿ ಹಫೀಜ್ ಶಾಬೀರ್ ಹುಸೇನ್ ಅವರಿಂದ ಕುರುಆನ್ ವಾಚನ ನಡೆಯಿತು.

ವಿಶೇಷ ಆಯುಕ್ತರಾದ ಹರೀಶ್ ಕುಮಾರ್, ರೆಡ್ಡಿ ಶಂಕರ ಬಾಬು, ಉಪ ಆಯುಕ್ತ ಮಂಜುನಾಥ್ ಸ್ವಾಮಿ, ಪೂರ್ವ ವಲಯ ಜಂಟಿ ಆಯುಕ್ತರಾದ ಪಲ್ಲವಿ, ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತರಾದ ಪ್ರತಿಭಾ, ಮಾಜಿ ಸಚಿವ ರಾಮಚಂದ್ರೇ ಗೌಡ ಇದ್ದರು.

'ಗಾಂಧಿ ಪಾಯಿಂಟ್'ಗೆ ಚಾಲನೆ

ಗಾಂಧಿ ಜಯಂತಿ ಪ್ರಯುಕ್ತ ಬಿಎಂಟಿಸಿ ಘಟಕ 4 ರಲ್ಲಿ ಘಟಕದ ಸಿಬ್ಬಂದಿಗೆ ರಿಯಾಯಿತಿ ದರದಲ್ಲಿ ಉತ್ತಮ ದರ್ಜೆಯ ತಿಂಡಿ ಮತ್ತು ಊಟವನ್ನು ಒದಗಿಸುವ 'ಗಾಂಧಿ ಪಾಯಿಂಟ್' ಕ್ಯಾಂಟಿನ್‌ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

ಬಿಎಂಟಿಸಿ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಕ್ಯಾಂಟಿನ್ ತೆರೆಯುವ ಕಾರ್ಯ ಪ್ರಗತಿಯಲ್ಲಿದೆ. ಇಲ್ಲಿ ಕ್ಯಾಂಟಿನ್ ತೆರೆಯುವುದರಿಂದ ನಾಲ್ಕು ಸಾರಿಗೆ ಸಂಸ್ಥೆಗಳ ಚಾಲನಾ ಸಿಬ್ಬಂದಿಗೆ ಅನುಕೂಲವಾಗಲಿದೆ. ಉತ್ತಮ ಗುಣಮಟ್ಟದ ಆಹಾರವು ರಿಯಾಯಿತಿ ದರದಲ್ಲಿ ದೊರಕಲಿದೆ. ಇದೇ ರೀತಿ ಇತರೆ ಘಟಕಗಳಲ್ಲಿಯೂ ಕ್ಯಾಂಟಿನ್ ಪ್ರಾರಂಭಿಸಲು ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಬಿಎಂಟಿಸಿ ದಕ್ಷಿಣ ವಿಭಾಗೀಯ ನಿಯಂತ್ರಣಾಧಿಕಾರಿ ಕೀರ್ತಿಚಂದ್ರ, ಜಯನಗರ ಘಟಕ ವ್ಯವಸ್ಥಾಪಕ ರವೀಂದ್ರ, ಸಿಬ್ಬಂದಿ ಇದ್ದರು.

74 ಲಕ್ಷ ವಾಟ್ಸ್‌ಆ್ಯಪ್ ಖಾತೆಗಳು ನಿಷೇಧ

ನವದೆಹಲಿ (ಪಿಟಿಐ): ಭಾರತದಲ್ಲಿ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಪಾಲಿಸದ 74 ಲಕ್ಷ ಖಾತೆಗಳನ್ನು ಆಗಸ್ಟ್‌ನಲ್ಲಿ ನಿಷೇಧಿಸಲಾಗಿದೆ ಎಂದು ಮೆಟಾ ಒಡೆತನದ ವಾಟ್ಸ್‌ಆ್ಯಪ್ ಸಂಸ್ಥೆ ತಿಳಿಸಿದೆ.

35 ಲಕ್ಷ ಖಾತೆಗಳನ್ನು ಬಳಕೆದಾರರಿಂದ ವರದಿ ಬರುವ ಮುನ್ನ ನಿಷೇಧಿಸಲಾಗಿದೆ. ಬಳಕೆದಾರರ ದೂರುಗಳು, ವಾಟ್ಸ್‌ಆ್ಯಪ್ ಸಂಸ್ಥೆ ಕೈಗೊಂಡ ಕ್ರಮಗಳ ಕುರಿತಂತೆಯೂ ವಾಟ್ಸ್ ಆ್ಯಪ್ ಸಂಸ್ಥೆಯು ತನ್ನ ಮಾಸಿಕ ವರದಿಯಲ್ಲಿ ತಿಳಿಸಿದೆ.

ನಗರಕ್ಕೆ ಐವರು ಡಿಸಿಸಿ ಅಧ್ಯಕ್ಷರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಸಿದ್ಧತೆ ಆರಂಭಿಸಿರುವ ಎಐಸಿಸಿ, ಪಕ್ಷ ಸಂಘಟನೆಗಾಗಿ ಬೆಂಗಳೂರು ನಗರವನ್ನು ವಿಂಗಡಿಸಿ ಐದು ಜಿಲ್ಲಾ ಕಾಂಗ್ರೆಸ್ ಸಮಿತಿಗಳಾಗಿ (ಡಿಸಿಸಿ) ಮಾಡಿ ಅಧ್ಯಕ್ಷರನ್ನು ನೇಮಿಸಿದೆ.

ಐದು ಜಿಲ್ಲಾ ಸಮಿತಿಗಳ ಅಧ್ಯಕ್ಷರು: ಬೆಂಗಳೂರು ನಗರ – ಕೆ.ವಿ. ಗೌತಮ್. ಬೆಂಗಳೂರು ಪೂರ್ವ – ಉದಯ್ ಕುಮಾರ್. ಬೆಂಗಳೂರು ಪಶ್ಚಿಮ- ಹನುಮಂತರಾಯಪ್ಪ. ಬೆಂಗಳೂರು ಉತ್ತರ- ಅಬ್ದುಲ್ ವಾಜಿದ್. ಬೆಂಗಳೂರು ದಕ್ಷಿಣ – ಒ. ಮಂಜುನಾಥ್.

ರಾಜ್ಯದ ಎಲ್ಲ 28 ಲೋಕಸಭಾ ಕ್ಷೇತ್ರಗಳಿಗೆ ಸಂಭಾವ್ಯ ಅಭ್ಯರ್ಥಿಗಳ ಆಯ್ಕೆಗೆ ಸಚಿವರನ್ನು ವೀಕ್ಷಕರನ್ನಾಗಿ ಕಾಂಗ್ರೆಸ್ ನೇಮಕ ಮಾಡಿದೆ. ಪ್ರತಿ ಕ್ಷೇತ್ರದಲ್ಲೂ ಇಬ್ಬರು ಅಥವಾ ಮೂವರು ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸುವ ಜವಾಬ್ದಾರಿಯನ್ನೂ ನೀಡಲಾಗಿದೆ.



ಕಬ್ಬನ್ ಉದ್ಯಾನದಲ್ಲಿ ರಜಾ ದಿನಗಳಲ್ಲಿ ವಾಹನಗಳ ಸಂಚಾರ ನಿಷೇಧಿಸುವಂತೆ ಆಗ್ರಹಿಸಿ ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಸದಸ್ಯರು ಸೋಮವಾರ ಕೇಂದ್ರ ಗ್ರಂಥಾಲಯದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

‘ಕಬ್ಬನ್‌ಪಾರ್ಕ್‌: ವಾಹನ ಸಂಚಾರ ನಿಷೇಧಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ರಜಾ ದಿನಗಳಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿರುವುದನ್ನು ವಿರೋಧಿಸಿ ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು.

‘ಕಬ್ಬನ್ ಉದ್ಯಾನದಲ್ಲಿ ಶನಿವಾರ, ಭಾನುವಾರ ಸೇರಿದಂತೆ ಸರ್ಕಾರಿ ರಜಾ ದಿನಗಳಲ್ಲಿ ವಾಹನ ಸಂಚಾರವನ್ನು ಸಂಪೂರ್ಣ ನಿಷೇಧಿಸಲಾಗಿತ್ತು. ಜತೆಗೆ ಉದ್ಯಾನವನ್ನು ನಿಶ್ಯಬ್ದ ವಲಯವನ್ನಾಗಿ ಘೋಷಿಸಲಾಗಿದೆ. ಆದರೆ, ಈಗ ಪ್ರತಿದಿನ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿದರೆ, ಕಬ್ಬನ್ ಉದ್ಯಾನಕ್ಕೆ ಬರುವ ವಾಯುವಿಹಾರಿಗಳು, ಪ್ರವಾಸಿಗರು, ಕುಟುಂಬ ಸಮೇತರಾಗಿ ಉದ್ಯಾನಕ್ಕೆ ಬರುವವರಿಗೆ ತೊಂದರೆಯಾಗುತ್ತದೆ. ಪಕ್ಷಿಗಳಿಗೆ ವಾಹನಗಳ ಹಾರ್ನ್ ಶಬ್ದದಿಂದ ಕಿರಿಕಿರಿ ಉಂಟಾಗಲಿದೆ’ ಎಂದು ಸಂಘದ ಅಧ್ಯಕ್ಷ ಎಸ್. ಉಮೇಶ್ ಆತಂಕ ವ್ಯಕ್ತಪಡಿಸಿದರು.

‘ಉದ್ಯಾನವು ಹಲವು ಬಗೆಯ ಪ್ರಾಣಿ–ಪಕ್ಷಿ ಸಂಕುಲಗಳಿಗೆ ಆಶ್ರಯ ತಾಣವಾಗಿದೆ. ವಾಹನಗಳ ಹಾರ್ನ್‌ನ ಕರ್ಕಶ ಶಬ್ದದಿಂದ ಪಕ್ಷಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಉದ್ಯಾನದ ಕೆಲ ಪ್ರದೇಶಗಳಲ್ಲಿ ನಿಶ್ಯಬ್ದ ವಾತಾವರಣವಿರಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಬಿಡಿಎಗೆ ಎನ್‌. ಜಯರಾಮ್ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ಐಎಎಸ್ ಅಧಿಕಾರಿ, ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಅಧ್ಯಕ್ಷ ಎನ್. ಜಯರಾಮ್ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಜಯರಾಮ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯದರ್ಶಿಯೂ ಆಗಿದ್ದಾರೆ. ಬಿಡಿಎ ಆಯುಕ್ತರಾಗಿದ್ದ ಜಿ. ಕುಮಾರ ನಾಯಕ್ ಅವರ ವಯೋನಿವೃತ್ತಿಯಿಂದ ತೆರವಾದ ಸ್ಥಾನಕ್ಕೆ ಜಯರಾಮ್ ಅವರನ್ನು ನಿಯೋಜಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ನಿವೇಶನ ಹಂಚಿಕೆ ಪ್ರಕರಣದಲ್ಲಿ ನ್ಯಾಯಾಲಯದ ಆದೇಶಗಳನ್ನು ಪಾಲಿಸದ ಅಧಿಕಾರಿಯನ್ನು ವಜಾಗೊಳಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದ್ದ ಹಿನ್ನೆಲೆಯಲ್ಲಿ ಬಿಡಿಎ ಆಯುಕ್ತರಾಗದ್ದ ಎಂ. ಬಿ. ರಾಜೇಶ್ ಗೌಡ ಅವರನ್ನು ಹಿಂದಿನ ಬಿಜೆಪಿ ಸರ್ಕಾರ 2022ರ ಆಗಸ್ಟ್ 22ರಂದು ವರ್ಗಾವಣೆ ಮಾಡಿತ್ತು.

ಆ ಹುದ್ದೆಯನ್ನು ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಜಿ. ಕುಮಾರ ನಾಯಕ್ ಅವರಿಗೆ ಹೆಚ್ಚುವರಿಯಾಗಿ ನೀಡಿತ್ತು. ಬಳಿಕ ಇದೇ ಫೆ. 11 ರಂದು ಆಯುಕ್ತರನ್ನಾಗಿ ವರ್ಗಾವಣೆ ಮಾಡಿ ಆದೇಶ ಹೊರಡಿಸಿತ್ತು.

ಕುಮಾರ ನಾಯಕ್ ನಿವೃತ್ತರಾಗುತ್ತಿದ್ದಂತೆ, ಆ ಹುದ್ದೆಯ ಮೇಲೆ ಕೆಲವು ಹಿರಿಯ ಐಎಎಸ್ ಅಧಿಕಾರಿಗಳು ಕಣ್ಣಿಟ್ಟಿದ್ದರು. ಮೈಸೂರು ಪ್ರಾದೇಶಿಕ ವಿಭಾಗದ ಆಯುಕ್ತರಾಗಿದ್ದ, ಇತ್ತೀಚೆಗಷ್ಟೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾವಣೆಗೊಂಡಿರುವ ಜಿ.ಸಿ. ಪ್ರಕಾಶ್ ಮತ್ತು ಬಿಡಿಎ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ್ದ ಎಂ.ಬಿ. ರಾಜೇಶ್ ಗೌಡ ಕೂಡಾ ಈ ಹುದ್ದೆಯ ನಿರೀಕ್ಷೆಯಲ್ಲಿದ್ದರು ಎಂದು ಗೊತ್ತಾಗಿದೆ.

ಕೆಲವರು ಹುದ್ದೆ ಗಿಟ್ಟಿಸಿಕೊಳ್ಳಲು ತೀವ್ರ ಒತ್ತಡ ಹೇರಿದ್ದರು ಎಂದೂ ಹೇಳಲಾಗಿದೆ.



₹ 5 ಕೋಟಿ ಸಾಲ ಮನ್ನಾ ವಿಚಾರಣೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಲ್ಲೇಶ್ವರದ ಜನತಾ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ 2020–21ನೇ ಸಾಲಿನ ಆರ್ಥಿಕ ವರ್ಷದಲ್ಲಿ ₹ 5 ಕೋಟಿಗೂ ಹೆಚ್ಚಿನ ಮೊತ್ತದ ಸಾಲ ಮನ್ನಾ ಮಾಡಲಾಗಿದೆ’ ಎಂಬ ಆರೋಪಕ್ಕೆ ಸಂಬಂಧಿಸಿದ ದೂರಿನ ಬಗ್ಗೆ ವಿಚಾರಣೆ ನಡೆಸಲು ಸಹಕಾರ ಸಂಘಗಳ ಜಂಟಿ ನಿಬಂಧಕರು ಆದೇಶಿಸಿದ್ದಾರೆ.

ಬ್ಯಾಂಕಿನ ಅವ್ಯವಹಾರಗಳ ವಿರುದ್ಧ ಹೈಕೋರ್ಟ್ ವಕೀಲ ಎಸ್.ಪಿ.ಶಶಿಧರ ಮತ್ತು ಇತರರು ಸಲ್ಲಿಸಿದ್ದ ದೂರನ್ನು ಪರಿಗಣಿಸಿರುವ ಬೆಂಗಳೂರು ನಗರ ಜಿಲ್ಲೆ ಸಹಕಾರ ಸಂಘಗಳ ಉಪನಿಬಂಧಕರ ವಲಯ–4ರ ಜಂಟಿ ನಿಬಂಧಕ ಪಿ.ಮಹೇಶ್, ಸಹಕಾರ ಸಂಘಗಳ ಕಾಯ್ದೆ–1959ರ ಕಲಂ 64ರ ಅಡಿಯಲ್ಲಿ ಈ ವಿಚಾರಣೆ ನಡೆಸಲು ಆದೇಶಿಸಿದ್ದಾರೆ.

‘ಸಾಲ ವಿತರಣೆಯಲ್ಲಿ ನಿಯಮ ಉಲ್ಲಂಘಿಸಲಾಗಿದೆ, ವಸೂಲಾತಿಯಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಳ್ಳಲಾಗಿದೆ. ಈ ಸಂಬಂಧ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಸೂಕ್ತ ಕ್ರಮ ಕೈಗೊಳ್ಳುವ ಮುನ್ನ ಶಾಸನಬದ್ಧ ವಿಚಾರಣೆ ಅಗತ್ಯವಿದೆ. ಅಧಿಕಾರಿಗಳು 2 ತಿಂಗಳಲ್ಲಿ ವಿಚಾರಣೆ ನಡೆಸಿ ವರದಿ ಸಲ್ಲಿಸಬೇಕು’ ಎಂದು ತಿಳಿಸಲಾಗಿದೆ.

ದೂರಿನಲ್ಲಿ ಏನಿದೆ?: ‘ಬ್ಯಾಂಕಿನಲ್ಲಿ ಠೇವಣಿದಾರರು ಕೋಟ್ಯಂತರ ರೂಪಾಯಿಗಳ ಠೇವಣಿ ಮೊತ್ತವನ್ನು ಇಟ್ಟಿದ್ದು, ಬ್ಯಾಂಕಿನ ನಿರ್ದೇಶಕ ಮಂಡಳಿ ಲೆಕ್ಕ ಪರಿಶೋಧಕರ ವರದಿ ಮತ್ತು ಸಲಹೆಗಳನ್ನು ಪರಿಗಣಿಸದೆ 230 ಸಾಲದ ಪ್ರಕರಣಗಳಲ್ಲಿ ₹ 5 ಕೋಟಿಗೂ ಹೆಚ್ಚಿನ ಮೊತ್ತ ಮನ್ನಾ ಮಾಡಲಾಗಿದೆ. ಕೆ.ಜೆ.ಪ್ರವೀಣ್, ಶಾಂತಮ್ಮ ಇವರಿಗೆ ಸಾಲ ಮಂಜೂರು ಮಾಡುವಲ್ಲಿ ಲೋಪ ಎಸಗಲಾಗಿದೆ’ ಎಂದು ಫಿರ್ಯಾದುದಾರರು ಆರೋಪಿಸಿದ್ದಾರೆ.

‘ಬ್ಯಾಂಕ್ ನಷ್ಟದಲ್ಲಿದ್ದರು ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ನೀಡಲಾಗಿದೆ ಮತ್ತು ಹೆಚ್ಚುವರಿ ವೇತನ ನೀಡಲಾಗುತ್ತಿದೆ. ಬೆಂಗಳೂರು ಮರ್ಕಂಟೈಲ್ ಕೋ ಆಪರೇಟಿವ್ ಬ್ಯಾಂಕ್ ಮತ್ತು ಕಾವೇರಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಲಾಗಿದೆ. ಪಂಜಾಬ್ ಮತ್ತು ಮಹಾರಾಷ್ಟ್ರ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಹೂಡಿಕೆ ಮಾಡಲಾಗಿದೆ’ ಎಂದು ದೂರಲಾಗಿದೆ.

‘ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರಿಗೆ ಹಾಗೂ ಅವರ ಸಂಬಂಧಿಕರಿಗೆ ಸಾಲ ಮಂಜೂರು ಮಾಡಿರುವ ಬಗ್ಗೆ ಹಾಗೂ ಈ ಸಾಲಗಳು ಸುಸ್ತಿಯಾಗಿದ್ದರೂ ನಿಯಮಬಾಹಿರವಾಗಿ ಮನ್ನಾ ಮಾಡಲಾಗಿದೆ’ ಎಂಬುದೂ ಸೇರಿದಂತೆ ಫಿರ್ಯಾದುದಾರರ ದೂರಿನ ಅನುಸಾರ ಒಟ್ಟು 15 ಆರೋಪಗಳ ಕುರಿತಂತೆ ವಿಚಾರಣೆಗೆ ಆದೇಶಿಸಲಾಗಿದೆ.

4ಕ್ಕೆ ರೈತರಿಂದ ವಿಧಾನಸೌಧಕ್ಕೆ ಮುತ್ತಿಗೆ

ರಾಮನಗರ: ‘ಬರ ಪರಿಹಾರ ಕಾರ್ಯಕ್ರಮ ರೂಪಿಸದ ರಾಜ್ಯ ಸರ್ಕಾರದ ಧೋರಣೆ ಖಂಡಿಸಿ, ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಅ. 4ರಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು’ ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಎ.ಎಲ್. ಬೈರೇಗೌಡ ಹೇಳಿದರು.

‘ಅರಸೀಕೆರೆಯಿಂದ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ನಡೆಸುತ್ತಿರುವ ಪಾದಯಾತ್ರೆ ಅದೇ ದಿನ ಬೆಂಗಳೂರಿಗೆ ತಲುಪಲಿದೆ’ ಎಂದು ಎಂದು ಸೋಮವಾರ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬನ್ನೇರುಘಟ್ಟ ಉದ್ಯಾನಕ್ಕೆ ಹೊಸ ಲಾಂಛನ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸೋಮವಾರ ನಡೆದ ವನ್ಯಜೀವಿ ಸಪ್ತಾಹ ಕಾರ್ಯಕ್ರಮದಲ್ಲಿ ಉದ್ಯಾನದ ನೂತನ ಲಾಂಛನವನ್ನು ಬಿಡುಗಡೆ ಮಾಡಲಾಯಿತು.

ಇದೇ ಸಂದರ್ಭ ಲಾಂಛನ ಇರುವ ಟಿ-ಶರ್ಟ್, ಗ್ಲಾಸ್‌ನ್ನು ಬಿಡುಗಡೆ ಮಾಡಲಾಯಿತು.

ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ.ಸೂರ್ಯಸೇನ್ ಕಾರ್ಯಕ್ರಮ ಉದ್ಘಾಟಿಸಿದರು. ವನ್ಯಜೀವಿ ಆರ್ಟ್ ಗ್ಯಾಲರಿಯನ್ನು ಇದೇ ವೇಳೆ ಉದ್ಘಾಟಿಸಲಾಯಿತು. ವನ್ಯಜೀವಿಗಳ ಮಲದಿಂದ ತಯಾರಿಸಿದ ಗೊಬ್ಬರವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು.

ವನ್ಯಜೀವಿ ಸಪ್ತಾಹದ ಅಂಗವಾಗಿ ಸಿಬ್ಬಂದಿಯಲ್ಲಿ ಸಂಭ್ರಮ ಮನೆ ಮಾಡಿತ್ತು. ಸ್ವಯಂ ಸೇವಕರು, ಪೋಷಕರು ಹಾಗೂ ಮಕ್ಕಳ ಜೊತೆ ಪ್ರಕೃತಿಯ ನಡಿಗೆ ಬೆಳಿಗ್ಗೆ ನಡೆಯಿತು.


ಲಾಂಛನ

ಸಂಗೀತ ಸಂಯೋಜಕ ವಾಸು ದಿಕ್ಷೀತ್ ಅವರಿಂದ ಸಂಗೀತ ಕಾರ್ಯಕ್ರಮ, ಕಲಾವಿದ ಜಾನ್ ದೇವರಾಜು ಅವರೊಂದಿಗೆ ಉದ್ಯಾನದ ಸಿಬ್ಬಂದಿಯ ಮಕ್ಕಳು ವಿವಿಧ ವೇಷಭೂಷಣಗಳೊಂದಿಗೆ ಆಕರ್ಷಕ ನೃತ್ಯ ಪ್ರದರ್ಶಿಸಿದರು.

ಅಕ್ಟೋಬರ್ 15ರಂದು ಝೂ ಕ್ಲಬ್‌ಗೆ ಚಾಲನೆ ನೀಡಲಾಗುವುದು. 12-18ವರ್ಷದೊಳಗಿನವರಿಗಾಗಿ ಪ್ರತಿ ಭಾನುವಾರ ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ. 15 ವಾರ ಕಾರ್ಯಕ್ರಮ ನಡೆಸಲಾಗುವುದು. ಪರಿಸರ ಜಾಗೃತಿ ಮತ್ತು ವನ್ಯಜೀವಿಗಳ ಬಗ್ಗೆ ಮಾಹಿತಿ ಪಡೆಯಲು ಕಾರ್ಯಕ್ರಮ ವರದಾನವಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ.ಸೂರ್ಯಸೇನ್ ಹೇಳಿದರು.

ಪರಿಸರ ಜಾಗೃತಿ ಮೂಡಿಸಿ ಪರಿಸರ ಉಳಿಸಲು ಬನ್ನೇರುಘಟ್ಟ ಜೈವಿಕ ಉದ್ಯಾನ ಹಲವಾರು ಜಾಗೃತಿ ಕಾರ್ಯಕ್ರಮ ರೂಪಿಸಿದೆ. ಈ ವರ್ಷದ ಸಪ್ತಾಹದಲ್ಲಿ 'ವನ್ಯಜೀವಿ ಸಂರಕ್ಷಣೆಗಾಗಿ ಸಹಭಾಗಿತ್ವ' ಎಂಬ ಧ್ಯೇಯ ವಾಕ್ಯದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬನ್ನೇರುಘಟ್ಟದಲ್ಲಿ ಝೂ ಕ್ಲಬ್ ಸ್ಥಾಪಿಸಿ ಕಾರ್ಯಾಗಾರ, ಕ್ಷೇತ್ರ ಭೇಟಿ, ಗುಂಪು ಚಟುವಟಿಕೆ ರೂಪಿಸಿ ವನ್ಯಜೀವಿಗಳ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲಾಗುವುದು ಎಂದರು.

ಅಂಚೆ ಇಲಾಖೆಯ ಹಿರಿಯ ಅಧಿಕಾರಿಗಳಾದ ಕೆ.ವಿನಯ್‌ಕುಮಾರ್, ವನ್ಯಜೀವಿ ಪೋಸ್ಟಲ್ ಸೇವೆ ನೀಡಿದ ರಂಜಿತ್ ಇದ್ದರು.

'ಕಲ್ಯಾಣ ಕೆಡುವ ಹಾದಿ' ಕೃತಿ ಬಿಡುಗಡೆ

'ಸಮಾನತೆಗೆ ಬಂಡವಾಳಶಾಹಿ ಅಡ್ಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುದ್ಧ, ಬಸವಣ್ಣ, ಅಂಬೇಡ್ಕರ್ ಸೇರಿದಂತೆ ಎಲ್ಲ ಮಹನೀಯರು ಸಮಾನತೆಯ ಬಗ್ಗೆ ಮಾತನಾಡಿದರು. ಸಮಾನತೆ ತರಲು ಪ್ರಯತ್ನಿಸಿದರು. ಅದಕ್ಕೆ ಕಿಮ್ಮತ್ತು ಸಿಗದೇ ಇರುವುದಕ್ಕೆ ಆಡಳಿತವನ್ನು ನಿಯಂತ್ರಿಸುವವರು ಕಾರಣ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಅವರ ಆತ್ಮಕಥನದ ಕನ್ನಡ ಅನುವಾದ 'ಕಲ್ಯಾಣ ಕೆಡುವ ಹಾದಿ' ಕೃತಿಯನ್ನು ಸೋಮವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಜಕಾರಣಿಗಳು ಅಥವಾ ಅಧಿಕಾರಿಗಳು ಸಮಾನತೆ ಜಾರಿಗೊಳಿಸಲು ಮನಸ್ಸು ಮಾಡಿದರೂ, ಅದು ಆಗದಂತೆ ಬಂಡವಾಳಶಾಹಿಗಳು ಮತ್ತು ಇತರ ಶಕ್ತಿಗಳು ನೋಡಿಕೊಳ್ಳುತ್ತಿದ್ದಾರೆ. ಇಂಥ ವ್ಯವಸ್ಥೆಯನ್ನು ಬದಲಾಯಿಸುವಲ್ಲಿ ಪ್ರಜಾಪ್ರಭುತ್ವ ಸೋತಿದೆ ಎಂದು ವಿಷಾದಿಸಿದರು.

ಪುರುಷರು, ಮಹಿಳೆಯರು ಎಲ್ಲರೂ ಸಮಾನರು ಎಂಬುದನ್ನು ಸಂವಿಧಾನದಲ್ಲಿಯೇ ಅಂಬೇಡ್ಕರ್ ಬರೆದಿದ್ದರೂ, ಮಹಿಳೆಯರಿಗೆ ಇನ್ನೂ ಸಮಾನ ಪ್ರಾತಿನಿಧ್ಯ ಕೊಡಲು ಆಗಿಲ್ಲ. ಈಗ ಮಹಿಳಾ ಮೀಸಲಾತಿ ಮಸೂದೆ ಮಂಡನೆಯಾಗಿರುವುದು ಕೂಡ ಕಣ್ಣೊರೆಸುವ ತಂತ್ರವೇ ಹೊರತು ಜಾರಿ ಮಾಡುವ ರೀತಿಯಲ್ಲಿಲ್ಲ ಎಂದು ತಿಳಿಸಿದರು.


ವಿ. ಬಾಲಸುಬ್ರಮಣಿಯನ್(ಎಡದಿಂದ ಎರಡನೆಯವರು) ಅವರ 'ಕಲ್ಯಾಣ ಕೆಡುವ ಹಾದಿ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಎಡದಿಂದ ಅನುವಾದಕಿ ಎನ್‌. ಸಂಧ್ಯಾರಾಣಿ, ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ, ರಾಜಕೀಯ ವಿಶ್ಲೇಷಕ ವೆಲೇರಿಯನ್ ರೋಡ್ರಿಗಸ್ ಇದ್ದರು

ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಆತ್ಮಕಥನ: ಕಲ್ಯಾಣ ಕೆಡುವ ಹಾದಿ

ಲೇಖಕ: ವಿ. ಬಾಲಸುಬ್ರಮಣಿಯನ್

ಅನುವಾದ: ಎನ್. ಸಂಧ್ಯಾರಾಣಿ

ಪ್ರಕಾಶನ: ಲಡಾಯಿ ಪ್ರಕಾಶನ, ಗದಗ

ಪುಟಗಳು: 440

ದರ: ₹600

ರಾಜಕಾರಣಿಗಳ ರಾಜರಹಸ್ಯ ಎಲ್ಲರಿಗೂ ತಿಳಿದಿರುವುದಿಲ್ಲ. ರಾಜಕಾರಣಿಗಳೊಂದಿಗೆ ಕೆಲಸ ಮಾಡಿರುವ ಅಧಿಕಾರಿಗಳಿಗಷ್ಟೇ ಗೊತ್ತಿರುತ್ತದೆ

ಎ. ನಾರಾಯಣ, ಅಂಕಣಕಾರ

ಸಲೀಸಾಗಿ ಓದಿಸಿಕೊಂಡು ಹೋಗುವ 'ಕಲ್ಯಾಣ ಕೆಡುವ ಹಾದಿ' ಕೃತಿಯು ರಾಜ್ಯ ರಾಜಕಾರಣದ ಚಿತ್ರಣ ನೀಡಲಿದೆ

ವೆಲೇರಿಯನ್ ರೋಡ್ರಿಗಸ್, ರಾಜಕೀಯ ವಿಶ್ಲೇಷಕ

ಆಡಳಿತವು ನೈತಿಕವಾಗಿ ಪತನಗೊಳ್ಳುತ್ತಾ ಸಾಗುವುದನ್ನು ವಿಷಾದದ ರೂಪದಲ್ಲಿ ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ಜತೆಗೆ ಪರ್ಯಾಯವನ್ನೂ ಸೂಚಿಸಬೇಕಿತ್ತು

ರಹಮತ್ ತರೀಕೆರೆ, ಸಂಸ್ಕೃತಿ ವಿಶ್ಲೇಷಕ

ಆಡಳಿತಾತ್ಮಕವಾದ ವಿವರಗಳನ್ನು ಕೃತಿಯಲ್ಲಿ ನೀಡುವ ಬಾಲಸುಬ್ರಮಣಿಯನ್ ಅವರು ತಮ್ಮ ಸಾಧನೆಯ ಶೇ 10ರಷ್ಟು ವಿವರಗಳನ್ನು ನೀಡಿಲ್ಲ

ರಾಮಚಂದ್ರ ಗೌಡ, ರೇಷ್ಮೆ ಕೃಷಿಕ

ಆಡಳಿತ ವ್ಯವಸ್ಥೆ ಹೇಗೆ ಕೆಡುತ್ತಾ ಹೋಗಿದೆ ಎಂಬುದನ್ನು ಈ ಕೃತಿಯಲ್ಲಿ ಬಾಲಸುಬ್ರಮಣಿಯನ್ ಕಟ್ಟಿಕೊಟ್ಟಿದ್ದಾರೆ. ಅದನ್ನು ಸರಿಪಡಿಸುವುದು ಹೇಗೆ? ಪರ್ಯಾಯ ಏನು ಎಂಬುದನ್ನು ಮುಂದಿನ ಕೃತಿಯಲ್ಲಿ ಬರೆಯಲಿ ಎಂದು ಸಲಹೆ ನೀಡಿದರು.

ಕೃತಿಕಾರ ವಿ. ಬಾಲಸುಬ್ರಮಣಿಯನ್ ಮಾತನಾಡಿ, 'ಭಾರತದಲ್ಲಿ ಈಗ ರೆಸಾರ್ಟ್ ಪ್ರಜಾಪ್ರಭುತ್ವ ಇದೆ. ಎಡ ಪಕ್ಷಗಳನ್ನು ಹೊರತುಪಡಿಸಿ ಮತ್ತೆಲ್ಲ ಪಕ್ಷಗಳು ರೆಸಾರ್ಟ್ ರಾಜಕಾರಣವನ್ನೇ ನಡೆಸುತ್ತಿವೆ. 1984ರಲ್ಲಿ ದೇಶದ ಮೊದಲ ರೆಸಾರ್ಟ್ ರಾಜಕಾರಣ ಕರ್ನಾಟಕದಲ್ಲಿ ನಡೆಯಿತು. ಅದೇ ಎಲ್ಲ ಪಕ್ಷಗಳಿಗೆ ಮಾದರಿಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಪ್ರಜಾಪ್ರಭುತ್ವದ ಮೂರು ಸ್ತಂಭಗಳಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗ ಈಗಾಗಲೇ ಕುಸಿದು ಹೋಗಿದೆ. ನ್ಯಾಯಾಂಗ ವ್ಯವಸ್ಥೆ ಅಲುಗಾಡುತ್ತಿದೆ. ನ್ಯಾಯಾಂಗವೂ ಕುಸಿದರೆ ಆಮೇಲೆ ಪ್ರಜಾಪ್ರಭುತ್ವ ಎನ್ನುವುದು ಕೇವಲ ಪೇಪರ್ ಸ್ಟ್ರಾ ಆಗಲಿದೆ' ಎಂದು ಎಚ್ಚರಿಸಿದರು.

ಕೃತಿಯ ಅನುವಾದಕಿ ಎನ್. ಸಂಧ್ಯಾರಾಣಿ, ಪ್ರಕಾಶಕ ಬಸವರಾಜ್ ಸೂಳಿಬಾವಿ, ಗೌರಿ ಮೀಡಿಯಾ ಟ್ರಸ್ಟ್‌ನ ಗುರುಪ್ರಸಾದ್ ಡಿ.ಎನ್. ಮಾತನಾಡಿದರು.

ಪೋಕ್ಸೊ: ಪೊಲೀಸ್ ಅಧಿಕಾರಿ ಖುಲಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪ್ರಾಪ್ತ ವಯಸ್ಸಿನ ಇಬ್ಬರು ಮಲಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಟಿ.ಆರ್.ಶ್ರೀನಿವಾಸ್ ಅವರನ್ನು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಆರೋಪ ಮುಕ್ತಗೊಳಿಸಿದೆ.

ಈ ಸಂಬಂಧ ಶ್ರೀನಿವಾಸ್ (39) ಅವರ ಎರಡನೇ ಹೆಂಡತಿ (34) ಸಲ್ಲಿಸಿದ್ದ ದೂರಿನ ವಿಚಾರಣೆ ನಡೆಸಿದ ತ್ವರಿತಗತಿಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎ.ಜಿ.ಗಂಗಾಧರ ಅವರು, 'ಪಂಚನಾಮೆಯ ಸಾಕ್ಷ್ಯಗಳು ಆರೋಪವನ್ನು ದೃಢಪಡಿಸಿಲ್ಲ' ಎಂಬ ಕಾರಣದಿಂದ ಪ್ರಕರಣವನ್ನು ವಜಾಗೊಳಿಸಿದ್ದಾರೆ.

ಪ್ರಕರಣವೇನು?: ಶ್ರೀನಿವಾಸ್ ತಮ್ಮ ಮೊದಲ ಹೆಂಡತಿಯಿಂದ ವಿಚ್ಛೇದನ ಪಡೆದ ನಂತರ ಎರಡನೇ ಮದುವೆಯಾಗಿದ್ದರು. ಎರಡನೇ ಹೆಂಡತಿ ಮುಸ್ಲಿಂ ಧರ್ಮಕ್ಕೆ ಸೇರಿದ್ದು ಅವರೂ ತಮ್ಮ ಮೊದಲ ಪತಿಯಿಂದ ವಿಚ್ಛೇದನ ಪಡೆದಿದ್ದರು. ಈಕೆಗೆ ಅಪ್ರಾಪ್ತ ವಯಸ್ಸಿನ ಇಬ್ಬರು ಹೆಣ್ಣು ಮಕ್ಕಳಿದ್ದು, ದಂಪತಿ 2012ರಿಂದ ಜೆ.ಸಿ.ನಗರದ ಮುದ್ದಣ್ಣ ಗಾರ್ಡನ್ ಪ್ರದೇಶದಲ್ಲಿನ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದರು.

ದಾಂಪತ್ಯದಲ್ಲಿ ತಲೆದೋರಿದ ಕ್ಷುಲ್ಲಕ ಕಾರಣಗಳ ಪರಿಣಾಮ ಶ್ರೀನಿವಾಸ್ ಅವರ ಎರಡನೇ ಪತ್ನಿ ಠಾಣೆಗೆ ದೂರೊಂದನ್ನು ಸಲ್ಲಿಸಿದ್ದರು. 'ನನ್ನ ಇಬ್ಬರೂ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ' ಎಂದು ಆರೋಪಿಸಿ ಇಂಗ್ಲಿಷ್‌ನಲ್ಲಿ ಬರೆದ ಲಿಖಿತ ದೂರೊಂದನ್ನು ಅಂಚೆ ಕಚೇರಿ ಮೂಲಕ ಸಕ್ಷಮ ಪ್ರಾಧಿಕಾರಗಳಿಗೆ ರವಾನಿಸಿದ್ದರು.

ಇದರನ್ವಯ ಪೊಲೀಸರು ಶ್ರೀನಿವಾಸ್ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಕಾಯ್ದೆಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿಕೊಂಡು ಶ್ರೀನಿವಾಸ್ ಅವರನ್ನು 2022ರ ಜುಲೈ 1ರಂದು ಬಂಧಿಸಿದ್ದರು. ದೂರನ್ನು ಅಲ್ಲಗಳೆದಿದ್ದ ಶ್ರೀನಿವಾಸ್, 'ಈ ದೂರು ಸಲ್ಲಿಸಲು ನನ್ನ ಸಹೋದ್ಯೋಗಿಯಾದ ಮಹಿಳಾ ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಯಾಸ್ಮಿನ್ ತಾಜ್ ಕುಮ್ಮಕ್ಕು ನೀಡಿದ್ದಾರೆ' ಎಂದು ಪ್ರತಿ ಆರೋಪ ಮಾಡಿದ್ದರು. ಅಂತೆಯೇ, 2022ರ ಡಿಸೆಂಬರ್‌ನಲ್ಲಿ ನ್ಯಾಯಾಲಯದಿಂದ ಜಾಮೀನು ಪಡೆದಿದ್ದರು.

ವಿಚಾರಣೆ ವೇಳೆ ಫಿರ್ಯಾದುದಾರಳೂ ಆದ ಎರಡನೇ ಹೆಂಡತಿ ಹಾಗೂ ಅವರ ಸಂತ್ರಸ್ತ ಪುತ್ರಿಯರಲ್ಲಿ ಒಬ್ಬಾಕೆ ಕೋರ್ಟ್‌ಗೆ ಹಾಜರಾಗಿ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ-1973 (ಸಿಆರ್‌ಪಿಸಿ) ಕಲಂ 161 ಮತ್ತು 164ರ ಅನುಸಾರ ಹೇಳಿಕೆ ನೀಡಿದ್ದರು. ತಮ್ಮ ವಿರುದ್ಧದ ಆರೋಪಗಳನ್ನು ಸಾರಾಸಗಟಾಗಿ ತಳ್ಳಿ ಹಾಕಿದ್ದರು. ಮತ್ತೊಬ್ಬ ಸಂತ್ರಸ್ತ ಬಾಲಕಿ ಗೈರಾಗಿದ್ದರು.

ಶ್ರೀನಿವಾಸ್ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್, 'ಈ ದೂರು ದುರುದ್ದೇಶದಿಂದ ಕೂಡಿದೆ. ಸಂತ್ರಸ್ತ ಬಾಲಕಿಯರ ವೈದ್ಯಕೀಯ ವರದಿಗಳು ಆರೋಪವನ್ನು ದೃಢೀಕರಿಸುವುದಿಲ್ಲ. ಹಾಗಾಗಿ ಹುರುಳಿಲ್ಲದ ಈ ಆರೋಪದಿಂದ ಶ್ರೀನಿವಾಸ್ ಅವರನ್ನು ದೋಷಮುಕ್ತಗೊಳಿಸಬೇಕು' ಎಂದು ಕೋರಿ ವಾದ ಮಂಡಿಸಿದ್ದರು. ಇದನ್ನು ಪರಿಗಣಿಸಿದ ನ್ಯಾಯಾಧೀಶರು ಒಟ್ಟು 22 ಸಾಕ್ಷಿಗಳ ವಿಚಾರಣೆ ನಡೆಸುವ ಮೂಲಕ ಶ್ರೀನಿವಾಸ್ ಅವರನ್ನು ಪೋಕ್ಸೊ ಪ್ರಕರಣದಿಂದ ಖುಲಾಸೆಗೊಳಿಸಿದೆ.

ಕರಾಟೆ: ಗಗನಾ, ಖುಷಿಗೆ ಚಿನ್ನ


ಗಗನಾ ಎಸ್‌


ಖುಷಿ ಸುಧೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೀಸ್‌ನಲ್ಲಿ ಭಾನುವಾರ ನಡೆದ 30ನೇ ಎಸ್‌ಕೆಡಿಯುಎನ್ ವಿಶ್ವ ಶೋಟೋಕಾನ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಮಲ್ಲೇಶ್ವರದ ಕ್ಲೂನಿ ಕಾನ್ವೆಂಟ್‌ನ ವಿದ್ಯಾರ್ಥಿಗಳಾದ ಗಗನಾ ಎಸ್. ಮತ್ತು ಖುಷಿ ಸುಧೀರ್ 'ಡುವೋ ಕಟಾ' ವಿಭಾಗದಲ್ಲಿ ಚಿನ್ನ ಗೆದ್ದಿದ್ದಾರೆ.

ಯುನಿಫೈಟ್ ಗ್ರೀಸ್ ಮತ್ತು ಟಕಿಶೋಕು ಸ್ಕೂಲ್ ಆಫ್ ಮಾರ್ಷಲ್ ಆರ್ಟ್ಸ್ ಸಹಯೋಗದಲ್ಲಿ ವಿಶ್ವಸಂಸ್ಥೆಯ ಶೋಟೊಕಾನ್ ಕರಾಟೆ-ಡೊ ಈ ಸ್ಪರ್ಧೆಯನ್ನು ಆಯೋಜಿಸಿತ್ತು.

ಮಿಶ್ರ ಜೋಡಿಯಲ್ಲಿ ಗಗನಾ ಬೆಳ್ಳಿ ಗೆದ್ದಿದ್ದಾರೆ. ಕಿಹೊನ್ ಇಪ್ಪಾನ್ ಮತ್ತು ಸನ್ಬನ್ ಕುಮಿಟೆ ವಿಭಾಗದಲ್ಲಿ ಗಗನಾ, ಖುಷಿ ಇಬ್ಬರೂ ಕಂಚು ಗೆದ್ದಿದ್ದಾರೆ.

ಗಗನಾ 8ನೇ ತರಗತಿ, ಖುಷಿ 6ನೇ ತರಗತಿಯಲ್ಲಿ ಓದುತ್ತಿದ್ದಾರೆ. ಅದೇ ಶಾಲೆಯಲ್ಲಿ 6ನೇ ತರಗತಿಯಲ್ಲಿ ಓದುತ್ತಿರುವ ಆಶ್ಲೇಷಾ ಅನಂತ್ ಅವರು ಕಿಹೊನ್ ಇಪ್ಪಾನ್‌ನಲ್ಲಿ ಕಂಚು ಗೆದ್ದಿದ್ದಾರೆ.

ಸಿಂಧಿ ಶಾಲೆಯ ಆದಿತ್ಯ, ಲಕ್ಷ್ಮಣ್ ಮತ್ತು ಶೀತಲ್ ಮೆನನ್ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದಿದ್ದಾರೆ. ಈ ವಿದ್ಯಾರ್ಥಿಗಳಿಗೆ ಮಹಾಲಕ್ಷ್ಮಿ, ವರುಣ್ ಮತ್ತು ಕಸ್ತೂರಿ ರಾಜೇಂದ್ರನ್ ತರಬೇತಿ ನೀಡುತ್ತಿದ್ದಾರೆ.

ವನ್ಯಜೀವಿ ಸಪ್ತಾಹ: ಜಾಗೃತಿ ನಡಿಗೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ವನ್ಯಜೀವಿಗಳ ಸಂರಕ್ಷಣೆ ಹಾಗೂ ಅವುಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಅಕ್ಟೋಬರ್ 2ರಿಂದ 8ರವರೆಗೆ ವನ್ಯಜೀವಿ ಸಪ್ತಾಹ ಆಚರಿಸಲಾಗುತ್ತಿದ್ದು, ಇದರ ಭಾಗವಾಗಿ ನಗರದ ಕಬ್ಬನ್ ಉದ್ಯಾನದಿಂದ ಲಾಲ್‌ಬಾಗ್ ಉದ್ಯಾನದವರೆಗೆ ಸೋಮವಾರ ನಡಿಗೆ ಹಮ್ಮಿಕೊಳ್ಳಲಾಯಿತು.

ವನ್ಯಜೀವಿ ಸಪ್ತಾಹಕ್ಕೆ ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ ಚಾಲನೆ ನೀಡಿದರು. ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಹಾಜರಿದ್ದರು. ಈಶ್ವರ್ ಖಂಡ್ರೆ ಮಾತನಾಡಿ, 'ಇಂದು ನಾವು ಅತ್ಯಂತ ಸಂಕಷ್ಟದ ಸ್ಥಿತಿಯಲ್ಲಿದ್ದೇವೆ. ಹವಾಮಾನ ವೈಪರೀತ್ಯ ಹಾಗೂ ಜಾಗತಿಕ ತಾಪಮಾನ ಏರಿಕೆಯಿಂದ ನಾನಾ ಸಮಸ್ಯೆಗಳು ಉದ್ಭವಿಸುತ್ತಿವೆ. ಸಮಸ್ಯೆ ನಿವಾರಣೆಗೆ ಹಸಿರು ಹೊದಿಕೆ ಪ್ರಮಾಣ ಹೆಚ್ಚಿಸುವುದೇ ಪರಿಹಾರ' ಎಂದು ಹೇಳಿದರು.


69ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ನಡಿಗೆಯಲ್ಲಿ ಪಾಲ್ಗೊಂಡಿದ್ದ ಹುಲಿ ವೇಷಧಾರಿಗಳು ನೋಡುಗರ ಗಮನ ಸೆಳೆದರು

'ಅರಣ್ಯ ವ್ಯಾಪ್ತಿ ಕ್ಷೀಣಿಸಿದರೆ, ಮಾನವ - ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತದೆ. ಇತ್ತೀಚೆಗೆ ಆನೆಗಳ ದಾಳಿಯಿಂದ ಹಲವರು ಮೃತಪಟ್ಟಿದ್ದಾರೆ. ಆನೆಗಳ ದಾಳಿ ತಡೆಗೆ ರೈಲ್ವೆ ಕಂಬಿಗಳ ತಡೆಗೋಡೆ ನಿರ್ಮಿಸಲಾಗುತ್ತಿದೆ' ಎಂದರು.

'ಮೈಸೂರು, ಬೀದರ್, ಕಲಬುರಗಿ, ಧರ್ಮಸ್ಥಳ ಮತ್ತು ತುಮಕೂರು ನಗರವನ್ನು ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ಎಂದು ಘೋಷಿಸಲಾಗಿದೆ. ಪ್ರಜ್ಞಾವಂತರಾದ ನಾವೆಲ್ಲರೂ ಏಕ ಬಳಕೆ ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕು. ಜಾಗೃತಿ ಮೂಡಿಸಬೇಕು' ಎಂದು ಸಚಿವ ಹೇಳಿದರು.


ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್.ಶಿವಣ್ಣ ಮಳವಳ್ಳಿ ಅವರು ನಗರದಲ್ಲಿ 11 ಬಡ ಪ್ರತಿಭಾವಂತ ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಿಸಿದರು

—ಪ್ರಜಾವಾಣಿ ಚಿತ್ರ

ಆರೋಗ್ಯ ತಪಾಸಣಾ ಉಚಿತ ಶಿಬಿರ

'ಸಂತೃಪ್ತಿ ಜೀವನಕ್ಕೆ ಆರೋಗ್ಯ ಸಹಕಾರಿ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಶಾಂತಿ ಮತ್ತು ಸಂತೃಪ್ತಿಯಿಂದ ಜೀವನ ನಡೆಸಲು ಆರೋಗ್ಯ ಉತ್ತಮವಾಗಿರಬೇಕು ಎಂದು ಕೆಬಿಸಿ ಟ್ರಸ್ಟ್ ಅಧ್ಯಕ್ಷ ಕೆ.ಸಿ. ಅಶೋಕ್ ತಿಳಿಸಿದರು.

ಗಾಂಧಿ ಜಯಂತಿ ಪ್ರಯುಕ್ತ ಕಮ್ಮಗೊಂಡನಹಳ್ಳಿಯ ಅಶೋಕ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಆವರಣದಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಉಚಿತ ಶಿಬಿರದಲ್ಲಿ ಅವರು ಮಾತನಾಡಿದರು.

27 ವರ್ಷಗಳಿಂದ ಕೆಬಿಸಿ ಟ್ರಸ್ಟ್‌ನಿಂದ ಆರೋಗ್ಯ ಉಚಿತ ಶಿಬಿರ ನಡೆಸಲಾಗುತ್ತಿದೆ. 3000ಕ್ಕೂ ಹೆಚ್ಚು ಬಾಟಲಿ ರಕ್ತವನ್ನು ರಕ್ತನಿಧಿಗೆ ನೀಡಲಾಗಿದೆ. ನೇತ್ರ ತಪಾಸಣೆ ಮಾಡಿಸಿ ಸಾವಿರಕ್ಕೂ ಹೆಚ್ಚು ಜನರಿಗೆ ಕನ್ನಡಕ, ನೂರಾರು ಜನರಿಗೆ ನೇತ್ರ ಚಿಕಿತ್ಸೆ, 15ಕ್ಕೂ ಹೆಚ್ಚು ಜನರಿಗೆ ಹೃದಯ ಚಿಕಿತ್ಸೆ ನಡೆಸಲಾಗಿದೆ. ವಿವಿಧ ರೋಗಗಳಿಗೆ ಔಷಧ ನೀಡಲಾಗಿದೆ' ಎಂದು ತಿಳಿಸಿದರು.


ಕಮ್ಮಗೊಂಡನಹಳ್ಳಿಯ ಅಶೋಕ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಆವರಣದಲ್ಲಿ ನಡೆದ ಆರೋಗ್ಯ ಉಚಿತ ತಪಾಸಣಾ ಶಿಬಿರದಲ್ಲಿ ಯುವಜನರು ರಕ್ತದಾನ ಮಾಡಿದರು

200ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು. ಅಪಾರ ಮಂದಿ ಆರೋಗ್ಯ ತಪಾಸಿಸಿಕೊಂಡರು. ರೋಷನ್, ಜಬ್ಬಾರ್, ರಮೇಶ ಯಾದವ್, ಸಲೀಂ, ಅನಸೂಯಮ್ಮ ಇದ್ದರು.



IN THE SUPREME COURT OF INDIA
EXTRA-ORDINARY APPELLATE JURISDICTION

SPECIAL LEAVE PETITION (CIVIL) No(s) 4564-4565 OF 2023

WITH PRAYER FOR INTERIM RELIEF

GOVIND N MALU ... Petitioner(s)

VERSUS

CHOWDAIAH AND OTHERS ... Respondent(s)

To,

1.	CHOWDAIAH, RESIDING AT UJJANAHALLI, SATHANOOR HOBLI, CHANNAPATNA TALUK - 571 501 DISTRICT - CHAMARAJANAGAR, KARNATAKA	PID: 190260/2023 FOR R[1] IN SLP(C) NO. 4564-4565/2023 (SEC IV-A)
2.	KANTAPPA, RESIDING AT NO.13, LIG-D, 1ST MAIN, KENGERI SATELLITE TOWN, DISTRICT -. BANGALORE, KARNATAKA - 560 060	PID: 190261/2023 FOR R[2] IN SLP(C) NO. 4564/2023, IN SLP(C) NO. 4565/2023, SLP(C) NO.4564-4565/2023 (SEC IV-A)
3.	VISHAKANTAPPA, UJJANAHALLI, SATHNOOR HOBLI, CHANNAPATNA TALUK 571 501, DISTRICT - OTHER	PID: 190262/2023 FOR R[3] IN SLP(C) NO. 4564/2023, SLP(C) 4565/2023 SLP(C) NO.4564-4565/2023 (SEC IV-A)
4.	CHAMAIAH S/o LATE CHAMUNDAIAH, RESIDING AT NO.136, LIG-D, 1ST MAIN, KENGERI SATELLITE TOWN, DISTRICT- DISTRICT -. BANGALORE, KARNATAKA - 560 060	PID: 190263/2023 FOR R[4] IN SLP(C) NO. 4564/2023, IN SLP(C) NO. 4565/2023 SLP(C) NO. 4564-4565/2023 (SEC IV-A)
5.	SMT. CHANDRAMMA D/o LATE CHAMUNDAIAH, RESIDING AT NO. 136, LIG-D, 1ST MAIN, KENGERI SATELLITE TOWN, DISTRICT, BANGALORE, KARNATAKA - 560 060	PID: 190264/2023 FOR R[5] IN SLP(C) NO. 4564/2023, IN SLP(C) NO. 4565/2023, SLP(C) NO. 4564-4565/2023 (SEC IV-A)

WHEREAS the Petition for Special Leave to Appeal with prayer for interim relief along with application for **EXEMPTION FROM FILING C/C OF THE IMPUGNED JUDGEMENT, PERMISSION TO FILE ADDITIONAL DOCUMENTS / FACTS / ANNEXURES, PERMISSION TO FILE ADDITIONAL DOCUMENTS / FACTS / ANNEXURES, APPLICATION FOR PERMISSION, PERMISSION TO FILE ADDITIONAL DOCUMENTS / FACTS / ANNEXURES, EXEMPTION FROM FILING O.T., PERMISSION TO FILE ADDITIONAL DOCUMENTS / FACTS / ANNEXURES, EXEMPTION FROM FILING O.T., APPLICATION FOR PERMISSION, SUBSTITUTED SERVICE** above mentioned (copy enclosed) filed in the Registry by **NISHANTH PATIL,** Advocate on behalf of the Petitioner(s) above named was listed for hearing before this Court on **27th March, 2023,** when the Court was pleased to pass the following order:-

> **" Mr. P. Vishwanath Shetty, learned Senior Counsel would refer to the sale agreement dated 4.10.2004 to point out that the vendor had bound himself to register the sale deed by receiving the balance sale consideration within two months from the date of the agreement. Yet this important facet was ignored and although the Trial Court decreed the suit for specific performance, the appellate Court and the High Court reversed the decree by upholding the subsequent sale made on 06.12.2004, by the very same vendor. "**

Issue notice.

In the meantime, no alienation of the suit property be made. I. A. No. 55922/2023, application for permission to amend Para 8(i) of the Synopsis and Para 5(A) of the grounds in the present SLP is allowed."

AND WHEREAS, the matter above-mentioned was listed before Ld. Registrar's Court on 21st September, 2023, When the following order was passed:-

> **" In view of Hon'ble Court's Order dated 27.03.2023, two weeks time, is granted to Ld. Counsel for the petitioner for filing amended synopsis of the ground in SLP.**
>
> **Despite due service on respondent no. 6, there is no appearance.**
>
> **Ld. Counsel for petitioner has filed application for paper publication in respect of respondent nos. 1 to 5. Same is allowed. Registry to process.**
>
> **List again on 22.11.2023."**

NOW, THEREFORE, TAKE NOTICE that the above petition with prayer for interim relief along with applications will be posted for hearing before this Court in due course and you may enter appearance before this Court either in person or through an advocate on record of this Court duly appointed by you in that behalf within 30 days from the date of service of notice. You may thereafter show cause to the Court on the day that may subsequently be specified as to why Special Leave Petition and interim relief as prayed be not granted and the resultant appeal be not allowed.

Take Further Notice that the prayer for interim relief after notice will also be listed before the Court in due course.

You may file your affidavit in opposition to the petition as provided under Rule 14(1) of Order XXI, S.C.R.2013 within 30 days from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court / Tribunal against whose order the SLP is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Sd/-

Dated : 22nd September, 2023

ASSISTANT REGISTRAR

ವಿದ್ಯುತ್ ಕಂಬಕ್ಕೆ ಹಾನಿಯಾದ ಬಗ್ಗೆ ದೂರು ನೀಡುವುದಾಗಿ ಹೇಳಿರುವ ಬೆಸ್ಕಾಂ

ಅಪಘಾತ: ನಟ ನಾಗಭೂಷಣ್ ವಿರುದ್ಧ ಮತ್ತೊಂದು ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತೀ ವೇಗದಲ್ಲಿ ನಿರ್ಲಕ್ಷ್ಯದಿಂದ ಕಾರು ಚಾಲನೆ ಮಾಡಿ ಎಸ್. ಪ್ರೇಮಾ (48) ಸಾವಿಗೆ ಕಾರಣವಾಗಿರುವ ಪ್ರಕರಣದ ಆರೋಪಿ ನಟ ನಾಗಭೂಷಣ್ ವಿರುದ್ಧ ಮತ್ತೊಂದು ಪ್ರಕರಣ ದಾಖಲಿಸಿಕೊಳ್ಳಲು ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸರು ಮುಂದಾಗಿದ್ದಾರೆ.

‘ಜೆ.ಪಿ.ನಗರದ ನಿವಾಸಿ ಎನ್. ಎಸ್. ನಾಗಭೂಷಣ್ ಅವರ ಕಾರು, ಮೊದಲಿಗೆ ಪ್ರೇಮಾ ಹಾಗೂ ಅವರ ಪತಿ ಕೃಷ್ಣ ಅವರಿಗೆ ಗುದ್ದಿತ್ತು. ನಂತರ, ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ವಿದ್ಯುತ್ ಕಂಬಕ್ಕೆ ಹಾನಿಯಾಗಿದ್ದು, ಬೆಸ್ಕಾಂಗೆ ನಷ್ಟ ಉಂಟಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಘಾತದಲ್ಲಿ ಪ್ರೇಮಾ ಮೃತಪಟ್ಟಿದ್ದಾರೆ. ಪತಿ ಕೃಷ್ಣ ಅವರ ಆರೋಗ್ಯ ಸ್ಥಿತಿಯೂ ಚಿಂತಾಜನಕವಾಗಿದೆ. ಆರೋಪಿ ವಿರುದ್ಧ ನಿರ್ಲಕ್ಷ್ಯದಿಂದ ಸಾವು (304–ಎ) ಆರೋಪದಡಿ ಈಗಾಗಲೇ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.’

‘ವಿದ್ಯುತ್ ಕಂಬಕ್ಕೆ ಹಾನಿಯಾಗಿರುವ ಬಗ್ಗೆ ಬೆಸ್ಕಾಂ ಎಂಜಿನಿಯರ್‌ಗಳು ದೂರು ನೀಡುವುದಾಗಿ ಹೇಳಿದ್ದಾರೆ. ಅವರು ದೂರು ನೀಡುತ್ತಿದ್ದಂತೆ, ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟುಮಾಡಿದ (ಐಪಿಸಿ 427) ಆರೋಪದಡಿ ನಾಗಭೂಷಣ್ ವಿರುದ್ಧ ಮತ್ತೊಂದು ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.


ನಾಗಭೂಷಣ್

ಹೇಳಿಕೆ ಸಂಗ್ರಹ, ಮತ್ತೊಮ್ಮೆ ನೋಟಿಸ್: ‘ಅಪಘಾತ ಸಂಬಂಧ ಪ್ರಕರಣ ದಾಖಲಾಗುತ್ತಿದ್ದಂತೆ ನಾಗಭೂಷಣ್ ಅವರನ್ನು ವಶಕ್ಕೆ ಪಡೆಯಲಾಗಿತ್ತು. ಅವರಿಂದ ಹೇಳಿಕೆ ಪಡೆಯಲಾಗಿದೆ. ಈಗ ಮತ್ತೊಂದು ಪ್ರಕರಣ ದಾಖಲಾದರೆ, ಪುನಃ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಮೂಲಗಳು ತಿಳಿಸಿವೆ. ‘ಉತ್ತರಹಳ್ಳಿಯ ವಸಂತಪುರ ಮುಖ್ಯರಸ್ತೆಯಲ್ಲಿರುವ ಸುಪ್ರಭಾತ್ ಡ್ರೀಮ್ ಬ್ರೀಜೆ ಅಪಾರ್ಟ್‌ಮೆಂಟ್ ಸಮುಚ್ಚಯದ ಎದುರು ಅಪಘಾತ ಸಂಭವಿಸಿತ್ತು. ಇದಕ್ಕೆ ಸಂಬಂಧಪಟ್ಟಂತೆ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಲಾಗಿದೆ. ಅವುಗಳ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಹೇಳಿವೆ.

ಅಪರಾಧ ಸುದ್ದಿ

ಪತ್ನಿ ಖಾಸಗಿ ವಿಡಿಯೊ ಮಾಡಿ ಬ್ಲ್ಯಾಕ್‌ಮೇಲ್: ಚಾಕು ಇರಿತ

ಬೆಂಗಳೂರು: ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ಆರೋಗ್ಯದಾಸ್ ಎನ್ನುವವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿ ನಾಗರಾಜ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯ ನಿವಾಸಿ ನಾಗರಾಜ್, ವೆಲ್ಡಿಂಗ್ ಕೆಲಸ ಮಾಡುತ್ತಿದ್ದ. ಪತ್ನಿ ಜೊತೆ ವಾಸವಿದ್ದ. ತನ್ನ ಪತ್ನಿಯ ಖಾಸಗಿ ವಿಡಿಯೊ ಮತ್ತು ಫೋಟೊಗಳನ್ನು ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆಂದು ಆರೋಪಿಸಿ ಆರೋಗ್ಯದಾಸ್‌ಗೆ ಚಾಕುವಿನಿಂದ ಇರಿದಿದ್ದ. ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಆರೋಪಿಯ ಪತ್ನಿ ಹಾಗೂ ಆರೋಗ್ಯದಾಸ್, ಹಲವು ವರ್ಷಗಳಿಂದ ಪರಿಚಿತರು. ಇಬ್ಬರ ನಡುವೆ ಸಲುಗೆ ಇತ್ತು ಎಂದು ಗೊತ್ತಾಗಿದೆ. ಆರೋಪಿಯ ಪತ್ನಿಯ ಖಾಸಗಿ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿಟ್ಟುಕೊಂಡಿದ್ದ ಆರೋಗ್ಯದಾಸ್, ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸುತ್ತಿದ್ದರು. ವಿಷಯ ತಿಳಿಯುತ್ತಿದ್ದಂತೆ ಸಿಟ್ಟಾಗಿದ್ದ ನಾಗರಾಜ್, ಆರೋಗ್ಯದಾಸ್‌ಗೆ ತಾಕೀತು ಮಾಡಿದ್ದ. ಇದೇ ವಿಚಾರವಾಗಿ ವೈಷಮ್ಯ ಬೆಳೆದಿತ್ತು. ಆರೋಗ್ಯದಾಸ್ ಕೊಲ್ಲಲು ನಾಗರಾಜ್ ಸಂಚು ರೂಪಿಸಿದ್ದ. ಪತ್ನಿಯ ಮೂಲಕ ಕರೆ ಮಾಡಿಸಿ ಸೆಪ್ಟೆಂಬರ್ 30ರಂದು ಮಧ್ಯಾಹ್ನ ಆತನನ್ನು ಮನೆಗೆ ಕರೆಸಿಕೊಂಡಿದ್ದ. ಆರೋಪಿ ನಾಗರಾಜ್ ಮನೆಯಲ್ಲಿದ್ದನ್ನು ನೋಡಿ ಆರೋಗ್ಯದಾಸ್ ಪರಾರಿಯಾಗಲು ಯತ್ನಿಸಿದ್ದರು. ಇದೇ ವೇಳೆ ಆರೋಪಿ, ಚಾಕುವಿನಿಂದ ಆರೋಗ್ಯದಾಸ್‌ಗೆ ಇರಿದಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮನಾಲಿ: ಚಾರಣಕ್ಕೆ ತೆರಳಿದ್ದ ಬೆಂಗಳೂರಿನ ವ್ಯಕ್ತಿ ನಾಪತ್ತೆ

ಮನಾಲಿ/ಶಿಮ್ಲಾ (ಪಿಟಿಐ): ಮನಾಲಿ ಹೊರವಲಯದ ಅರಣ್ಯ ಪ್ರದೇಶಕ್ಕೆ ನಾಲ್ಕು ದಿನಗಳ ಹಿಂದೆ ಚಾರಣ ತೆರಳಿದ್ದ ಬೆಂಗಳೂರಿನ ವ್ಯಕ್ತಿ ನಾಪತ್ತೆಯಾಗಿದ್ದಾರೆ. ಅವರ ಪತ್ತೆಗೆ ಶೋಧ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿನ ರಾಹುಲ್ ರಮೇಶ್ (35) ನಾಪತ್ತೆ ಆದವರು. ಇವರು ಚಾರಣಕ್ಕಾಗಿ ಸೆ. 28ರಂದು ಅರಣ್ಯವನ್ನು ಪ್ರವೇಶಿಸಿದ್ದರು ಎಂದು ಪೊಲೀಸರು ವಿವರಿಸಿದ್ದಾರೆ.

ಚಾರಣ ಬಳಿಕ ರಮೇಶ್ ಶಿಬಿರಕ್ಕೆ ಮರಳಿಲ್ಲ ಎಂದು ಅವರ ಸ್ನೇಹಿತ ಮಾಹಿತಿ ನೀಡಿದ್ದಾರೆ. ಇವರು ಮನಾಲಿಯಲ್ಲಿ ಸೆಪ್ಟೆಂಬರ್ 30ರಿಂದ ಎರಡು ದಿನ ನಡೆಯಲಿದ್ದ ಸೊಲಾಂಗ್ ಸ್ಕೈಅಲ್ಟ್ರಾ ಕಾರ್ಯಕ್ರಮಕ್ಕಾಗಿ ಬಂದಿದ್ದರು.

ಡಿಎಸ್‌ಪಿ ನೇತೃತ್ವದ ತಂಡ ಶೋಧ ಕಾರ್ಯದಲ್ಲಿ ತೊಡಗಿದೆ. ಇದುವರೆಗೂ ಅವರ ಸುಳಿವು ದೊರೆತಿಲ್ಲ. ಇವರ ಮೊಬೈಲ್ ಫೋನ್ ಸೆ. 29ರಂದು ಜೋಗಿನಿ ಫಾಲ್ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದೆ ಎಂದು ಕುಲು ಪೊಲೀಸ್ ವರಿಷ್ಠಾಧಿಕಾರಿ ಸಾಕ್ಷಿ ವರ್ಮಾ ಸೋಮವಾರ ತಿಳಿಸಿದರು.



ವೇಗನ್ ಇಂಡಿಯಾ ಮೂವ್‌ಮೆಂಟ್ (ವಿಐಎಂ) ಮತ್ತು ಬೆಂಗಳೂರು ಬ್ರಿಗೇಡ್ ಫಾರ್ ಅನಿಮಲ್ ಲಿಬರೇಶನ್ (ಬಿಬಿಎಎಲ್) ಸದಸ್ಯರು ಬ್ರಿಗೇಡ್ ರಸ್ತೆಯ ಸಪ್ವರ್ ವಾರ್ ಮೆಮೋರಿಯಲ್‌ನಲ್ಲಿ ಪ್ರಾಣಿ ಹತ್ಯೆ ತಡೆಯಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು ಪ್ರಜಾವಾಣಿ ಚಿತ್ರ

ಮಹಿಳಾ ಉದ್ಯಮಿ ರಕ್ಷಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಮಹಿಳಾ ಉದ್ಯಮಿಯೊಬ್ಬರನ್ನು ಅಪಹರಿಸಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಜಾಲಹಳ್ಳಿಯ ಜಯರಾಮ್ (48), ಸಾದಿಕ್ (37), ಫರೀದಾ (36), ಅಸ್ಮಾ (34) ಹಾಗೂ ನಜ್ಮಾ (32) ಬಂಧಿತರು. ಮಹಿಳಾ ಉದ್ಯಮಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಿವೃತ್ತ ಸೇನಾಧಿಕಾರಿಯೊಬ್ಬರ ಪತ್ನಿಯಾಗಿರುವ ದೂರುದಾರ ಮಹಿಳೆ, ಹೊರವರ್ತುಲ ರಸ್ತೆಯ ಎಂಇಎಸ್ ಬಳಿ ಹೋಟೆಲ್ ನಡೆಸುತ್ತಿದ್ದಾರೆ. ಅ. 1ರಂದು ಮಧ್ಯಾಹ್ನ ಹೋಟೆಲ್‌ಗೆ ಬಂದಿದ್ದ ಆರೋಪಿಗಳು, ಬಾಡಿಗೆಗೆ ಕೊಠಡಿ ಕೇಳಿದ್ದರು. ಸ್ಥಳೀಯ ವಿಳಾಸದ ಗುರುತಿನ ಚೀಟಿ ನೀಡಿದ್ದರು. ಆದರೆ, ಸ್ಥಳೀಯರಿಗೆ ಕೊಠಡಿ ಕೊಡುವುದಿಲ್ಲವೆಂದು ಮಹಿಳೆ ಹೇಳಿದ್ದರು.’

‘ಕೊಠಡಿ ಕೊಡದಿದ್ದಕ್ಕೆ ಸಿಟ್ಟಾಗಿದ್ದ ಆರೋಪಿಗಳು, ಮಹಿಳೆ ಜೊತೆ ಜಗಳ ತೆಗೆದಿದ್ದರು. ಹೋಟೆಲ್‌ನ ಗಾಜು ಒಡೆದಿದ್ದರು. ನಂತರ, ದೂರುದಾರ ಮಹಿಳೆಯನ್ನು ಹೋಟೆಲ್‌ನಿಂದ ಹೊರಗೆ ಎಳೆದುಕೊಂಡು ಬಂದು ಆಟೊದಲ್ಲಿ ಕೂರಿಸಿ ಅಪಹರಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಟೊ ತಡೆದಿದ್ದ ಸಂಚಾರ ಪೊಲೀಸರು: ‘ಆಟೊದಲ್ಲಿದ್ದ ಮಹಿಳೆ, ರಕ್ಷಣೆಗಾಗಿ ಕೂಗಿದ್ದರು. ರಸ್ತೆಯಲ್ಲಿ ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸರು, ಅನುಮಾನಗೊಂಡು ಆಟೊ ಬೆನ್ನಟ್ಟಿ ನಿಲ್ಲಿಸಿದ್ದರು. ಅದೇ ಸಂದರ್ಭದಲ್ಲಿ ಮಹಿಳೆ, ಅಪಹರಣ ಸಂಗತಿ ಹೇಳಿದ್ದರು’ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿದೆ.

‘ಆರೋಪಿಗಳನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಆಟೊ ಸಮೇತ ಠಾಣೆಗೆ ಕರೆತಂದು ಒಪ್ಪಿಸಿದ್ದಾರೆ. ಸಂಚಾರ ಪೊಲೀಸರ ಕೆಲಸದಿಂದ ಮಹಿಳೆ ಸುರಕ್ಷಿತವಾಗಿದ್ದಾರೆ. ಆರೋಪಿಗಳ ಉದ್ದೇಶವೇನಿತ್ತು? ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದು ಮೂಲಗಳು ಹೇಳಿವೆ.

ಅಪಹರಿಸಿ ₹ 50 ಲಕ್ಷಕ್ಕೆ ಬೇಡಿಕೆ: ನಾಲ್ವರು ವಶಕ್ಕೆ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ವ್ಯಾಪಾರಿಯೊಬ್ಬರನ್ನು ಅಪಹರಿಸಿ ₹ 50 ಲಕ್ಷಕ್ಕೆ ಬೇಡಿಕೆ ಇರಿಸಲಾಗಿದ್ದು, ಈ ಸಂಬಂಧ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಅಪಹರಣ ಸಂಬಂಧ ಪ್ಲೈವುಡ್ ವ್ಯಾಪಾರಿ ಎಸ್. ರಂಜಿತ್ ದೂರು ನೀಡಿದ್ದರು. ಆರೋಪಿಗಳಾದ ಸಂತೋಷ್, ರವಿತೇಜ್, ಅಜಾನ್ ಹಾಗೂ ರಾಜಶೇಖರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಸಂತೋಷ್, ಫೈನಾನ್ಸ್ ವ್ಯವಹಾರ ಮಾಡುತ್ತಿದ್ದ. ನಾಲ್ಕು ವರ್ಷಗಳ ಹಿಂದೆ ದೂರುದಾರ ರಂಜಿತ್ ಪರಿಚಯವಾಗಿತ್ತು. ಆರ್ಥಿಕ ಕಷ್ಟದಲ್ಲಿದ್ದ ರಂಜಿತ್, ವ್ಯವಹಾರ ಅಭಿವೃದ್ಧಿಗಾಗಿ ಸಂತೋಷ್ ಬಳಿ ಹಂತ ಹಂತವಾಗಿ ₹14 ಲಕ್ಷ ಸಾಲ ಪಡೆದಿದ್ದರು. ಸಂತೋಷ್, ಶೇ 5ರಿಂದ ಶೇ 10ರಷ್ಟು ಬಡ್ಡಿ ವಿಧಿಸಿದ್ದ. ಇದರಿಂದಾಗಿ ಅಸಲು ಬಡ್ಡಿ ಸೇರಿ ₹ 23 ಲಕ್ಷವಾಗಿತ್ತು. ಪುನಃ ಸಾಲ ಹೆಚ್ಚಾಗಬಹುದೆಂದು ತಿಳಿದಿದ್ದ ರಂಜಿತ್, ಮನೆಯ ದಾಖಲೆಗಳನ್ನು ಬ್ಯಾಂಕ್‌ವೊಂದರಲ್ಲಿ ಅಡವಿಟ್ಟು ₹ 1 ಕೋಟಿ ಸಾಲ ಪಡೆದಿದ್ದರು. ಅದೇ ಹಣದಲ್ಲಿ ಸಂತೋಷ್‌ಗೆ ₹ 23 ಲಕ್ಷ ಕೊಟ್ಟಿದ್ದರು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಮತ್ತಷ್ಟು ಹಣಕ್ಕೆ ಬೇಡಿಕೆ ಇರಿಸಿದ್ದ ಸಂತೋಷ್, ರಂಜಿತ್‌ಗೆ ಕಿರುಕುಳ ನೀಡಲಾರಂಭಿಸಿದ್ದ. ಸಾಲ ಪಡೆಯುವಾಗ ನೀಡಿದ್ದ ದಾಖಲೆಗಳನ್ನು ವಾಪಸು ಕೊಟ್ಟಿರಲಿಲ್ಲ. ಸೆ. 23ರಂದು ರಂಜಿತ್ ಅವರನ್ನು ಅಪಹರಿಸಿದ್ದ ಸಂತೋಷ್ ಹಾಗೂ ಇತರರು, ₹ 50 ಲಕ್ಷ ನೀಡುವಂತೆ ಬೇಡಿಕೆ ಇರಿಸಿದ್ದ. ಹಣ ನೀಡದಿದ್ದರೆ, ಕೊಲೆ ಮಾಡುವುದಾಗಿ ಬೆದರಿಸಿದ್ದ. ಹಣವಿಲ್ಲವೆಂದು ರಂಜಿತ್ ಹೇಳಿದ್ದರು. ಸ್ವಲ್ಪ ದಿನ ಬಿಟ್ಟು ಹಣ ನೀಡುವಂತೆ ಹೇಳಿ ರಂಜಿತ್‌ರನ್ನು ಬಿಟ್ಟು ಕಳುಹಿಸಿದ್ದರು.’

‘ಬ್ಯಾಟರಾಯನಪುರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡು, ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳು, ಮೀಟರ್ ಬಡ್ಡಿ ವ್ಯವಹಾರ ಮಾಡುತ್ತಿದ್ದರು. ಹಣ ನೀಡದವರಿಗೆ ಕಿರುಕುಳ ನೀಡಿ, ಜೀವ ಬೆದರಿಕೆಯೊಡುತ್ತಿದ್ದರೆಂಬ ಮಾಹಿತಿ ಸಿಕ್ಕಿದೆ’ ಎಂದು ಮೂಲಗಳು ಹೇಳಿವೆ.

ಪ್ಯಾಂಟ್‌ಗೆ ಚಿನ್ನದ ಪುಡಿ ಲೇಪಿಸಿ ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾಂಟ್‌ನೊಳಗೆ ಚಿನ್ನದ ಪೌಡರ್ ಲೇಪಿಸಿ ಅಕ್ರಮವಾಗಿ ಸಾಗಿಸುತ್ತಿದ್ದ ಇಬ್ಬರು ಪ್ರಯಾಣಿಕರನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

‘ಕೊಲಂಬೊದಿಂದ ಅ.1ರಂದು ಬೆಂಗಳೂರಿನ ನಿಲ್ದಾಣಕ್ಕೆ ಬಂದಿಳಿದಿದ್ದ ಇಬ್ಬರು ಪ್ರಯಾಣಿಕರ ಬಳಿ 229.84 ಗ್ರಾಂ ತೂಕದ ಚಿನ್ನದ ಪೌಡರ್ ಪತ್ತೆಯಾಗಿದೆ. ಅಕ್ರಮ ಸಾಗಣೆ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ಇಬ್ಬರೂ ಪ್ರಯಾಣಿಕರನ್ನು ಸೆರೆ ಹಿಡಿಯಲಾಗಿದೆ’ ಎಂದು ಕಸ್ಟಮ್ಸ್ ಮೂಲಗಳು ತಿಳಿಸಿವೆ.


ಅಂಟಿನ ಸಹಾಯದಿಂದ ಪ್ಯಾಂಟ್‌ಗೆ ಲೇಪಿಸಿದ್ದ ಚಿನ್ನದ ಪುಡಿ

‘ಯುಎಲ್ 171 ವಿಮಾನದಲ್ಲಿ ಬಂದಿದ್ದ ಆರೋಪಿಗಳು, ಅನುಮಾನಾಸ್ಪದ ರೀತಿಯಲ್ಲಿ ನಿಲ್ದಾಣದಿಂದ ಹೊರಗೆ ಬರುತ್ತಿದ್ದರು. ಅವರನ್ನು ವಶಕ್ಕೆ ಪಡೆದಿದ್ದ ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿದ್ದರು. ಆರಂಭದಲ್ಲಿ ಅವರ ಬಳಿ ಯಾವುದೇ ಚಿನ್ನ ಸಿಕ್ಕಿರಲಿಲ್ಲ. ಇಬ್ಬರನ್ನೂ ವಿಶೇಷ ಕೊಠಡಿಗೆ ಕರೆದೊಯ್ದು ತಪಾಸಣೆ ನಡೆಸಿದಾಗ, ಚಿನ್ನದ ಪೌಡರ್ ಲಭ್ಯವಾಯಿತು’ ಎಂದು ಹೇಳಿವೆ.

‘ಪ್ರಯಾಣಿಕನೊಬ್ಬ ಧರಿಸಿದ್ದ ಪ್ಯಾಂಟ್ ಬಿಚ್ಚಿ ಎರಡು ಭಾಗವಾಗಿ ಕತ್ತರಿಸಲಾಯಿತು. ಪ್ಯಾಂಟ್‌ನೊಳಗಿನ ಭಾಗದಲ್ಲಿ ಅಂಟಿನ ಸಹಾಯದಿಂದ ಚಿನ್ನದ ಪೌಡರ್ ಲೇಪಿಸಿದ್ದು ಕಂಡುಬಂತು. ಪೌಡರ್ ಬಿಡಿಸಿ ತೂಕ ಮಾಡಿದಾಗ, 74.54 ಗ್ರಾಂ ಚಿನ್ನ ಸಿಕ್ಕಿತು’ ಎಂದು ಕಸ್ಟಮ್ಸ್ ಮೂಲಗಳು ತಿಳಿಸಿವೆ.

‘ಇನ್ನೊಬ್ಬ ಪ್ರಯಾಣಿಕ, ಪೇಸ್ಟ್ ರೂಪದಲ್ಲಿದ್ದ ಚಿನ್ನದ ಸಣ್ಣ ಉಂಡೆಗಳನ್ನು ಗುದದ್ವಾರದಲ್ಲಿ ಇರಿಸಿಕೊಂಡಿದ್ದ. ವೈದ್ಯರ ಸಹಾಯದಿಂದ 155.30 ಗ್ರಾಂ ತೂಕದ ಚಿನ್ನದ ಉಂಡೆಗಳನ್ನು ಹೊರಗೆ ತೆಗೆಸಲಾಗಿದೆ’ ಎಂದು ಹೇಳಿವೆ.

ಸಿಖ್ಖರ ಪ್ರತಿಭಟನೆ

ಲಂಡನ್ (ಪಿಟಿಐ): ಖಾಲಿಸ್ತಾನ ಪರ ಹೋರಾಟಗಾರರ ಗುಂಪು ಇಲ್ಲಿಯ ಭಾರತೀಯ ರಾಯಭಾರ ಕಚೇರಿ ಎದುರು ಸೋಮವಾರ ಪ್ರತಿಭಟಿಸಿತು. ಈ ವೇಳೆ ಭಾರತ ವಿರೋಧಿ ಘೋಷಣೆಗಳಿದ್ದ ಫಲಕಗಳನ್ನು ಪ್ರದರ್ಶಿಸಿದರು.

ಬ್ರಿಟನ್‌ನಲ್ಲಿಯ ಸಿಖ್ ಪರ ಸಂಘಟನೆಗಳು ಸಾಮಾಜಿಕ ಜಾಲತಾಣಗಳ ಮೂಲಕ ಪ್ರತಿಭಟನೆಗೆ ಕರೆ ನೀಡಿದ್ದವು. ಸಿಖ್ ಪರ ಹೋರಾಟಗಾರ ಅವತಾರ್ ಸಿಂಗ್ ಖಾಂಡಾ ಅವರ ಅನುಮಾನಾಸ್ಪದ ಸಾವು ಸೇರಿ ಇತರ ಸಮಸ್ಯೆಗಳ ಕುರಿತು ಗಮನ ಸೆಳೆಯಲು ಪ್ರತಿಭಟನೆ ನಡೆಸುವುದಾಗಿ ಹೇಳಿದ್ದವು.

ಸುಮಾರು 2 ಗಂಟೆ ಪ್ರತಿಭಟನೆ ನಡೆಯಿತು. ಪ್ರತಿಭಟನನಿರತರು ಪಂಜಾಬ್ ಭಾಷೆಯಲ್ಲಿ ಭಾಷಣ ಮಾಡಿದರು.

ಧಾರವಾಡದಲ್ಲಿ ಉಗ್ರರ ತರಬೇತಿ ಕ್ಯಾಂಪ್?

ಹುಬ್ಬಳ್ಳಿ: ‘ನವದೆಹಲಿ ಪೊಲೀಸರು ಸೋಮವಾರ ಬಂಧಿಸಿರುವ ಮೂವರು ಉಗ್ರರು ಹುಬ್ಬಳ್ಳಿ– ಧಾರವಾಡದಲ್ಲಿ ತರಬೇತಿ ಪಡೆದಿರುವ ಸಾಧ್ಯತೆ ಇದೆ’ ಎಂದು ಅಲ್ಲಿನ ಪೊಲೀಸರು ನೀಡಿರುವ ಹೇಳಿಕೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದೆ.

ಉಗ್ರರನ್ನು ಬಂಧಿಸಿದ ನಂತರ ಪತ್ರಿಕಾಗೋಷ್ಠಿ ನಡೆಸಿದ ದೆಹಲಿಯ ವಿಶೇಷ ಪೊಲೀಸ್ ಆಯುಕ್ತ ಎಚ್.ಎಸ್. ಧಲಿವಾಲ್, ‘ಉಗ್ರರು ಹುಬ್ಬಳ್ಳಿ– ಧಾರವಾಡ, ಪಶ್ಚಿಮ ಘಟ್ಟದಲ್ಲಿ ತರಬೇತಿ ಪಡೆದಿರುವ ಸಾಧ್ಯತೆ ಇದೆ’ ಎಂದು ಹೇಳಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

‘ವಿಡಿಯೊ ಗಮನಕ್ಕೆ ಬಂದಿದೆ’

‘ಐಎಸ್ ಜತೆ ನಂಟು ಹೊಂದಿರುವ ಶಂಕೆ ಮೇಲೆ ದೆಹಲಿ ಪೊಲೀಸರು ಮೂವರು ಉಗ್ರರನ್ನು ಬಂಧಿಸಿದ್ದು, ದಕ್ಷಿಣ ಭಾರತದ ಹುಬ್ಬಳ್ಳಿ, ಧಾರವಾಡ ಮತ್ತು ಪಶ್ಚಿಮ ಘಟ್ಟದಲ್ಲಿ ಉಗ್ರರ ತರಬೇತಿ ಕ್ಯಾಂಪ್ ಇರುವ ಸಾಧ್ಯತೆ ಇದೆ ಎಂದು ನವದೆಹಲಿ ಪೊಲೀಸರು ಹೇಳಿರುವುದು ಗಮನಕ್ಕೆ ಬಂದಿದೆ’ ಎಂದು ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದ್ದಾರೆ. ‘ಬಂಧಿತರಲ್ಲಿ ಸ್ಥಳೀಯರು ಇರುವ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ಈ ಬಗ್ಗೆ ದೆಹಲಿ ಪೊಲೀಸರ ಜತೆ ನಿರಂತರ ಸಂಪರ್ಕದಲ್ಲಿದ್ದೇವೆ. ನಮ್ಮ ವ್ಯಾಪ್ತಿಯಲ್ಲಿ ಅಂತಹ ಕೃತ್ಯಗಳು ನಡೆಯುತ್ತಿದ್ದರೆ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಜನಾಂದೋಲನ ಸಮಿತಿ ವತಿಯಿಂದ ಪ್ರತಿಭಟನೆ

ನಗರದಲ್ಲಿ ಹೋರಾಟಕ್ಕೆ ನಿರ್ಬಂಧ ಜಾಥಾ ಹೊರಟಿದ್ದವರು ವಶಕ್ಕೆ

ಪ್ರಜಾವಾಣಿ ವಾರ್ತೆ



ಪ್ರತಿಭಟನೆಗಳನ್ನು ಸ್ವಾತಂತ್ರ್ಯ ಉದ್ಯಾನಕ್ಕೆ ಸೀಮಿತಗೊಳಿಸಿರುವುದನ್ನು ವಿರೋಧಿಸಿ ಜನಾಂದೋಲನ ಸಮಿತಿಯ ಕಾರ್ಯಕರ್ತರು ಸೋಮವಾರ ಮೌರ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಬೆಂಗಳೂರು: 'ಹೋರಾಟಗಳನ್ನು ಸ್ವಾತಂತ್ರ್ಯ ಉದ್ಯಾನಕ್ಕೆ ಮಾತ್ರ ಸೀಮಿತಗೊಳಿಸಲಾಗುತ್ತಿದೆ. ನಗರದ ಇತರೆಡೆ ಹೋರಾಟಗಳನ್ನು ಪೊಲೀಸರು ನಿರ್ಬಂಧಿಸುತ್ತಿದ್ದಾರೆ' ಎಂದು ಆರೋಪಿಸಿ ಜನಾಂದೋಲನ ಸಮಿತಿ ವತಿಯಿಂದ ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಆನಂದರಾವ್ ವೃತ್ತದಲ್ಲಿರುವ ಗಾಂಧಿ ಪ್ರತಿಮೆಯಿಂದ ವಿಧಾನಸೌಧ ಬಳಿಯ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆವರೆಗೆ ಜಾಥಾ ನಡೆಸಲು ಪ್ರತಿಭಟನಕಾರರು ಮುಂದಾಗಿದ್ದರು.

ಗಾಂಧಿ ಪ್ರತಿಮೆ ಬಳಿಯೇ ಪ್ರತಿಭಟನಕಾರರನ್ನು ತಡೆದ ಪೊಲೀಸರು, ಜಾಥಾಕ್ಕೆ ಅನುಮತಿ ಇಲ್ಲವೆಂದು ಹೇಳಿದರು. ಪ್ರತಿಭಟನಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಇದೇ ಸಂದರ್ಭದಲ್ಲಿ ಪೊಲೀಸರು, ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಬಸ್‌ಗಳಲ್ಲಿ ನಗರ ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಮೈದಾನಕ್ಕೆ ಕರೆದೊಯ್ದಿದ್ದರು. ಮುಚ್ಚಳಿಕೆ ಬರೆಸಿಕೊಂಡು ಸಂಜೆ ಬಿಡುಗಡೆ ಮಾಡಿದರು.

'ಬೆಂಗಳೂರಿನಲ್ಲಿ ಪ್ರತಿಭಟಿಸುವ ಹಕ್ಕನ್ನು ಕಳೆದುಕೊಂಡಿದ್ದೇವೆ. ಒಂದೂವರೆ ವರ್ಷದಿಂದ ಪೊಲೀಸರು ಹೋರಾಟಗಳ ಮೇಲೆ ನಿರ್ಬಂಧ ವಿಧಿಸುತ್ತಿದ್ದಾರೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಹೋರಾಟ ಮಾಡಬೇಕೆಂದು ಹೇಳಿ ನಮ್ಮ ಹಕ್ಕುಗಳನ್ನು ಕಸಿಯುತ್ತಿದ್ದಾರೆ. ಬೇರೆ ಯಾವುದೇ ಸ್ಥಳದಲ್ಲಿ ಪ್ರತಿಭಟನೆ, ಸಾರ್ವಜನಿಕ ಸಭೆ ಮತ್ತು ಮೆರವಣಿಗೆ ಮಾಡಲು ಪೊಲೀಸರು ಅನುಮತಿ ನೀಡುತ್ತಿಲ್ಲ. ಇದು ಮೂಲಭೂತ ಹಕ್ಕುಗಳ ಉಲ್ಲಂಘನೆ' ಎಂದು ಪ್ರತಿಭಟನಾಕಾರರು ದೂರಿದರು.

'ಹೋರಾಟಗಳಿಗೆ ಅನುಮತಿ ನಿರಾಕರಿಸುತ್ತಿರುವ ಪೊಲೀಸರು, ಹೈಕೋರ್ಟ್ ಆದೇಶದ ನೆಪ ಹೇಳುತ್ತಿದ್ದಾರೆ. 2021ರಲ್ಲಿ ಬೆಂಗಳೂರು ಪೊಲೀಸ್ ಕಮಿಷನರ್ ಅವರೇ, ಪ್ರತಿಭಟನೆ, ಪ್ರದರ್ಶನ, ಮೆರವಣಿಗೆಗಳನ್ನು ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಮಾಡಬೇಕೆಂಬ ಪ್ರಜಾಪ್ರಭುತ್ವ ವಿರೋಧಿ ಆದೇಶ ಹೊರಡಿಸಿದ್ದರು. ಅದೇ ಆದೇಶ ಇಂದಿಗೂ ಪಾಲನೆ ಆಗುತ್ತಿದೆ. ಸಂವಿಧಾನ ವಿರೋಧಿಯಾಗಿರುವ ಈ ಆದೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ವಿಶ್ವ ಸಾಂಸ್ಕೃತಿಕ ಉತ್ಸವಕ್ಕೆ ತೆರೆ

ಪ್ರಜಾವಾಣಿ ವಾರ್ತೆ



ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿ ನ್ಯಾಷನಲ್ ಮಾಲ್‌ನಲ್ಲಿ ನಡೆದ ವಿಶ್ವ ಸಾಂಸ್ಕೃತಿಕ ಉತ್ಸವದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಶ್ರೀಶ್ರೀ ರವಿಶಂಕರ್ ಗುರೂಜಿ ಮಾತನಾಡಿದರು.

ಬೆಂಗಳೂರು: ಅಮೆರಿಕದ ವಾಷಿಂಗ್ಟನ್ ಡಿಸಿಯ ನ್ಯಾಷನಲ್ ಮಾಲ್‌ನಲ್ಲಿ ಮೂರು ದಿನಗಳ ಕಾಲ ನಡೆದ ವಿಶ್ವ ಸಾಂಸ್ಕೃತಿಕ ಉತ್ಸವವು ಮುಕ್ತಾಯಗೊಂಡಿತು.

ದಕ್ಷಿಣ ಏಷ್ಯಾ, ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ದ್ವೀಪಗಳಿಂದ ಬಂದ ತಂಡಗಳ ಭವ್ಯ ಸಾಂಸ್ಕೃತಿ ಪ್ರದರ್ಶನಗಳೊಂದಿಗೆ ಉತ್ಸವಕ್ಕೆ ತೆರೆ ಎಳೆಯಲಾಯಿತು.

ವಿಶ್ವದ 180 ದೇಶಗಳ 10 ಲಕ್ಷಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮದೇ ಆದ ರೀತಿಯಲ್ಲಿ ವಿಶ್ವಶಾಂತಿಗಾಗಿ ಪ್ರಾರ್ಥಿಸಿದರು. ನೃತ್ಯ, ಸಂಗೀತ, ಧ್ಯಾನ ಮತ್ತು ಸಂಸ್ಕೃತಿಯೊಡನೆ ಮಾನವತ್ವ ಸಾರಲಾಯಿತು.

ಯುಕ್ರೇನ್‌ನ ಜನರಿಗಾಗಿ ಶ್ರೀಶ್ರೀಶ್ರೀ ರವಿಶಂಕರ ಗುರೂಜಿ ನೇತೃತ್ವದಲ್ಲಿ ಹೃದಯಾಳದ ಪ್ರಾರ್ಥನೆ ಸಲ್ಲಿಸಲಾಯಿತು. ಲಿಂಕನ್ ಸ್ಮಾರಕದ ಮುಂದೆ ಯೋಗ ಜ್ಞಾನ ಪಸರಿಸಲಾಯಿತು.

ವಿವಿಧ ಕಲಾವಿದರಿಂದ ಗೀತ ಗಾಯನ ಕಾರ್ಯಕ್ರಮ ನಡೆಯಿತು. ಭಾರತದ ಐದು ಪಾರಂಪರಿಕ ನೃತ್ಯಗಳಾದ ಭರತನಾಟ್ಯ, ಕಥಕ್, ಒಡಿಸ್ಸಿ, ಕೂಚುಪುಡಿ ಮತ್ತು ಮೋಹಿನಿಆಟ್ಟಂ ಸಾಂಸ್ಕೃತಿಕ ವೈಭವಕ್ಕೆ ಮೆರುಗು ನೀಡಿದವು. ಗರ್ಭಾ ನೃತ್ಯ, ಭಾಂಗ್ರ ನೃತ್ಯ ಸಹಿತ ವಿವಿಧ ಕಲೆಗಳು ಪ್ರದರ್ಶನಗೊಂಡವು.

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜಯಶಂಕರ್, ಲೋಕಸಭೆಯ ಮಾಜಿ ಸ್ಪೀಕರ್ ಸುಮಿತ್ರಾ ಮಹಾಜನ್, ವಿಶ್ವಸಂಸ್ಥೆಯ 8ನೇ ಪ್ರಧಾನ ಕಾರ್ಯದರ್ಶಿಯಾಗಿದ್ದ ಎಚ್.ಇ. ಬಾನ್ ಕಿ ಮೂನ್ ಸಹಿತ ವಿವಿಧ ದೇಶಗಳ ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ನಾಯಕರು ಭಾಗವಹಿಸಿದ್ದರು.

ಧರ್ಮಸ್ಥಳ: ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ತಾಣ

ಉಜಿರೆ (ದಕ್ಷಿಣ ಕನ್ನಡ): 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ದೇಶನದಂತೆ ಧರ್ಮಸ್ಥಳವು ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ತಾಣ' ಎಂದು ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಪ್ರಕಟಿಸಿದರು.

ಧರ್ಮಸ್ಥಳದ ಪ್ರವಚನ ಮಂಟಪದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಘೋಷಣಾ ಫಲಕ ಅನಾವರಣ ಮಾಡಿ ಅವರು ಮಾತನಾಡಿದರು.

ಬೀದರ್, ಕಲಬುರಗಿ, ಮಂಗಳೂರು, ಮೈಸೂರು ಮತ್ತು ಧರ್ಮಸ್ಥಳವನ್ನು ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ನಗರಗಳನ್ನಾಗಿಸಲು ಆಯ್ಕೆ ಮಾಡಲಾಗಿದೆ. ಧರ್ಮಸ್ಥಳದ ಮೂಲಕ ಕರ್ನಾಟಕ ರಾಜ್ಯವೇ ದೇಶದ ಪ್ರಥಮ ಪ್ಲಾಸ್ಟಿಕ್ ಮುಕ್ತ ರಾಜ್ಯವಾಗಲಿ ಎಂದು ಹಾರೈಸಿದರು.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಸಿಇಒ ಪ್ರಸನ್ನಭಕ್ತ, ಬೆಳ್ತಂಗಡಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಕುಸುಮಾಧರ, ಧರ್ಮಸ್ಥಳ ಗ್ರಾಮ ಪಂಚಾಯಿತಿ ಅಧ್ಯಕ್ಷೆ ವಿಮಲ ಇದ್ದರು.



ಕೋಲಾರದಲ್ಲಿ ಸೋಮವಾರ ಕೊನೆಗೊಂಡ ಹೊನಲು ಬೆಳಕಿನ ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆದ ಬೆಂಗಳೂರಿನ ಯಂಗ್ ಓರಿಯನ್ಸ್ ತಂಡಕ್ಕೆ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹಾಗೂ ಸಂಸದ ಎಸ್. ಮುನಿಸ್ವಾಮಿ ಟ್ರೋಫಿ ವಿತರಿಸಿದರು

ಬ್ಯಾಸ್ಕೆಟ್‌ಬಾಲ್: ಯಂಗ್ ಓರಿಯನ್ಸ್ ಚಾಂಪಿಯನ್

ಕೋಲಾರ: ಅತ್ಯುತ್ತಮ ಗುರಿ ಪ್ರದರ್ಶನ ತೋರಿದ ಬೆಂಗಳೂರಿನ ಯಂಗ್ ಓರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡದವರು ಸೋಮವಾರ ಕೊನೆಗೊಂಡ ಹೊನಲು ಬೆಳಕಿನ ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆದರು.

ಕನಕ ಬ್ಯಾಸ್ಕೆಟ್‌ಬಾಲ್ ಕ್ಲಬ್ ಆಶ್ರಯದಲ್ಲಿ ನಗರದ ಮಿನಿ ಕ್ರೀಡಾಂಗಣದಲ್ಲಿ ರಾತ್ರಿ ನಡೆದ ರೋಚಕ ಫೈನಲ್ ಹೋರಾಟದಲ್ಲಿ ಈ ತಂಡದವರು 52-46 ಪಾಯಿಂಟ್‌ಗಳಿಂದ ಬ್ಯಾಂಕ್ ಆಫ್ ಬರೋಡ ತಂಡವನ್ನು ಮಣಿಸಿದರು.

ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿದ್ದ ಪಂದ್ಯದಲ್ಲಿ ವಿಜಯಿ ತಂಡದವರು ಮೊದಲ ಕ್ವಾರ್ಟರ್‌ನಲ್ಲಿ 15-14 ಪಾಯಿಂಟ್, ಎರಡನೇ ಕ್ವಾರ್ಟರ್‌ನಲ್ಲಿ 12-12 ಪಾಯಿಂಟ್, ಮೂರನೇ ಕ್ವಾರ್ಟರ್‌ಲ್ಲಿ 12-9 ಪಾಯಿಂಟ್ ಹಾಗೂ ಕೊನೆಯ ಕ್ವಾರ್ಟರ್‌ನಲ್ಲಿ 13-11 ಪಾಯಿಂಟ್ ಕಲೆಹಾಕಿ ಗೆಲುವಿನತ್ತ ಮುನ್ನಡೆದರು.

ಯಂಗ್ ಓರಿಯನ್ಸ್ ತಂಡದ ಅರ್ಜುನ್, ಪ್ರಶಾಂತ್, ಪೀಟರ್ ಉತ್ತಮ ಗುರಿ ಎಸೆತದ ಆಟವಾಡಿದರು. ಪ್ರೇಕ್ಷಕರು ಅವರ ಹೆಸರು ಹಿಡಿದು ಕೂಗಿ ಹುರಿದುಂಬಿಸಿದರು. ಈ ತಂಡದವರು ₹ 25 ಸಾವಿರ ಬಹುಮಾನ ಪಡೆದರು. ರನ್ನರ್ ಅಪ್ ಬ್ಯಾಂಕ್ ಆಫ್ ಬರೋಡ ತಂಡಕ್ಕೆ ₹ 15 ಸಾವಿರ ಲಭಿಸಿತು.

ವಿಮಾನದ ತುರ್ತು ಬಾಗಿಲು ತೆರೆಯಲು ಯತ್ನ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಗೊ ವಿಮಾನದ ತುರ್ತು ಬಾಗಿಲು ತೆರೆಯಲು ಯತ್ನಿಸಿದ್ದ ಆರೋಪದಡಿ ಪ್ರಯಾಣಿಕ ಸ್ವಪ್ನಿಲ್ ಹೋಲೆ ಅವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಮಹಾರಾಷ್ಟ್ರದ ನಾಗಪುರ ನಿವಾಸಿ ಸ್ವಪ್ನಿಲ್, ಸೆ. 30ರಂದು ಕೃತ್ಯ ಎಸಗಿದ್ದ. ಇಂಡಿಗೊ ಏರ್‌ಲೈನ್ಸ್ ಕಂಪನಿ ಪ್ರತಿನಿಧಿ ನೀಡಿದ್ದ ದೂರು ಆಧರಿಸಿ ಸ್ವಪ್ನಿಲ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಸ್ವಪ್ನಿಲ್, ನಾಗಪುರದಿಂದ ಬೆಂಗಳೂರು ಮಾರ್ಗವಾಗಿ ಬ್ಯಾಂಕಾಕ್‌ಗೆ ಇಂಡಿಗೊ 6ಇ-6803 ವಿಮಾನದಲ್ಲಿ ಹೊರಟಿದ್ದ. ಸೀಟ್ ನಂಬರ್ '5ಇ'ಯಲ್ಲಿ ಕುಳಿತಿದ್ದ. ಪ್ರಯಾಣದ ವೇಳೆಯಲ್ಲಿ ತನ್ನ ಪಕ್ಕದಲ್ಲಿದ್ದ ತುರ್ತು ಬಾಗಿಲು ತೆರೆಯಲು ಯತ್ನಿಸಿದ್ದ.'

'ಈತನ ಕೃತ್ಯವನ್ನು ನೋಡಿದ್ದ ವಿಮಾನದ ಸಿಬ್ಬಂದಿ, ಸ್ಥಳಕ್ಕೆ ಹೋಗಿ ಬಾಗಿಲು ತೆರೆಯುವುದನ್ನು ತಡೆದಿದ್ದರು. ಘಟನೆ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಬಳಿಕ ಆರೋಪಿಯನ್ನು ವಶಕ್ಕೆ ಪಡೆದಿದ್ದ ಭದ್ರತಾ ಸಿಬ್ಬಂದಿ, ಠಾಣೆಗೆ ಒಪ್ಪಿಸಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

'ವಿಮಾನ ಪ್ರಯಾಣಿಕರ ಜೀವಕ್ಕೆ ಆಪತ್ತು ತರುವ ಕೃತ್ಯ ಇದಾಗಿದೆ. ಯಾವ ಕಾರಣಕ್ಕೆ ಆರೋಪಿ ಬಾಗಿಲು ತೆರೆಯಲು ಯತ್ನಿಸಿದ್ದ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ತಿಳಿಸಿದರು.



ಪಂಜಾಬ್‌ನ ಸ್ವರ್ಣ ಮಂದಿರಕ್ಕೆ ಸೋಮವಾರ ಭೇಟಿ ನೀಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಕ್ತರು ಬಳಸಿದ ನೀರಿನ ಬಟ್ಟಲು ತೊಳೆಯುವ ಮೂಲಕ ಸೇವೆ ಸಲ್ಲಿಸಿದರು ಪಿಟಿಐ ಚಿತ್ರ

ಬ್ಯಾಂಕ್‌ಗೆ ವಂಚನೆ ಆರೋಪ: ಖುಲಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮ್ಯಾನೇಜರ್, ಸಾಲಗಾರರ ಜೊತೆಗೂಡಿ ಬ್ಯಾಂಕಿಗೆ ಮೋಸ ಎಸಗಿ ₹85 ಲಕ್ಷಕ್ಕೂ ಹೆಚ್ಚಿನ ನಷ್ಟ ಉಂಟು ಮಾಡಿದ್ದಾರೆ' ಎಂಬ ಗುರುತರ ಆರೋಪಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಯುಕೊ ಬ್ಯಾಂಕ್ ಮ್ಯಾನೇಜರ್ ಸೇರಿದಂತೆ ಮೂವರ ವಿರುದ್ಧ ಸಿಟಿ ಸಿವಿಲ್ ಕೋರ್ಟ್‌ನ ಹೆಚ್ಚುವರಿ ಸೆಷನ್ಸ್ ಮತ್ತು ವಿಶೇಷ ನ್ಯಾಯಾಲಯ ವಿಧಿಸಿದ್ದ ಶಿಕ್ಷೆ ಮತ್ತು ದಂಡವನ್ನು ಹೈಕೋರ್ಟ್ ರದ್ದುಪಡಿಸಿದೆ.

ಶಿಕ್ಷೆ ಮತ್ತು ದಂಡ ರದ್ದುಪಡಿಸುವಂತೆ ಕೋರಿ ದಾವಣಗೆರೆಯ ಆರ್.ಶಿವಕುಮಾರ್, ಕೆ.ಎಸ್.ಅನ್ವರ್ ಬಾಷ ಮತ್ತು ರೆಹನಾ ಬೇಗಂ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: 'ಆರ್.ಶಿವಕುಮಾರ್, 2002ರಿಂದ 2004ರ ಅವಧಿಯಲ್ಲಿ ಯುಕೊ ಬ್ಯಾಂಕಿನ ದಾವಣಗೆರೆ ಶಾಖಾ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸಿದ್ದರು. ಇವರು, 'ದಾವಣಗೆರೆ ವಿವೇಕಾನಂದ ಬಡಾವಣೆ ನಿವಾಸಿಗಳಾದ ಕೆ.ಎಸ್.ಅನ್ವರ್ ಬಾಷ ಮತ್ತು ರೆಹನಾ ಬೇಗಂ ಅವರಿಗೆ ಸಾಲ ನೀಡುವಾಗ ಮೂಲ ಕ್ರಯಪತ್ರ ಪಡೆದುಕೊಳ್ಳದೆ, ಸಂಬಳದ ಪ್ರಮಾಣಪತ್ರ ಸೇರಿದಂತೆ ಮತ್ತಿತರೆ ದಾಖಲೆಗಳನ್ನು ಸೃಷ್ಟಿಸಿ, ಸಾಲಗಾರರ ಜೊತೆಗೂಡಿ ಪಿತೂರಿ ನಡೆಸಿದ್ದಾರೆ. ಸಾಲಗಾರರಿಂದ ಅಕ್ರಮ ಪ್ರತಿಫಲ ಪಡೆದುಕೊಂಡು ಸಾಲ ಮಂಜೂರು ಮಾಡಿದ್ದಾರೆ. ಬ್ಯಾಂಕ್‌ಗೆ ಮೋಸ ಎಸಗಿ ₹ 85 ಲಕ್ಷಕ್ಕೂ ಹೆಚ್ಚಿನ ಮೊತ್ತದ ನಷ್ಟ ಉಂಟು ಮಾಡಿದ್ದಾರೆ' ಎಂದು ಆರೋಪಿಸಲಾಗಿತ್ತು.

ಈ ಸಂಬಂಧ ಬ್ಯಾಂಕ್ ಮೇಲಧಿಕಾರಿಗಳು ಸಿಬಿಐಗೆ ದೂರು ನೀಡಿದ್ದರು. ಇದರನ್ವಯ ದೂರು ದಾಖಲಿಸಿಕೊಂಡಿದ್ದ ಸಿಬಿಐ ತನಿಖೆ ನಡೆಸಿ, ಆರ್. ಶಿವಕುಮಾರ್, ಸಾಲ ಪಡೆದಿದ್ದ ಕೆ.ಎಸ್.ಅನ್ವರ್ ಪಾಷ ಹಾಗೂ ರೆಹನಾ ಬೇಗಂ ವಿರುದ್ಧ ಪ್ರಕರಣ ದಾಖಲಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ ಸಿಟಿ ಸಿವಿಲ್ ಕೋರ್ಟ್‌ನ 32ನೇ ಹೆಚ್ಚುವರಿ ಸೆಷನ್ಸ್ ಮತ್ತು ವಿಶೇಷ ನ್ಯಾಯಾಲಯ ಆರೋಪಿಗಳಿಗೆ 2010ರ ಜುಲೈ 6ರಂದು ಶಿಕ್ಷೆ ವಿಧಿಸಿ ಆದೇಶಿಸಿತ್ತು. ಇದನ್ನು ರದ್ದುಪಡಿಸುವಂತೆ ಕೋರಿ ಮೂವರೂ ಹೈಕೋರ್ಟ್ ಮೆಟ್ಟಿಲೇರಿದ್ದರು.

ಆರ್.ಶಿವಕುಮಾರ್ ಪರ ಹಿರಿಯ ವಕೀಲ ಎಸ್.ಪಿ.ಕುಲಕರ್ಣಿ, ಅನ್ವರ್ ಪಾಷ ಮತ್ತು ರೆಹನಾ ಬೇಗಂ ಪರ ಹಿರಿಯ ವಕೀಲ ಹಷ್ಮತ್ ಪಾಷ ವಾದ ಮಂಡಿಸಿದ್ದರು. 'ಬ್ಯಾಂಕ್ ಮ್ಯಾನೇಜರ್, ಸಾಲಗಾರರಿಂದ ಪ್ರತಿಫಲ ಪಡೆದಿದ್ದಾರೆ ಎಂಬುದಕ್ಕೆ ಪುರಾವೆಗಳಿಲ್ಲ. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲು ಯಾವುದೇ ಅನುಮತಿಯನ್ನೂ ಪಡೆದಿಲ್ಲ' ಎಂಬ ವಾದಾಂಶವನ್ನು ಪುರಸ್ಕರಿಸಿರುವ ನ್ಯಾಯಪೀಠ, ಮೂವರೂ ಮೇಲ್ಮನವಿದಾರರನ್ನು ಆರೋಪ ಮುಕ್ತಗೊಳಿಸಿ ಆದೇಶಿಸಿದೆ.

ಗಲಭೆ: ಬಿಜೆಪಿ–ಕಾಂಗ್ರೆಸ್ ವಾಕ್ಸಮರ

ಈದ್‌ಮಿಲಾದ್ ಮೆರವಣಿಗೆ ವೇಳೆ ಅಹಿತಕರ ಘಟನೆ ನಡೆದಿದ್ದ ಶಿವಮೊಗ್ಗ ನಗರ ಸಹಜ ಸ್ಥಿತಿಗೆ ಮರಳುತ್ತಿರುವಂತೆಯೇ, ಈ ಬೆಳವಣಿಗೆಯು ಈಗ ರಾಜಕೀಯ ಪಕ್ಷಗಳ ನಡುವೆ ವಾಗ್ವಾದಕ್ಕೆ ಕಾರಣವಾಗಿದೆ. ಕಾನೂನು ಸುವ್ಯವಸ್ಥೆ ರಕ್ಷಣೆಯಲ್ಲಿ ಸರ್ಕಾರ ವಿಫಲವಾಗಿದೆ ಎಂದು ಬಿಜೆಪಿ ನಾಯಕರು ಟೀಕಿಸಿದರೆ, ಬಿಜೆಪಿ ಮುಖಂಡರೇ ಪ್ರಚೋದನೆಯ ಮಾತು ಆಡುತ್ತಿದ್ದಾರೆ ಎಂದು ಗೃಹ ಸಚಿವರು ಆರೋಪಿಸಿದ್ದಾರೆ. ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು, 'ಕಾನೂನು ಉಲ್ಲಂಘಿಸಿದರೆ ಶಿಕ್ಷೆ ಏನು ಎಂದು ಸರ್ಕಾರ ಅರ್ಥ ಮಾಡಿಸಬೇಕಿದೆ' ಎಂದಿದ್ದಾರೆ.

ಈಶ್ವರಪ್ಪ ಪ್ರಚೋದನೆ: ಪರಮೇಶ್ವರ

ತುಮಕೂರು: ಶಿವಮೊಗ್ಗದಲ್ಲಿ ನಡೆದ ಗಲಭೆಗೆ ಸಂಬಂಧಿಸಿದಂತೆ ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ ಅನವಶ್ಯಕವಾಗಿ ಮಾತನಾಡಿ, ಪ್ರಚೋದನೆ ನೀಡುತ್ತಿದ್ದಾರೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಆರೋಪಿಸಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನವರಿಂದ ಗಲಭೆ ನಡೆದಿದೆ ಎಂದು ಹೇಳುವುದು ಸರಿಯಲ್ಲ. ಸೂಕ್ಷ್ಮತೆ ಅರಿತು ಮಾತನಾಡಬೇಕು. ಇಂತಹ ಸಂದರ್ಭದಲ್ಲಿ ಪ್ರಚೋದಿಸುವ ಮಾತು ಆಡಬಾರದು' ಎಂದು ಕೋರಿದರು.

ಕಟ್ಟಿಗೆಯಿಂದ ತಯಾರಿಸಿದ ತಲ್ವಾರ್, ಕತ್ತಿ, ಆಯುಧಗಳಿಗೆ ಬಣ್ಣ ಹಚ್ಚಿ ಪ್ರದರ್ಶಿಸಿದ್ದಾರೆ ಎಂದು ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ. ಹಿಂದೆ ಶಿವಮೊಗ್ಗದಲ್ಲಿ ನಡೆದಿದ್ದ ಗಲಭೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗಿತ್ತು. ಪೊಲೀಸ್ ಬಿಗಿ ಭದ್ರತೆ ಒದಗಿಸಲಾಗಿತ್ತು. ಇದರಿಂದಾಗಿಯೇ ಹೆಚ್ಚಿನ ಅನಾಹುತ ತಪ್ಪಿದಂತಾಗಿದೆ' ಎಂದು ಹೇಳಿದರು.

ಹೊರ ರಾಜ್ಯ, ಜಿಲ್ಲೆಗಳಿಂದ ಯಾರೂ ಬರದಂತೆ ಮಾರ್ಗ ಬಂದ್ ಮಾಡಲಾಗಿತ್ತು. ಪರಿಶೀಲಿಸಿ ಸ್ಥಳೀಯರನ್ನು ಮಾತ್ರ ಒಳಗೆ ಬಿಟ್ಟಿದ್ದಾರೆ. ಆದರೂ ಸಣ್ಣ ಗಲಭೆ ನಡೆದಿದೆ. ನಿನ್ನೆಯೇ ಎಲ್ಲವೂ ಮುಗಿದು ಹೋಗಿದೆ. ಸಿಸಿಟಿವಿ ದೃಶ್ಯ ಪರಿಶೀಲಿಸಿ ಕಲ್ಲು ತೂರಿದ್ದ 50 ಜನರನ್ನು ಬಂಧಿಸಿ, ಕ್ರಮ ಕೈಗೊಳ್ಳಲಾಗಿದೆ. ಮುಂದೆ ಇಂತಹ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಲಾಗುವುದು ಎಂದರು.

'ಕಿಡಿಗೇಡಿಗಳ ಕೆಲಸ'

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): 'ಶಿವಮೊಗ್ಗ ಗಲಭೆ ಕಿಡಿಗೇಡಿಗಳು ತಮ್ಮ ಸ್ವಾರ್ಥಕ್ಕಾಗಿ ನಡೆಸಿದ ಕೃತ್ಯ. ಇದರ ಹಿಂದೆ ಯಾವುದೇ ರಾಜಕೀಯ ದುರುದ್ದೇಶ ಇಲ್ಲ' ಎಂದು ಶಿವಮೊಗ್ಗ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದ್ದಾರೆ.

ಗಣೇಶೋತ್ಸವಕ್ಕಾಗಿ ಮುಸ್ಲಿಂ ಸಮುದಾಯದವರು ಈದ್ ಮಿಲಾದ್ ಹಬ್ಬದ ಮೆರವಣಿಗೆಯನ್ನು ಮೂರು ದಿನ ಮುಂದೂಡಿದ್ದರು. ಗಲಭೆಗೆ ಕಾರಣರಾದ ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು. ಶಾಂತಿ ಸುವ್ಯವಸ್ಥೆ ರಕ್ಷಣೆಗೆ ಈಗಾಗಲೇ ಶಿವಮೊಗ್ಗದಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಅವರು ತಿಳಿಸಿದರು.

> 'ಶಿವಮೊಗ್ಗದಲ್ಲಿ ಗಲಭೆಗೆ ಸರ್ಕಾರದ ವೈಫಲ್ಯ ಕಾರಣ. ನಗರ ಹೊತ್ತಿ ಉರಿದರೂ ಸರ್ಕಾರ ಸುಮ್ಮನಿದೆ. ಆಡಳಿತ ನಡೆಸಲಾಗದಿದ್ದರೆ ರಾಜೀನಾಮೆ ನೀಡಲಿ
> **ಎನ್.ರವಿಕುಮಾರ್,** ವಿಧಾನಪರಿಷತ್ ಸದಸ್ಯ

> ಕತ್ತಿ, ಗುರಾಣಿ ಹಿಡಿದು ಮೆರವಣಿಗೆ ಮಾಡಲು ಅವಕಾಶ ಕೊಟ್ಟವರು ಯಾರು? ಹಿಂದೂ ಸಮಾಜದವರ ಮೇಲೆ ದೌರ್ಜನ್ಯ ನಡೆದಿದೆ. ಸರ್ಕಾರವೇ ಗಲಭೆಗೆ ಪ್ರೇರೇಪಣೆ ಕೊಟ್ಟಂತಿದೆ
> **ಸಿ.ಟಿ.ರವಿ,** ಮಾಜಿ ಶಾಸಕ

> ಶಿವಮೊಗ್ಗ ಘಟನೆಗೆ ಕಾಂಗ್ರೆಸ್ ನೇರ ಕಾರಣ. ಕಿಡಿಗೇಡಿಗಳನ್ನು ಕಾಂಗ್ರೆಸ್‌ನವರು 'ಅವರೆಲ್ಲಾ ನಮ್ಮ ಅಣ್ಣ ತಮ್ಮ' ಎಂದೇ ಹೇಳುತ್ತಿದ್ದಾರೆ. ಕುಕ್ಕರ್ ಬಾಂಬ್ ಸ್ಫೋಟಿಸಿದವರನ್ನು ಅಮಾಯಕರು ಎಂದು ಹೇಳಿದ್ದಾರೆ
> **ಆರ್.ಅಶೋಕ್,** ಶಾಸಕ

> 'ಗಲಭೆ ಪೂರ್ವ ನಿಯೋಜಿತ ಕೃತ್ಯ. ಪೊಲೀಸರ ಮೇಲೆ ಹಲ್ಲೆ ನಡೆಸಲಾಗಿದೆ. ಪ್ರತಿ ಬಾರಿ ಹಿಂದೂಗಳ ಮೇಲೆ ಗೂಬೆ ಕೂರಿಸಲಾಗುತ್ತಿತ್ತು. ಈ ಬಾರಿ ತಪ್ಪಿತಸ್ಥರು ಯಾರು ಎಂಬುದು ಗಮನಕ್ಕೆ ಬಂದಿದೆ
> **ಚಕ್ರವರ್ತಿ ಸೂಲಿಬೆಲೆ,** ಭಾಷಣಕಾರ

'ಕಾನೂನು ಉಲ್ಲಂಘಿಸಿದವರಿಗೆ ಶಿಕ್ಷೆ ಕೊಡಿ'

ಉಡುಪಿ: 'ಶಿವಮೊಗ್ಗದಲ್ಲಿ ಕಿಡಿಗೇಡಿಗಳು ಪೊಲೀಸರ ಮೇಲೆ ಹಲ್ಲೆ ನಡೆಸಿದರೂ ಸರ್ಕಾರ ಏನು ಮಾಡುತ್ತಿದೆ' ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರಶ್ನಿಸಿದ್ದಾರೆ. 'ಕಾನೂನು ಉಲ್ಲಂಘಿಸಿದವರಿಗೆ ಶಿಕ್ಷೆ ಏನು ಎಂಬುದನ್ನು ಅರ್ಥ ಮಾಡಿಸಬೇಕಿದೆ' ಎಂದಿದ್ದಾರೆ.

ಸೋಮವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವ ಕಾರ್ಯಕ್ಕೆ ಯಾರೊಬ್ಬರೂ ಕೈ ಹಾಕಬಾರದು. ಸಮಾಜದಲ್ಲಿ ಅಶಾಂತಿಯ ವಾತಾವರಣವು ಸೃಷ್ಟಿಯಾದರೆ ಅದಕ್ಕೆ ಕೊನೆ ಎಂಬುದೇ ಇರುವುದಿಲ್ಲ ಎಂದರು.

ತುಷ್ಟೀಕರಣ ನೀತಿಯೇ ಕಾರಣ ಬಿಜೆಪಿ ನಾಯಕರ ವಾಗ್ದಾಳಿ

ಬೆಂಗಳೂರು: 'ಶಿವಮೊಗ್ಗದಲ್ಲಿ ಹಿಂದೂಗಳ ಮನೆಗಳ ಮೇಲೆ ದೌರ್ಜನ್ಯ ನಡೆದರೂ ರಾಜ್ಯ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ. ಇದಕ್ಕೆ ಕಾಂಗ್ರೆಸ್‌ನ ತುಷ್ಟೀಕರಣ ನೀತಿಯೇ ಕಾರಣ. ಸರ್ಕಾರದ ವೈಫಲ್ಯದ ಕಾರಣ ಈ ಗಲಭೆ ನಡೆದಿದೆ' ಎಂದು ಬಿಜೆಪಿ ಕಟುವಾಗಿ ಆಕ್ಷೇಪ ವ್ಯಕ್ತಪಡಿಸಿದೆ.

ಶಿವಮೊಗ್ಗದ ಸಂಬಂಧಿಸಿದಂತೆ ಬಿಜೆಪಿಯ ಶಾಸಕರಾದ ಬಸವರಾಜ ಬೊಮ್ಮಾಯಿ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಮತ್ತು ರಾಜ್ಯ ಮಾಜಿ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ರಾಜ್ಯ ಸರ್ಕಾರ ತುಷ್ಟೀಕರಣ ನೀತಿ ಅನುಸರಿಸುತ್ತಿದೆ. ಅಶಾಂತಿ ಇರಬೇಕೆಂಬ ಸರ್ಕಾರದ ಮನಸ್ಥಿತಿ ಶಿವಮೊಗ್ಗ ಮಾತ್ರವಲ್ಲದೆ ಇಡೀ ರಾಜ್ಯದಲ್ಲಿ ಕಾಣುತ್ತಿದೆ' ಎಂದು ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅಶ್ವತ್ಥನಾರಾಯಣ ಹೇಳಿದರು.

'ಎಸ್ಪಿಯವರ ಮೇಲೆಯೇ ಕಲ್ಲು ತೂರಾಟ ಮಾಡಿದ್ದಾರೆ. ಆದರೆ, ಸರ್ಕಾರ ಬಾಯಿಗೆ ಬೀಗ ಹಾಕಿಕೊಂಡು ಕುಳಿತಿದೆ. ಅಧಿಕಾರಿಗಳಿಗೆ ಕಾನೂನು ಸುವ್ಯವಸ್ಥೆ ಕಾಪಾಡಲು ಆಗುತ್ತಿಲ್ಲ. ಕೋಮುಗಲಭೆ ಮಾಡುವವರ ಆಸ್ತಿ ಜಪ್ತಿ ಮಾಡಬೇಕು. ಗೂಂಡಾ ಕಾಯ್ದೆ ವಿಧಿಸಬೇಕು' ಎಂದು ಒತ್ತಾಯಿಸಿದರು.

'ಕ್ರೂರಿಗಳಾದ ಟಿಪ್ಪು ಸುಲ್ತಾನ್ ಮತ್ತು ಔರಂಗಜೇಬ್ ಅವರನ್ನು ಮಹಾನ್ ಎನ್ನುವವರ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಸರ್ಕಾರದ ವೈಫಲ್ಯ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಸರ್ಕಾರ ವಿಫಲವಾಗಿದೆ ಎಂದು ಶಾಸಕ ಬಸವರಾಜ ಬೊಮ್ಮಾಯಿ ದೂರಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಶಿವಮೊಗ್ಗ ಪ್ರಕ್ಷುಬ್ಧ ವಾತಾವರಣ ಇರುವ ನಗರ. ಧಾರ್ಮಿಕ ಕಾರ್ಯಕ್ರಮಗಳು ನಡೆಯುವಾಗ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು. ಆದರೆ, ಅಲ್ಲಿ ಪೊಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಹೇಳಿದರು.

'ಶಿವಮೊಗ್ಗದ 3 ಠಾಣೆಗಳ ವ್ಯಾಪ್ತಿಯಲ್ಲಿ ಇಂತಹ ಘಟನೆಗಳು ಪದೇ ಪದೇ ನಡೆಯುತ್ತವೆ.ಅಲ್ಲಿಗೆ ಸಮರ್ಥ ಅಧಿಕಾರಿಗಳನ್ನು ಹಾಕಬೇಕು. ಸ್ವಹಿತಾಸಕ್ತಿಗಳಿಗೆ ಬಲಿಯಾಗಿ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರೆ, ಸಮಾಜಘಾತುಕ ಶಕ್ತಿಗಳಿಗೆ ಕುಮ್ಮಕ್ಕು ಸಿಕ್ಕಂತಾಗುತ್ತದೆ' ಎಂದು ಬೊಮ್ಮಾಯಿ ತಿಳಿಸಿದರು.



ಶಿವಮೊಗ್ಗದ ರಾಗಿಗುಡ್ಡದಲ್ಲಿ ಅಳವಡಿಸಿದ್ದ ಟಿಪ್ಪು ಸುಲ್ತಾನ್ ಬೃಹತ್ ಕಟೌಟ್ ಸೋಮವಾರ ತೆರವುಗೊಳಿಸಿದ ನಂತರ ಪೊಲೀಸರು ಅಲ್ಲಿ ಪಹರೆಗೆ ನಿಂತಿದ್ದರು

ಹಿಂದೂಗಳ ಪ್ರಚೋದಿಸಲು ಔರಂಗಜೇಬ್, ಟಿಪ್ಪು ಕಟೌಟ್

ಶಿವಮೊಗ್ಗ: 'ಹಿಂದೂಗಳನ್ನು ಪ್ರಚೋದಿಸಲು ನಗರದ ಪ್ರಮುಖ ಭಾಗಗಳಲ್ಲಿ ಔರಂಗಜೇಬ್, ಟಿಪ್ಪು ಸುಲ್ತಾನ್, ಹೈದರಾಲಿಯ ಕಟೌಟ್‌ಗಳನ್ನು ಹಾಕಲಾಗಿದೆ. ಅದಕ್ಕೆ ಹಿಂದೂ ಸಮಾಜ ಎಂದೂ ಹೆದರುವುದಿಲ್ಲ' ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

'ರಾಜ್ಯದ ಕಾಂಗ್ರೆಸ್ ಸರ್ಕಾರ ಮುಸ್ಲಿಂ ಸಮುದಾಯದ ಗುಲಾಮ ಆಗಿದೆ. ಶಿವಮೊಗ್ಗದಲ್ಲಿ ಪೊಲೀಸರು ಸರ್ಕಾರಕ್ಕೆ ಹೆದರಿ ಏಕಪಕ್ಷೀಯವಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

> ಶಿವಮೊಗ್ಗದಲ್ಲಿ ಈದ್ ಮೆರವಣಿಗೆ ವೇಳೆ ನಡೆದ ಘಟನೆಯಲ್ಲಿ ಮತಾಂಧ ಶಕ್ತಿಗಳ ಕೈವಾಡವಿರುವ ಸಾಧ್ಯತೆ ಇದೆ. ಮತಕ್ಕಾಗಿ ಸಿ.ಎಂ ಕ್ರಮ ಕೈಗೊಳ್ಳುತ್ತಿಲ್ಲ
> **ನಳಿನ್ ಕುಮಾರ್ ಕಟೀಲ್,** ರಾಜ್ಯ ಬಿಜೆಪಿ ಅಧ್ಯಕ್ಷ

'ಗೃಹ ಸಚಿವ ಜಿ. ಪರಮೇಶ್ವರ್ ಅವರು 'ಶಿವಮೊಗ್ಗದಲ್ಲಿ ನಡೆದಿರುವುದು ಚಿಕ್ಕ ಘಟನೆ. ತಲ್ವಾರ್ ಹಿಡಿದು ಯಾರೂ ಮೆರವಣಿಗೆ ನಡೆಸಿಲ್ಲ' ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ. ಮುಸ್ಲಿಮರ ರಕ್ಷಣೆಗೆ ಕಾಂಗ್ರೆಸ್ ಸರ್ಕಾರ ಮುಂದಾಗಿದೆ' ಎಂದು ಟೀಕಿಸಿದರು.

ನೂಲು ತೆಗೆದ ಮಕ್ಕಳಿಗೆ 'ಖಾದಿ' ಉಡುಗೊರೆ

ಒಂದನೇ ಪುಟದಿಂದ...

'ನೂಲು ತೆಗೆಯುವಾಗ ದಾರ ಕಿತ್ತು ಹೋಗುವುದು ಸಹಜ. ಅದು ತಾಳ್ಮೆ, ಸಂಯಮ ಬೇಡುತ್ತದೆ. ನಾವೇ ತಯಾರಿಸಿದ ನೂಲು, ಬಟ್ಟೆಯಾಗಿ ಧರಿಸಿದಾಗ ಆಗುವ ತೃಪ್ತಿಯನ್ನು ಹೇಳಲಾಗದು' ಎಂದರು.

ಜನಪದ ಸೇವಾ ಟ್ರಸ್ಟ್‌ನ ಸಂತೋಷ್ ಕೌಲಗಿ, 'ಶಿವರಾಜ್‌ಕುಮಾರ್ ಅಸಲಿ ಖಾದಿ ಉತ್ಪನ್ನಗಳ ರಾಯಭಾರಿಯಾಗಬೇಕು' ಎಂದು ಕೋರಿದರು.

ಶಕ್ತಿಧಾಮದ ಪೋಷಕಿ ಗೀತಾ ಶಿವರಾಜ್‌ಕುಮಾರ್, ಪುಣೆಯ ಹಿರಿಯ ನೂಲುಗಾರ ಮಾಧವ ಸಹಸ್ರಬುದ್ಧೆ, 'ತುಲಾ' ಖಾದಿ ಸಂಸ್ಥೆಯ ಸಂಸ್ಥಾಪಕ ಅನಂತ ಶಯನ, ಸೂಫಿ ಗಾಯಕ ಮೀರ್ ಮುಖ್ತಿಯಾರ್ ಅಲಿ, ನಟ ಕೆ.ಜೆ. ಸಚ್ಚಿದಾನಂದ, ಲೇಖಕ ಉದಯ್ ಗಾಂವ್ಕರ್, ಟ್ರಸ್ಟಿಗಳಾದ ಸದಾನಂದ, ಚೇತನ್, ಸೌಮ್ಯಾ, ಶಕ್ತಿಧಾಮದ ನಿರ್ದೇಶಕಿ ಮಂಜುಳಾ, ಮೈಸೂರು ನೂಲುಗಾರರ ಬಳಗದ ಅಭಿಲಾಷ್ ಇದ್ದರು.

ಇಬ್ಬರಿಗೆ ವೈದ್ಯಕೀಯ ನೊಬೆಲ್

ಒಂದನೇ ಪುಟದಿಂದ...

ನೊಬೆಲ್ ಪ್ರಶಸ್ತಿ ಸಮಿತಿಯ ಕಾರ್ಯದರ್ಶಿ ಥಾಮಸ್ ಪರ್ಲ್‌ಮನ್ ಅವರು ಪ್ರಶಸ್ತಿಯನ್ನು ಘೋಷಿಸಿದರು. ಪ್ರಶಸ್ತಿ ಪ್ರಕಟಿಸುವುದಕ್ಕೂ ಮುನ್ನ ಇಬ್ಬರೂ ವಿಜ್ಞಾನಿಗಳನ್ನು ಸಂಪರ್ಕಿಸಿ ಅವರಿಗೆ ಮಾಹಿತಿ ನೀಡಲಾಗಿದೆ. ಅವರಿಬ್ಬರು ಸಂಭ್ರಮಗೊಂಡಿದ್ದಾರೆ ಎಂದು ಪರ್ಲ್‌ಮನ್ ಹೇಳಿದ್ದಾರೆ.

ನೊಬೆಲ್ ಪ್ರಶಸ್ತಿಯ ಜೊತೆಗೆ 10 ಲಕ್ಷ ಡಾಲರ್ (ಸುಮಾರು ₹8.2 ಕೋಟಿ) ನಗದು ನೀಡಲಾಗುತ್ತದೆ. ಸ್ವೀಡನ್‌ನ ಸಂಶೋಧಕ ಆಲ್ಫ್ರೆಡ್ ನೊಬೆಲ್ ಅವರು ಈ ಪ್ರಶಸ್ತಿ ಸ್ಥಾಪಿಸಿದ್ದಾರೆ. ಆಲ್ಫ್ರೆಡ್ ಅವರ ಪುಣ್ಯ ಸ್ಮರಣೆಯ ದಿನವಾದ ಡಿಸೆಂಬರ್ 10ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಶಾಂತಿ ಪ್ರಶಸ್ತಿಯನ್ನು ಓಸ್ಲೊದಲ್ಲಿ ಪ್ರದಾನ ಮಾಡಲಾಗುತ್ತದೆ. ಉಳಿದ ಪ್ರಶಸ್ತಿಗಳನ್ನು ಸ್ಟಾಕ್‌ಹೋಮ್‌ನಲ್ಲಿ ಪ್ರದಾನ ಮಾಡಲಾಗುವುದು.

ಕೋವಿಡ್ ಸಂಶೋಧನೆಗೆ ಕಳೆದ ವರ್ಷವೂ ಪ್ರಶಸ್ತಿ

ವೈದ್ಯಕೀಯ ಕ್ಷೇತ್ರದ ನೊಬೆಲ್ ಪುರಸ್ಕಾರವನ್ನು ಕಳೆದ ವರ್ಷ ಸ್ವೀಡನ್‌ನ ವಿಜ್ಞಾನಿ ಸ್ವಾಂತೆ ಪಾಬೊ ಪಡೆದುಕೊಂಡಿದ್ದಾರೆ. ಕೋವಿಡ್–19 ಸಾಂಕ್ರಾಮಿಕವು ಮನುಷ್ಯನನ್ನು ಇಷ್ಟೊಂದು ತೀವ್ರವಾಗಿ ಕಾಡಲು ಕಾರಣವೇನು ಎಂಬ ಕುರಿತು ಪಾಬೊ ಸಂಶೋಧನೆ ನಡೆಸಿದ್ದರು. ಈ ಕುರಿತಂತೆ ಮಹತ್ವದ ಒಳನೋಟಗಳನ್ನು ಅವರ ಸಂಶೋಧನೆಯು ನೀಡಿತ್ತು.

ಇನ್ನೂ ಒಂದು ವಿಶೇಷವೆಂದರೆ ಪಾಬೊ ಕುಟುಂಬಕ್ಕೆ ಇದು ಎರಡನೇ ನೊಬೆಲ್ ಪುರಸ್ಕಾರ. ಪಾಬೊ ಅವರ ತಂದೆ ಸುನೆ ಬರ್ಗ್‌ಸ್ಟ್ರಾಮ್ ಅವರಿಗೂ 1982ರಲ್ಲಿ ವೈದ್ಯಕೀಯ ಕ್ಷೇತ್ರದ ನೊಬೆಲ್ ಒಲಿದು ಬಂದಿತ್ತು.

ರಾಷ್ಟ್ರೀಯ ಜಾತಿಗಣತಿಗೆ ಒತ್ತಡ

ಒಂದನೇ ಪುಟದಿಂದ...

ಜಾತಿ ಗಣತಿ ನಡೆಸಲು ಹಲವು ತೊಡಕುಗಳು ಎದುರಾಗಿದ್ದವು. ಈ ಎಲ್ಲ ತೊಡಕುಗಳನ್ನು ನಿವಾರಿಸಿ, ಜಾತಿ ಗಣತಿ ನಡೆಸಿ ವರದಿಯನ್ನು ಬಿಡುಗಡೆ ಮಾಡುವ ಮೂಲಕ ತಮ್ಮ ಪ್ರತಿಸ್ಪರ್ಧಿಗಳಿಗೆ ರಾಜಕೀಯ ಸಂದೇಶವೊಂದನ್ನು ನೀಡಿದ್ದಾರೆ.

ಒಬಿಸಿ ಮತ್ತು ಇತರ ಹಿಂದುಳಿದ ವರ್ಗಗಳ ನಿಖರ ಸಂಖ್ಯೆಯು ಈಗ ಗೊತ್ತಾಗಿರುವುದರಿಂದ ಮೀಸಲಾತಿ ಹೆಚ್ಚಿಸಬೇಕು ಎಂಬ ಬೇಡಿಕೆ ಕೇಳಿಬರಬಹುದು. ಸಮೀಕ್ಷೆಯು ಜಾತಿ ಮತ್ತು ಧರ್ಮವಾರು ಜನಸಂಖ್ಯೆ ಮಾಹಿತಿಯನ್ನೂ ನೀಡಿದೆ.

ಜಾತೀಯತೆ ವಿರುದ್ಧ ಹೋರಾಡಿದ ಗಾಂಧೀಜಿ ಅವರ ಜನ್ಮದಿನದಂದೇ ಜಾತಿ ಗಣತಿಯ ವರದಿಯನ್ನು ಪ್ರಕಟಿಸಲಾಗಿದೆ ಎಂದು ನಿತೀಶ್ ಹೇಳಿದ್ದಾರೆ. ಜಾತಿ ಗಣತಿಯ ಪ್ರಸ್ತಾವಕ್ಕೆ ಬಿಜೆಪಿ ಸೇರಿ ಎಲ್ಲ ಒಂಬತ್ತು ಪಕ್ಷಗಳು ವಿಧಾನಸಭೆಯಲ್ಲಿ ಒಪ್ಪಿಗೆ ನೀಡಿದ್ದವು ಎಂಬುದನ್ನು ಅವರು ನೆನಪಿಸಿಕೊಂಡಿದ್ದಾರೆ.

ಈ ಗಣತಿಯು ರಾಷ್ಟ್ರ ಮಟ್ಟದಲ್ಲಿ ಜಾತಿ ಗಣತಿ ನಡೆಸಬೇಕು ಎಂದು ಬೇಡಿಕೆಗೆ ಪುಷ್ಟಿ ನೀಡಲಿದೆ ಎಂದು ನಿತೀಶ್ ಅವರ ಜೆಡಿಯುನ ಮಿತ್ರಪಕ್ಷ ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಹೇಳಿದ್ದಾರೆ. ಕೇಂದ್ರದಲ್ಲಿ 'ಇಂಡಿಯಾ' ಮೈತ್ರಿಕೂಟವು 2024ರ ಲೋಕಸಭೆ ಚುನಾವಣೆ ಬಳಿಕ ಸರ್ಕಾರ ರಚಿಸಲಿದೆ. ಈ ಸರ್ಕಾರವು ದೇಶದಾದ್ಯಂತ ಜಾತಿ ಗಣತಿ ನಡೆಸಲಿದೆ ಎಂದು ಅವರು ಹೇಳಿದ್ದಾರೆ.

ಜಾತಿ ಗಣತಿ ನಡೆಸುವುದಕ್ಕೆ ಪಟ್ನಾ ಹೈಕೋರ್ಟ್ ತಡೆ ನೀಡಿತ್ತಾದರೂ ಬಳಿಕ ಅದನ್ನು ತೆರವುಗೊಳಿಸಿತ್ತು. ಈ ಗಣತಿಗೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿತ್ತು.

ಜನಸಂಖ್ಯೆಗೆ ತಕ್ಕಂತೆ ಪ್ರಾತಿನಿಧ್ಯಕ್ಕೆ ಆಗ್ರಹ

ಒಂದನೇ ಪುಟದಿಂದ...

'ಒಬಿಸಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ 84ರಷ್ಟಿದೆ. ಕೇಂದ್ರ ಸರ್ಕಾರದ 90 ಕಾರ್ಯದರ್ಶಿಗಳ ಪೈಕಿ ಒಬಿಸಿಗೆ ಸೇರಿದವರು ಇರುವುದು ಮೂವರು ಮಾತ್ರ. ಈ ಮೂವರು ದೇಶದ ಬಜೆಟ್‌ನ ಶೇ 5ರಷ್ಟನ್ನು ಮಾತ್ರ ನಿರ್ವಹಿಸುತ್ತಿದ್ದಾರೆ. ಹಾಗಾಗಿಯೇ ಜಾತಿ ಮಾಹಿತಿಯನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಜನಸಂಖ್ಯೆ ಹೆಚ್ಚಿದಂತೆ ಹಕ್ಕುಗಳು ಹೆಚ್ಚಾಗುತ್ತವೆ. ಇದು ನಮ್ಮ ಪ್ರತಿಜ್ಞೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಂಗ್ರೆಸ್‌ನ ನಿಲುವನ್ನು ರಾಹುಲ್ ಪ್ರತಿಪಾದಿಸಿದ್ದಾರೆ. ಒಬಿಸಿ ಸಮುದಾಯಗಳನ್ನು ಮತ್ತೆ ತನ್ನತ್ತ ಸೆಳೆಯಲು ಕಾಂಗ್ರೆಸ್ ಕೆಲವು ವರ್ಷಗಳಿಂದ ಪ್ರಯತ್ನಿಸುತ್ತಿದೆ. ತಮ್ಮ ಪಕ್ಷವು ಜಾತಿ ಗಣತಿಯ ಪರವಾಗಿದೆ ಎಂದು ಇದೇ ಏಪ್ರಿಲ್ 16ರಂದು ರಾಹುಲ್ ಅವರು ಕೋಲಾರದಲ್ಲಿ ಘೋಷಿಸಿದ್ದರು.

ಯುಪಿಎ–2 ಸರ್ಕಾರದ ಅವಧಿಯಲ್ಲಿ ನಡೆಸಲಾಗಿದ್ದ ಜಾತಿ ಗಣತಿಯ ವರದಿಯನ್ನು ಬಿಡುಗಡೆ ಮಾಡಬೇಕು ಎಂದು ಕಾಂಗ್ರೆಸ್ ಆಗ್ರಹಿಸುತ್ತಲೇ ಬಂದಿದೆ.

ಎಎಪಿ ಕೂಡ ಬಿಜೆಪಿ ಮೇಲೆ ಜಾತಿ ಗಣತಿಗೆ ಸಂಬಂಧಿಸಿ ಹರಿಹಾಯ್ದಿದೆ. ಪ್ರಧಾನಿಯವರು ಜಾತಿ ಗಣತಿ ನಡೆಸಲು ಹಿಂದೇಟು ಹಾಕುತ್ತಿದ್ದಾರೆ ಎಂದು ಎಎಪಿಯ ಸಂಜಯ್ ಸಿಂಗ್ ಆಪಾದಿಸಿದ್ದಾರೆ.

'ಅವರು (ಬಿಜೆಪಿ) ಒಬಿಸಿ, ದಲಿತ, ಬುಡಕಟ್ಟು ಮತ್ತು ಶೋಷಿತ ಜನರ ವಿರುದ್ಧವಾಗಿದ್ದಾರೆ. ಹಾಗಾಗಿಯೇ ಜಾತಿ ಗಣತಿ ನಡೆಸಲು ಅವರು ಸಿದ್ಧರಿಲ್ಲ. ದೇಶದಾದ್ಯಂತ ಜಾತಿ ಗಣತಿ ನಡೆಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕ ಅಸಮಾಧಾನ

ನಿತೀಶ್ ಕುಮಾರ್ ಸರ್ಕಾರ ಬಿಡುಗಡೆ ಮಾಡಿರುವ ಜಾತಿ ಗಣತಿ ವರದಿಗೆ ಬಿಜೆಪಿ ಬಿಹಾರ ಘಟಕ ಅಸಮಾಧಾನ ವ್ಯಕ್ತಪಡಿಸಿದೆ. ಇದು ಹಲವು ವರ್ಷಗಳಲ್ಲಿ 'ಬದಲಾಗಿರುವ ಸಾಮಾಜಿಕ ಮತ್ತು ಆರ್ಥಿಕ ವಾಸ್ತವಾಂಶ'ಗಳ ಬಗ್ಗೆ ಏನನ್ನೂ ತಿಳಿಸುವುದಿಲ್ಲ ಎಂದು ಅಧ್ಯಕ್ಷ ಸಾಮ್ರಾಟ್ ಚೌಧರಿ ಹೇಳಿದ್ದಾರೆ.

'ಪಕ್ಷವು ಗಣತಿ ಕಾರ್ಯಕ್ಕೆ ಒಪ್ಪಿಗೆ ನೀಡಿತ್ತು. ಆದರೆ ಈಗ ವರದಿಯನ್ನು ಪರಿಶೀಲಿಸಿದ ನಂತರ ಹೇಳಿಕೆ ನೀಡಲಾಗುವುದು' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಹುಲಿ ದಾಳಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಹನಗೋಡು (ಮೈಸೂರು ಜಿಲ್ಲೆ): ಇಲ್ಲಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಪಕ್ಕದಲ್ಲಿ ದನ ಮೇಯಿಸುತ್ತಿದ್ದ ಉಡುವೆಪುರದ ಗಣೇಶ್ (58) ಸೋಮ ವಾರ ಹುಲಿ ದಾಳಿಗೆ ಸಿಲುಕಿ ಮೃತ ಪಟ್ಟರು.

ಸಂಜೆ ದನಗಳಷ್ಟೆ ಮನೆಗೆ ಬಂದಿದ್ದವು. ಆದರೆ, ಗಣೇಶ್ ಬಾರದಿರುವುದನ್ನು ಗಮನಿಸಿದ ಕುಟುಂಬದವರು ಆತಂಕಗೊಂಡು ಹುಡುಕಾಡಿದಾಗ ಶವ ಪತ್ತೆಯಾಗಿದೆ.

ಪ್ರತ್ಯೇಕ ಪ್ರಕರಣ: ಆರು ಸಾವು

ತುಮಕೂರು: ತಾಲ್ಲೂಕಿನ ಹಿರೇಹಳ್ಳಿ ಬಳಿ ಸೋಮವಾರ ಬೆಳಗಿನ ಜಾವ ರೈಲಿಗೆ ತಲೆಕೊಟ್ಟು ಒಂದೇ ಕುಟುಂಬದ ಮೂವರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮರಳೂರಿನ ನಿವಾಸಿಗಳಾದ ಸಿದ್ಧಗಂಗಯ್ಯ (62), ಪತ್ನಿ ಸುನಂದಾ (50), ಪುತ್ರಿ ಗೀತಾ (33) ಮೃತರು. ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಸಿದ್ಧಗಂಗಯ್ಯ ಬೆಸ್ಕಾಂನ ನಿವೃತ್ತ ನೌಕರ. ಸುನಂದಾ ಗೃಹಿಣಿ. ಗೀತಾ ಅವರನ್ನು ಸದಾಶಿವನಗರದ ನಿವಾಸಿಯೊಬ್ಬರಿಗೆ ಕೊಟ್ಟು ಮದುವೆ ಮಾಡಿದ್ದು, ಅವರ ಪತಿಯೂ ಬೆಸ್ಕಾಂನ ಉದ್ಯೋಗಿಯಾಗಿದ್ದಾರೆ.

ತಿಥಿಗೆ ಹೊರಟವರ ಸಾವು: ಕೊರಟಗೆರೆ ತಾಲ್ಲೂಕು ಅರಸಾಪುರ ಬಳಿ ಸೋಮವಾರ ಲಾರಿ ಡಿಕ್ಕಿಯಾಗಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ವೀರೇನಹಳ್ಳಿ ತಾಂಡಾದ ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದಾರೆ.

ಅನಿತಾಬಾಯಿ ಕೃಷ್ಣನಾಯ್ಕ(40), ಪುತ್ರ ಬಾಲಾಜಿ (18), ಸಂಬಂಧಿ ಪವನ್ (20) ಮೃತಪಟ್ಟವರು. ಪಕ್ಕದ ತಾಂಡಾದ ಸಂಬಂಧಿಕರ ತಿಥಿಗೆ ಮೂವರು ಹೊರಟಿದ್ದರು. ಎದುರಿನಿಂದ ಬಂದ ಲಾರಿ ಡಿಕ್ಕಿ ಹೊಡೆದಿದ್ದು, ಕೆಳಗೆ ಬಿದ್ದ ಮೂವರ ಮೇಲೆ ಲಾರಿ ಹರಿಯಿತು. ಕೊರಟಗೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೃದಯಾಘಾತದ ಚಿಕಿತ್ಸೆಯ ಬಳಿಕ...



ಡಾ. ಕಿರಣ್ ವಿ. ಎಸ್.

ನಮ್ಮನ್ನು ಕಾಡುವ ಕಾಯಿಲೆಗಳನ್ನು ಸ್ಥೂಲವಾಗಿ ಎರಡು ಬಗೆಯಾಗಿ ವಿಂಗಡಿಸಬಹುದು. ಮೊದಲನೆಯದು, ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಂಕ್ರಾಮಿಕ ಕಾಯಿಲೆಗಳು. ಇದಕ್ಕೆ ಕಾರಣ ರೋಗಾಣುಗಳು. ಈ ರೋಗಾಣುಗಳು ಗಾಳಿ, ನೀರು, ಆಹಾರ, ಸ್ಪರ್ಶ ಮೊದಲಾದ ಮಾಧ್ಯಮಗಳ ಮೂಲಕ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತವೆ. ಇಂತಹ ರೋಗಾಣುಗಳನ್ನು ಪತ್ತೆ ಮಾಡಿ, ಅವು ನಿಗ್ರಹಕ್ಕೆ ಬರುವಂತಹ ಜೀವಿರೋಧಕ ಔಷಧಗಳನ್ನು ಸರಿಯಾದ ಪ್ರಮಾಣದಲ್ಲಿ ಸಾಕಷ್ಟು ಅವಧಿಗೆ ಸೇವಿಸಿದರೆ ಕಾಯಿಲೆ ಇಲ್ಲವಾಗುತ್ತದೆ. ಇದನ್ನು ಸಂಪೂರ್ಣ ಚಿಕಿತ್ಸೆ ಎನ್ನಬಹುದು.

ಎರಡನೆಯದು, ಒಬ್ಬರಿಂದ ಮತ್ತೊಬ್ಬರಿಗೆ ನೇರವಾಗಿ ಹರಡದ ಕಾಯಿಲೆಗಳು. ಉದಾಹರಣೆಗೆ ಮಧುಮೇಹ, ಸಂಧಿವಾತ, ಪಾರ್ಶ್ವವಾಯು, ಕ್ಯಾನ್ಸರ್, ನರಗಳ ದೌರ್ಬಲ್ಯ, ಸ್ನಾಯುಗಳ ಸಮಸ್ಯೆ ಮೊದಲಾದುವು. ಇವು ದೀರ್ಘಕಾಲಿಕ ಕಾಯಿಲೆಗಳು. ಇವುಗಳಿಗೆ ಸಂಪೂರ್ಣ ಚಿಕಿತ್ಸೆ ಎಂಬುದಿಲ್ಲ. ಆದರೆ, ಈ ಕಾಯಿಲೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು, ಜೀವನವನ್ನು ಸರಾಗವಾಗಿ ನಡೆಸುವುದು ಸಾಧ್ಯ. ಇದಕ್ಕಾಗಿ ಜೀವನಶೈಲಿಯ ಬದಲಾವಣೆ, ಆಹಾರದಲ್ಲಿ ಸಂಯಮ, ಶಿಸ್ತಿನ ಬದುಕು, ನಿಯಮಿತ ಔಷಧ ಬಳಕೆ, ಸೂಕ್ತವಾದ ವ್ಯಾಯಾಮ, ಕ್ಲುಪ್ತ ಸಮಯದಲ್ಲಿ ಪರೀಕ್ಷೆಗಳನ್ನು ಮಾಡಿಸಿಕೊಂಡು ವೈದ್ಯರ ಸಲಹೆ ಪಡೆಯುವುದು ಮೊದಲಾದ ದಾರಿಗಳಿವೆ. ಇಂತಹ ಕಾಯಿಲೆಗಳ ಪೈಕಿ ಹೃದ್ರೋಗ ಪ್ರಮುಖವಾದದ್ದು.

ಹೃದ್ರೋಗಗಳಲ್ಲಿ ಹಲವಾರು ವಿಧಗಳು ಇವೆಯಾದರೂ ಬಹಳ ಜನರ ಸಮಸ್ಯೆ ಹೃದಯಾಘಾತದ್ದು. ಹೃದಯಕ್ಕೆ ರಕ್ತದ ಸರಬರಾಜು ಮಾಡುವ ರಕ್ತನಾಳಗಳಲ್ಲಿ ಕೊಬ್ಬಿನ ಶೇಖರಣೆಯಾದಾಗ ರಕ್ತದ ಹರಿವಿಗೆ ಅಡಚಣೆಯಾಗುತ್ತದೆ. ಇದು ಒಂದು ಪ್ರಮಾಣವನ್ನು ಮೀರಿದಾಗ ಹೃದಯದ ಮಾಂಸಖಂಡಗಳಿಗೆ ರಕ್ತದ ಪೂರೈಕೆ ಇಲ್ಲದಂತಾಗಿ, ಅವು ನಶಿಸುತ್ತವೆ. ಇದನ್ನು 'ಹೃದಯಾಘಾತ' ಎನ್ನಬಹುದು. ಇಂತಹ ಸಂದರ್ಭದಲ್ಲಿ ಸಾಧ್ಯವಾದಷ್ಟೂ ಬೇಗ ರಕ್ತನಾಳಗಳಲ್ಲಿ ಇರುವ ಅಡಚಣೆಯನ್ನು ನಿವಾರಿಸಿ, ರಕ್ತದ ಪೂರೈಕೆಯನ್ನು ಸರಾಗವಾಗಿಸಬೇಕು. ಇದಕ್ಕೆ ಹಲವಾರು ದಾರಿಗಳಿವೆ. 'ಆಂಜಿಯೋಗ್ರಾಂ' ಮೂಲಕ ಅಡಚಣೆ ಇರುವ ರಕ್ತನಾಳವನ್ನು ಗುರುತಿಸಿ, ಅದರೊಳಗೆ ತೆಳುವಾದ ನಳಿಕೆಯನ್ನು ತೂರಿಸಿ, ಅಡಚಣೆ ಇರುವ ಭಾಗವನ್ನು ಬಲೂನುಗಳ ಮೂಲಕ ಹಿಗ್ಗಿಸಿ, ಅದು ಪುನಃ ಕುಸಿಯದಂತೆ 'ಸ್ಟೆಂಟ್' ಎನ್ನುವ ಲೋಹದ ಸುರಳಿಯ ಆಸರೆಯನ್ನು ನೀಡಬೇಕು. ಇದನ್ನು 'ಆಂಜಿಯೋಪ್ಲಾಸ್ಟಿ' ಎನ್ನುತ್ತಾರೆ. ಇದು ಸಾಧ್ಯವಾಗದಿದ್ದರೆ ಹೃದಯದ ಶಸ್ತ್ರಚಿಕಿತ್ಸೆ ಮಾಡಿ, ಅಡಚಣೆ ಇರುವ ರಕ್ತನಾಳದ ಭಾಗವನ್ನು ತೆಗೆದುಹಾಕಿ, ಅದರ ಸ್ಥಾನದಲ್ಲಿ ಬೇರೊಂದು ಆರೋಗ್ಯವಂತ ರಕ್ತನಾಳವನ್ನು ಜೋಡಿಸಬೇಕು. ಇದನ್ನು 'ಬೈಪಾಸ್' ಶಸ್ತ್ರಚಿಕಿತ್ಸೆ ಎನ್ನಲಾಗುತ್ತದೆ. ಇವೆರಡೂ ಸಾಧ್ಯವಿಲ್ಲದಾಗ ರಕ್ತನಾಳಗಳ ಅಡಚಣೆಯನ್ನು ಕರಗಿಸಬಲ್ಲ ಔಷಧಿಗಳನ್ನು ನೀಡಿ ಸಮಸ್ಯೆಯನ್ನು ತಾತ್ಕಾಲಿಕವಾಗಿ ನಿವಾರಿಸಿಕೊಳ್ಳಬೇಕು.

ಈ ಯಾವುದೇ ಚಿಕಿತ್ಸೆಗಳೂ ಹೃದಯವನ್ನು ಮತ್ತೆ ಕೆಲಸ ಮಾಡುವ ಸ್ಥಿತಿಗೆ ತರಬಲ್ಲವಾದರೂ, ಬಹುತೇಕ ಸಂದರ್ಭಗಳಲ್ಲಿ ನೂರು ಪ್ರತಿಶತ ಆರೋಗ್ಯವಂತ ಹೃದಯವನ್ನು ಮತ್ತೆ ನೀಡಲಾರವು. ಅಲ್ಲದೆ, ಒಂದು ಬಾರಿ ಚಿಕಿತ್ಸೆಯಾದ ನಂತರ ಪುನಃ ಇದೇ ರೀತಿ ಆಗುವುದಿಲ್ಲ ಎಂದೇನೂ ಇಲ್ಲ. ಹೃದಯಕ್ಕೆ ರಕ್ತದ ಸರಬರಾಜು ಮಾಡುವ ಮೂರು ಮುಖ್ಯ ರಕ್ತನಾಳಗಳಿವೆ. ಅದರಲ್ಲಿ ಒಂದು ನಾಳಕ್ಕೆ ಗಾಸಿಯಾದರೂ ಹೃದಯಾಘಾತ ಆಗಬಹುದು. ಈ ಮುನ್ನ ಚಿಕಿತ್ಸೆಗೆ ಒಳಪಟ್ಟ ರಕ್ತನಾಳದಲ್ಲೂ ಮತ್ತೆ ಸಮಸ್ಯೆ ಕಾಣಬಹುದು. ಅಥವಾ, ಉಳಿದೆರಡು ರಕ್ತನಾಳಗಳು ತೊಂದರೆಗೆ ಒಳಗಾಗಬಹುದು. ಒಟ್ಟಾರೆ, ಹೃದಯಾಘಾತದ ಚಿಕಿತ್ಸೆಯ ನಂತರ ಹೃದಯವನ್ನು ಮತ್ತಷ್ಟು ಜತನದಿಂದ ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಇದಕ್ಕೆ ಕೆಲವು ಮಾರ್ಗಗಳನ್ನು ಪರಿಗಣಿಸಬಹುದು.

1. ಹೃದಯಾಘಾತದ ಚಿಕಿತ್ಸೆಯ ನಂತರ ಹಲವಾರು ಮಾತ್ರೆಗಳನ್ನು ನಿಯಮಿತವಾಗಿ ಸೇವಿಸಬೇಕಾಗುತ್ತದೆ. ಪ್ರಸ್ತುತ ಚಿಕಿತ್ಸೆಯ ಸಾಫಲ್ಯಕ್ಕೆ ಮತ್ತು ಮುಂದಿನ ಅವಘಡವನ್ನು ತಪ್ಪಿಸುವುದಕ್ಕೆ ಈ ಔಷಧಗಳು ಸಹಕಾರಿ. ಯಾವುದೇ ಕಾರಣಕ್ಕೂ ಔಷಧ ಸೇವನೆಯನ್ನು ತಪ್ಪಿಸಬಾರದು. ಇದರಲ್ಲಿ ಯಾವುದೇ ಮಾರ್ಪಾಡನ್ನೂ ಸ್ವತಃ ವೈದ್ಯರೇ ಸೂಚಿಸಬೇಕೇ ಹೊರತು, ರೋಗಿಗಳು ಖುದ್ದಾಗಿ ಮಾಡಬಾರದು.

2. ಹೃದಯಾಘಾತದ ತೀವ್ರತೆಯನ್ನು ಅವಲಂಬಿಸಿ ಅದನ್ನು ಮತ್ತೆ ಚೇತರಿಸಿಕೊಳ್ಳುವಂತೆ ಮಾಡಲು ವ್ಯವಸ್ಥಿತ ವಿಧಾನಗಳಿವೆ. ಎಂತಹ ಮತ್ತು ಎಷ್ಟು ವ್ಯಾಯಾಮ ಬೇಕು; ಮಾನಸಿಕ ಒತ್ತಡದ ನಿರ್ವಹಣೆ; ಆಹಾರದಲ್ಲಿ ಸೂಕ್ತ ಮಾರ್ಪಾಡು; ಜೀವನಶೈಲಿಯ ಬದಲಾವಣೆ; ಕೆಟ್ಟ ಚಟಗಳಿಂದ ದೂರವಿರುವುದು; ಸಮಾನಮನಸ್ಕರ ಒಡನಾಟ; ಮೊದಲಾದ ವಿಷಯಗಳ ಬಗ್ಗೆ ತಜ್ಞರ ಸಲಹೆ ಪಡೆದು ಕಟ್ಟುನಿಟ್ಟಾಗಿ ಪಾಲಿಸಬೇಕು.


3. ವೈದ್ಯರು ಸೂಚಿಸಿದ ವೇಳೆಗೆ ಅವರನ್ನು ಕಂಡು ಅಗತ್ಯವಾದ ಪರೀಕ್ಷೆಗಳನ್ನು ಮಾಡಿಸಿ, ಹೃದಯದ ಸ್ಥಿತಿಗತಿಗಳನ್ನು ಅರಿತುಕೊಳ್ಳಬೇಕು. ಚಿಕಿತ್ಸೆಯ ಸೂಕ್ತ ಮಾರ್ಪಾಡಿಗೆ ಇದು ಬಹಳ ಸಹಕಾರಿ. ಇಂತಹ ಭೇಟಿಗಳನ್ನು ನಿರ್ಲಕ್ಷಿಸಬಾರದು.

4. ಹೃದಯಾಘಾತವನ್ನು ಸೂಚಿಸಬಲ್ಲ ಯಾವುದೇ ಲಕ್ಷಣಗಳು ಕಂಡುಬಂದರೆ, ಅದನ್ನು ಶೀಘ್ರವಾಗಿ ವೈದ್ಯರ ಗಮನಕ್ಕೆ ತರಬೇಕು. ಈ ಮೊದಲಿನ ಅನಾರೋಗ್ಯದ ಅನುಭವವನ್ನು ಮುಂದಿನ ಆರೋಗ್ಯ ನಿರ್ವಹಣೆಯ ಕಲಿಕೆಗೆ ಸೂಕ್ತವಾಗಿ ಬಳಸಿಕೊಳ್ಳಬೇಕು.

5. ಮತ್ತೊಮ್ಮೆ ಹೃದಯಾಘಾತಕ್ಕೆ ಕಾರಣವಾಗಬಲ್ಲ ಮಧುಮೇಹದಂತಹ ಕಾಯಿಲೆಗಳ ಸಮಗ್ರ ನಿರ್ವಹಣೆ, ಅಧಿಕ ರಕ್ತದೊತ್ತಡದ ನಿಗ್ರಹಗಳಿಗೆ ತಜ್ಞರ ಸಲಹೆ ಪಡೆದು ಸರಿಯಾಗಿ ಪಾಲಿಸಬೇಕು. ಹೃದಯಾಘಾತದ ಚಿಕಿತ್ಸೆಯ ವೇಳೆ ಇವು ಏರುಪೇರಾಗುವ ಸಾಧ್ಯತೆಗಳಿರುತ್ತವೆ. ಸಾಮಾನ್ಯವಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗುವ ಮುನ್ನ ಈ ಅನಾರೋಗ್ಯಗಳನ್ನು ತಹಬಂದಿಗೆ ತರಲು ವೈದ್ಯರು ಶ್ರಮಿಸಿರುತ್ತಾರೆ. ಇಂತಹ ವೇಳೆಯಲ್ಲಿ ಮಧುಮೇಹದ ನಿಯಂತ್ರಣಕ್ಕೆ ಈ ಮೊದಲು ತೆಗೆದುಕೊಳ್ಳುತ್ತಿದ್ದ ಔಷಧಗಳ ಪ್ರಮಾಣ ಬದಲಾಗಬಹುದು. ಇದನ್ನು ವೈದ್ಯರ ಬಳಿ ಸರಿಯಾಗಿ ಚರ್ಚಿಸಿ, ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

6. ಹೃದಯಾಘಾತದ ನಂತರದ ಅವಧಿಯಲ್ಲಿ ದೇಹತೂಕದ ನಿರ್ವಹಣೆ ಕಷ್ಟವಾಗುತ್ತದೆ. ಶರೀರದ ಚಲನೆಯಲ್ಲಿ, ವ್ಯಾಯಾಮದಲ್ಲಿ ಮಿತಿಗಳನ್ನು ವಹಿಸುವುದರಿಂದ, ಕೆಲವು ಔಷಧಗಳ ಅಡ್ಡಪರಿಣಾಮಗಳಿಂದ ಬೊಜ್ಜಿನ ಸಾಧ್ಯತೆ ಅಧಿಕವಾಗುತ್ತದೆ. ಶರೀರದ ತೂಕವನ್ನು ಜಾಣತನದಿಂದ ನಿರ್ವಹಿಸುವುದು ಅಗತ್ಯ. ಕ್ಯಾಲರಿಗಳು ಹೆಚ್ಚಾಗದಂತೆ ಶರೀರಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುವುದರಲ್ಲಿ ಆಹಾರತಜ್ಞರು ನೆರವಾಗಬಲ್ಲರು.

ಹೃದಯಾಘಾತದ ಚಿಕಿತ್ಸೆ ಒಂದು ಸಮಸ್ಯೆಯ ತಾತ್ಕಾಲಿಕ ಅಂತ್ಯವೂ ಹೌದು; ಮತ್ತೊಂದು ದೀರ್ಘಕಾಲಿಕ ಜವಾಬ್ದಾರಿಯೂ ಹೌದು. ಇದರ ಬಗ್ಗೆ ಅರಿವನ್ನು ಮೂಡಿಸಿಕೊಂಡು, ಸಮಸ್ಯೆ ಮತ್ತೊಮ್ಮೆ ಉಲ್ಬಣಗೊಳ್ಳದಂತೆ ಆರೋಗ್ಯವನ್ನು ಕಾಯ್ದುಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ. ❖



ಡಯಾಲಿಸಿಸ್ ಏನು? ಏಕೆ? ಹೇಗೆ?


ಡಾ. ವಿನಯ ಶ್ರೀನಿವಾಸ್

ಶರೀರದಲ್ಲಿ ಉತ್ಪತ್ತಿಯಾಗುವ ದ್ರವರೂಪದ ತ್ಯಾಜ್ಯಗಳನ್ನು ದೇಹದಿಂದ ಹೊರಹಾಕುವ ಮುಖ್ಯ ಕೆಲಸವನ್ನು ಮೂತ್ರಪಿಂಡಗಳು ನಿರ್ವಹಿಸುತ್ತವೆ. ಅದರೊಂದಿಗೆ ದೇಹದ ಆಮ್ಲ-ಪ್ರತ್ಯಾಮ್ಲ, ಲವಣಾಂಶಗಳು ಮತ್ತು ದ್ರವಾಂಶವನ್ನು ಸೂಕ್ತ ಮಟ್ಟದಲ್ಲಿ ಕಾಯ್ದಿರಿಸುವ ಮಹತ್ವದ ಕೆಲಸವೂ ಅವುಗಳದ್ದೇ. ಅಲ್ಲದೆ, ರಕ್ತಕಣಗಳು ಮತ್ತು ಹಿಮೊಗ್ಲೋಬಿನ್‌ನ ಉತ್ಪಾದನೆಗೆ ಅತ್ಯಗತ್ಯವಾದ ಎರಿಥ್ರೋಪೊಯೆಟಿನ್ ಮತ್ತು ವಿಟಮಿನ್ ಡಿ ಜೀವಸತ್ವದ ಕ್ರಿಯಾಶೀಲರೂಪದ ತಯಾರಿ ನಡೆಯುವುದೂ ಮೂತ್ರಪಿಂಡಗಳಲ್ಲಿಯೇ. 'ರೆನಿನ್' ಎಂಬ ವಸ್ತುವಿನ ಉತ್ಪಾದನೆಯ ಮೂಲಕ ರಕ್ತದೊತ್ತಡವನ್ನು ಸಹಜ ಮಟ್ಟದಲ್ಲಿ ನಿರ್ವಹಿಸುವ ಮುಖ್ಯ ಜವಾಬ್ದಾರಿಯೂ ಈ ಅಂಗಾಂಗಗಳದ್ದೇ.

ಶರೀರದಲ್ಲಿ ಎರಡು ಮೂತ್ರಪಿಂಡಗಳಿದ್ದರೂ, ಹಲವು ಸಂದರ್ಭಗಳಲ್ಲಿ ಒಂದೇ ಮೂತ್ರಪಿಂಡವು ಎರಡರ ಕಾರ್ಯಕ್ಷಮತೆಯನ್ನು ತೋರಬಲ್ಲದು. ಮೂತ್ರಪಿಂಡಗಳ ಸಂಪೂರ್ಣ ವೈಫಲ್ಯ ಎಂದು ವೈದ್ಯರು ಸೂಚಿಸಿದರೆ ಎರಡರ ಕಾರ್ಯಕ್ಷಮತೆಯೂ ಕುಂಠಿತವಾಗಿದೆ ಎಂದರ್ಥ. ಹಲವು ಕಾರಣಗಳಿಂದಾಗಿ ಮೂತ್ರಪಿಂಡಗಳ ಕಾರ್ಯನಿರ್ವಹಣೆ ವಿಫಲವಾಗಬಹುದು. ಮುಖ್ಯವಾಗಿ ದೀರ್ಘಕಾಲಿಕ ಮಧುಮೇಹ ಮತ್ತು ರಕ್ತದೊತ್ತಡವನ್ನು ಸಮರ್ಪಕವಾಗಿ ನಿಯಂತ್ರಣದಲ್ಲಿಡದಿದ್ದಾಗ ವ್ಯಕ್ತಿಯ ಮೂತ್ರಪಿಂಡಗಳು ಅಪಾಯದಲ್ಲಿರುತ್ತವೆ. ಮಧುಮೇಹಿಗಳು ಮತ್ತು ರಕ್ತದೊತ್ತಡದಿಂದ ಬಳಲುವವರು ನಿಯಮಿತವಾಗಿ ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಳ್ಳಬೇಕು. ಸೂಕ್ತಚಿಕಿತ್ಸೆ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು ಸಮಸ್ಯೆಯನ್ನು ಆರಂಭದಿಂದಲೇ ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ವೈದ್ಯರ ಸಲಹೆಯಿಲ್ಲದೆ ದೀರ್ಘಾವಧಿಯವರೆಗೆ ಸೇವಿಸುವ ಔಷಧಗಳೂ ಕೆಲವೊಮ್ಮೆ ಮೂತ್ರಪಿಂಡಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಲ್ಲವು.

ದೀರ್ಘಕಾಲಿಕ ಮೂತ್ರಪಿಂಡಗಳ ವೈಫಲ್ಯಕ್ಕೆ ತುತ್ತಾದ ವ್ಯಕ್ತಿಗೆ ಎರಡು ಆಯ್ಕೆಗಳಿರುತ್ತವೆ. ಒಂದು: ಡಯಾಲಿಸಿಸ್; ಮತ್ತೊಂದು: ಮೂತ್ರಪಿಂಡದ ಕಸಿ. ಮೂತ್ರಪಿಂಡಕಸಿ ಮಾಡಿಸಿಕೊಳ್ಳಲು ಮುಖ್ಯವಾಗಿ ಹೊಂದುವ ದಾನಿ ಲಭ್ಯವಿರಬೇಕು. ಅಷ್ಟೇ ಅಲ್ಲದೆ, ಕಸಿ ಮಾಡಿಸಿಕೊಳ್ಳುವ ವ್ಯಕ್ತಿಯ ಆರೋಗ್ಯವೂ ಸುಸ್ಥಿತಿಯಲ್ಲಿದ್ದು, ಅದಕ್ಕೆ ತಗುಲುವ ವೆಚ್ಚವನ್ನು ಭರಿಸಲೂ ಅವರು ಸಿದ್ಧರಿರಬೇಕು. ರೋಗಿಯು ರಕ್ತಹೀನತೆಯಿಂದ ಬಳಲುತ್ತಿದ್ದರೆ ಆತನಿಗೆ ಅದಕ್ಕೆ ಪೂರಕವಾದ ಚುಚ್ಚುಮದ್ದುಗಳನ್ನು (ಎರಿಥ್ರೋಪೊಯೆಟಿನ್ ಮತ್ತು ಕಬ್ಬಿಣಾಂಶದ ಚುಚ್ಚುಮದ್ದುಗಳನ್ನು) ಮತ್ತು ವಿಟಮಿನ್ ಡಿ ಪೂರಕಗಳನ್ನು ಕೊಡಬೇಕಾಗುತ್ತದೆ. ಒಂದು ಬಾರಿಯ ಡಯಾಲಿಸಿಸ್ ಸಾಮಾನ್ಯವಾಗಿ ನಾಲ್ಕು ತಾಸುಗಳ ಅವಧಿ ಹಿಡಿಯುತ್ತದೆ.

ಯಾವ ಎಚ್ಚರಿಕೆಗಳನ್ನು ವಹಿಸಬೇಕು?



ಡಯಾಲಿಸಿಸ್‌ಗೆ ಒಳಗಾಗುವ ವ್ಯಕ್ತಿಯ ರೋಗನಿರೋಧಕ ವ್ಯವಸ್ಥೆ ದುರ್ಬಲವಾಗಿರುವುದರಿಂದ ಆತ ಸಾಮಾನ್ಯ ಜನರಿಗಿಂತ ಸುಮಾರು ಹತ್ತು ಪಟ್ಟು ಸೋಂಕಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಸೋಂಕು ತಗುಲದಂತೆ ಎಲ್ಲ ರೀತಿಯ ಎಚ್ಚರಿಕೆಗಳನ್ನು ಆತ ವಹಿಸಬೇಕು. ಕುಟುಂಬದವರ ಸಹಕಾರ ಹಾಗೂ ಬೆಂಬಲ ಈ ನಿಟ್ಟಿನಲ್ಲಿ ಬಹಳ ಮುಖ್ಯ.

- ವೈಯಕ್ತಿಕ ಕಾರಣಗಳಿಗಾಗಿ ಡಯಾಲಿಸಿಸ್ ಪ್ರಕ್ರಿಯೆಯನ್ನು ಮುಂದೂಡಬಾರದು. ವೈದ್ಯರು ಸೂಚಿಸದ ಸಮಯ ಮತ್ತು ದಿನಾಂಕದಂದೇ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಾ ಬರುವುದು ಶರೀರವನ್ನು ಸುಸ್ಥಿತಿಯಲ್ಲಿಡಲು ಸಹಕಾರಿ.
- ಜನದಟ್ಟಣೆ ಇರುವಂತಹ ಸ್ಥಳಗಳಿಂದ ದೂರವಿರಬೇಕು. ಅಂತಹ ಸಂದರ್ಭದಲ್ಲಿ ಮಾಸ್ಕ್ ಬಳಸುವುದು ಸೂಕ್ತ. ಲಭ್ಯವಿರುವ ಸೋಂಕಿನ ವಿರುದ್ಧದ ಲಸಿಕೆಗಳನ್ನು (ಇನ್‌ಫ್ಲುಯೆಂಜಾ, ನ್ಯೂಮೊಕಾಕೈ) ಹಾಕಿಸಿಕೊಳ್ಳಬೇಕು.
- ಪ್ರೋಟಿನ್ ಹೇರಳವಾಗಿರುವ ಮೀನು, ಮೊಟ್ಟೆ, ಮಾಂಸ, ಪನ್ನೀರು, ಮೊಳಕೆ ಬರಿಸಿದ ಕಾಳುಗಳು, ಸೋಯಾ ಚಂಕ್‌ಗಳನ್ನು ಆಹಾರದಲ್ಲಿ ಬಳಸಬೇಕು. ಉಪ್ಪಿನ ಅಂಶದ ಬಳಕೆ ಕನಿಷ್ಠ ಪ್ರಮಾಣದಲ್ಲಿರಬೇಕು.
- ದ್ರವಾಂಶದ ಆಹಾರ ಸೇವನೆ ಮಿತಿಯಲ್ಲಿರಲಿ. ವೈದ್ಯರ ಸಲಹೆಯಂತೆ ಒಟ್ಟು ದ್ರವಾಂಶದ ಆಹಾರವು (ನೀರು, ಪಾನೀಯಗಳು, ಸಾಂಬಾರು) ಒಂದು ಲೀಟರ್ ಒಳಗೇ ಬರುವಂತೆ ಗಮನವನ್ನು ವಹಿಸಬೇಕು.
- ಡಯಾಲಿಸಿಸ್‌ಗೆಂದು ಸಿದ್ಧಪಡಿಸಿದ ಫಿಸ್ಟುಲವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಸೋಂಕು ತಗುಲದಂತೆ ಎಚ್ಚರ ವಹಿಸಬೇಕು. ಸ್ವಚ್ಛವಾಗಿರುವ ಶೌಚಾಲಯ ಬಳಕೆಗೆ ಆದ್ಯತೆಯನ್ನು ಕೊಡಿ.

ಮೂತ್ರಪಿಂಡಗಳನ್ನು ಸುಸ್ಥಿತಿಯಲ್ಲಿಡುವುದು ಹೇಗೆ?

- ದಿನವೂ ಕಡ್ಡಾಯವಾಗಿ ಮೂರು ಲೀಟರ್‌ಗಳಿಗೂ ಅಧಿಕ ನೀರನ್ನು ಕುಡಿಯಬೇಕು.
- ಅತಿಯಾದ ಉಪ್ಪಿನ ಅಂಶದ ಆಹಾರ ಒಳ್ಳೆಯದಲ್ಲ.
- ನೀವು ರಕ್ತದೊತ್ತಡ ಅಥವಾ ಮಧುಮೇಹದಿಂದ ಬಳಲುತ್ತಿದ್ದರೆ ತಜ್ಞವೈದ್ಯರಿಂದ ಸೂಕ್ತ ಸಲಹೆ ಮತ್ತು ಔಷಧೋಪಚಾರವನ್ನು ಪಡೆದುಕೊಳ್ಳಬೇಕು. ರಕ್ತದ ಸಕ್ಕರೆ ಅಂಶ ಮತ್ತು ರಕ್ತದೊತ್ತಡ ಸದಾ ಸಹಜ ಮಟ್ಟದಲ್ಲಿರುವಂತೆ ನಿಗಾ ವಹಿಸಬೇಕು.
- ಯಾವುದೇ ಗುರುತು ಪಟ್ಟಿಯಿಲ್ಲದ ಔಷಧಗಳು, ಹೆಸರು ಸೂಚಿಸದ ಗಿಡಮೂಲಿಕೆ ಔಷಧಗಳು, ಜಿಮ್‌ನಲ್ಲಿ ದೇಹದಾರ್ಢ್ಯಕ್ಕೆಂದು ಪೂರೈಸುವ ಹೆಸರಿಲ್ಲದ ಪ್ರೋಟಿನ್ ಪುಡಿಗಳು – ವೈದ್ಯರ ಸಲಹೆಯಿಲ್ಲದೆ ಸೇವಿಸುವ ಇಂಥವು ಮೂತ್ರಪಿಂಡಗಳ ಆರೋಗ್ಯಕ್ಕೆ ಮಾರಕವಾಗಬಹುದು.
- ದೀರ್ಘಾವಧಿಯವರೆಗೆ ವೈದ್ಯರ ಸಲಹೆಯಿಲ್ಲದೆ ಸೇವಿಸುವ ನೋವುನಿವಾರಕಗಳೂ ಮೂತ್ರಪಿಂಡದ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ.
- ಮೂವತ್ತು ವರ್ಷದ ನಂತರ ವರ್ಷಕ್ಕೊಮ್ಮೆಯಾದರೂ ಮೂತ್ರಪಿಂಡಗಳ ಕಾರ್ಯಕ್ಷಮತೆಯ ಪರೀಕ್ಷೆಗಳನ್ನು ಮಾಡಿಸತಕ್ಕದ್ದು.
- ಮಧುಮೇಹಿಗಳು ಮತ್ತು ರಕ್ತದೊತ್ತಡದಿಂದ ಬಳಲುವವರು ವರ್ಷಕ್ಕೆ ಎರಡು ಬಾರಿ ಪರೀಕ್ಷೆಗಳನ್ನು ಮಾಡಿಸುವುದು ಉತ್ತಮ.
- ಅತಿಯಾದ ಧೂಮಪಾನ ಮತ್ತು ಮದ್ಯಪಾನ ಮೂತ್ರಪಿಂಡಗಳ ಆರೋಗ್ಯಕ್ಕೆ ಮಾರಕ.
- ಸಮತೋಲಿತ ಆಹಾರ ಮತ್ತು ನಿಯಮಿತ ವ್ಯಾಯಾಮ ಕೂಡ ಮೂತ್ರಪಿಂಡಗಳನ್ನು ಸುಸ್ಥಿತಿಯಲ್ಲಿಡಲು ನೆರವಾಗುತ್ತವೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

42) ಡೂಪ್ಲೆ ಬಗ್ಗೆ ಬರೆಯಿರಿ
ಉತ್ತರ:- ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗವರ್ನರ್ ಜನರಲ್ ಆಗಿ 1742ರಲ್ಲಿ ನೇಮಕಗೊಂಡನು. ಭಾರತದ ಮೇಲೆ ರಾಜಕೀಯ ಅಧಿಪತ್ಯ ಸ್ಥಾಪನೆಯ ಕನಸನ್ನು ಕಾಣುತ್ತಿದ್ದ ಡೂಪ್ಲೆ ಇಲ್ಲಿನ ದೇಶೀಯ ರಾಜರುಗಳ ಜೊತೆ ಒಪ್ಪಂದಗಳನ್ನು ಮಾಡಿಕೊಂಡಿದ್ದನು. ಡೂಪ್ಲೆ ಕಟ್ಟಿದ ದೇಶಿ ಸೇನೆಯಿಂದಲೇ ಹೈದರಾಲಿಯು ಸಹ ತರಬೇತಿ ಪಡೆದಿದ್ದನು. ಬ್ರಿಟಿಷರಿಗೆ ಡೂಪ್ಲೆಯು ತಮ್ಮ ಅಧಿಪತ್ಯ ಸ್ಥಾಪನೆಗೆ ಸವಾಲಾಗಿ ಪರಿಣಮಿಸಿದ. ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ಬ್ರಿಟಿಷರ ನಡುವಿನ ಸಂಘರ್ಷವು 1754ರವರೆಗೆ ನಡೆಯಿತು. ತದನಂತರದಲ್ಲಿ ಫ್ರಾನ್ಸಿನ ಸರ್ಕಾರವೇ ಶಾಂತಿಯನ್ನು ಬಯಸಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡಿತು.

43) ದಸ್ತಕ್ ಎಂದರೇನು?
ಉತ್ತರ: ಯಾವುದೇ ತೆರಿಗೆ ಇಲ್ಲದೇ ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಾಣೆ ಮಾಡಲು ಬೇಕಾದ ಪರವಾನಗಿ ಪತ್ರ

44) 1717ರಲ್ಲಿ ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪರವಾನಗಿ(ದಸ್ತಕ) ನೀಡಿದವರು ಯಾರು?
ಉತ್ತರ:- ಮೊಗಲ್ ಫಾರೂಕ್ ಷಿಯಾರ

45) ದಸ್ತಕ್ ಅನ್ನು ಯಾರು ದುರುಪಯೋಗಪಡಿಸಿಕೊಳ್ಳತೊಡಗಿದರು?
ಉತ್ತರ:- ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ನೌಕರರು ತಮ್ಮ ಖಾಸಗಿ ವ್ಯಾಪಾರ-ವ್ಯವಹಾರಕ್ಕಾಗಿ ದುರುಪಯೋಗ ಪಡಿಸಿಕೊಳ್ಳ ತೊಡಗಿದರು.

46) ದಸ್ತಕ್ ಅನ್ನು ದುರುಪಯೋಗಪಡಿಸಿಕೊಂಡ ಪರಿಣಾಮ ಯಾವ ಯುದ್ಧಗಳು ನಡೆದವು?
ಉತ್ತರ:- ಪ್ಲಾಸಿ ಮತ್ತು ಬಕ್ಸಾರ್ ಕದನಗಳು

47) ಪ್ಲಾಸಿ ಕದನಕ್ಕೆ ಕಾರಣಗಳೇನು?
ಉತ್ತರ:- ಪ್ಲಾಸಿ ಕದನಕ್ಕೆ ಕಾರಣಗಳು
1) ದಸ್ತಕ್‌ಗಳ ದುರುಪಯೋಗ : ಕಂಪನಿಯ ವ್ಯಾಪಾರಕ್ಕಾಗಿ ನೀಡಿದ 'ದಸ್ತಕ್'ಗಳನ್ನು ಬ್ರಿಟಿಷ್ ನೌಕರರು ದುರುಪಯೋಗ ಪಡಿಸಿಕೊಳ್ಳುವ ಮೂಲಕ ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿದ್ದದ್ದು ಸಿರಾಜನನ್ನು ಕೆರಳಿಸಿತು.
2. ಅನುಮತಿ ಇಲ್ಲದೇ ಕೋಟೆಯ ದುರಸ್ತಿ : ಬ್ರಿಟಿಷರು ಫ್ರೆಂಚರ ಭಯದಿಂದ ಕಲ್ಕತ್ತಾದ ಕೋಟೆಯನ್ನು ಬಲಪಡಿಸಿ, ಫಿರಂಗಿಗಳನ್ನು ಇಟ್ಟರು. ಅನುಮತಿ ಪಡೆಯದೇ ಕೋಟೆಯನ್ನು ದುರಸ್ತಿ ಮಾಡಿಸಿದ್ದರಿಂದ ಫಿರಂಗಿಗಳನ್ನು ತೆಗೆದು ಹಾಕಲು ಸಿರಾಜ್ ಸೂಚಿಸಿದನಾದರೂ ಅವರು ಪಾಲಿಸಲಿಲ್ಲ. ಇದರಿಂದ ಸಿರಾಜನು ಆಕ್ರೋಶಗೊಂಡನು.
3. ಕಪ್ಪುಕೋಣೆ ದುರಂತ : ಆಗ ಸಿರಾಜನು ಫೋರ್ಟ್ ವಿಲಿಯಂ ಕೋಟೆಯನ್ನು ಸುಲಭವಾಗಿ ಗೆದ್ದು ಕೆಲವರನ್ನು ಸೆರೆಹಿಡಿದನು. ಸಿರಾಜನು ಆಕ್ರಮಣದಲ್ಲಿ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು ಎಂಬುದಾಗಿತ್ತು. ಇದನ್ನು ಕಪ್ಪುಕೋಣೆಯ ದುರಂತ ಎಂದು ಕರೆಯಲಾಗಿದೆ. ಈ ಸುದ್ದಿ ಕೇಳಿ ರಾಬರ್ಟ್ ಕ್ಲೈವ್ ಉಗ್ರ ಕೋಪದಲ್ಲಿ ಬಲಿಷ್ಠ ಸೇನೆಯೊಂದಿಗೆ ಬಂಗಾಳಕ್ಕೆ ಬಂದನು.

48) ಪ್ಲಾಸಿ ಕದನದ ಪರಿಣಾಮಗಳೇನು?
ಉತ್ತರ:- ಪ್ಲಾಸಿ ಕದನದ ಪರಿಣಾಮಗಳು
1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

49) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ
ಉತ್ತರ:- ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್-ಉದ್-ದೌಲನು ಅಧಿಕಾರಕ್ಕೆ ಬಂದನು.
ಯುವ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು. ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ನೇಮಿಚಂದ್, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಧಿಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು.
ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23ರಂದು ಸಿರಾಜ್-ಉದ್-ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್-ಉದ್-ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು.

50) ಬಕ್ಸಾರ್ ಯುದ್ಧದ ಪರಿಣಾಮಗಳು ಯಾವುವು?
ಉತ್ತರ:- ಬಕ್ಸಾರ್ ಯುದ್ಧದ ಪರಿಣಾಮಗಳು:-
1. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
2. ಷಾ ಆಲಂ ವಾರ್ಷಿಕ ₹ 26 ಲಕ್ಷ ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು.
3. ಔದ್‌ನ ನವಾಬನಾದ ಷುಜಾ-ಉದ್-ದೌಲನು ಕಂಪನಿಗೆ ಯುದ್ಧ ನಷ್ಟದ ಪರಿಹಾರವಾಗಿ ₹ 50 ಲಕ್ಷ ಕೊಡಬೇಕಾಯಿತು.
4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು.

ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು.

1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.

51) 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?
ಉತ್ತರ:- ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು.

(ಮುಂದುವರಿಯುವುದು......)

II PUC CHEMISTRY

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Types of Solutions

Problems:- *(.......Contd)*

\5. Calculate the number of molecules of oxalic acid ($H_2C_2O_4 . 2H_2O$) in 100 mL of 0.2 N oxalic acid solution.

Soln:- *I.* ***Calculation of mass of the oxalic acid:***

Equivalent mass of the acid = Molar mass / Basicity

$$= \frac{2 \times 1 + 2 \times 12 + 4 \times 16 + 2 \times 18}{2} = \frac{126}{2}$$

$$= 63 \text{ g equiv}^{-1}$$

Volume of solution = 100 mL

$$= \frac{100}{1000} = 0.1 \text{ L}$$

$$\therefore \left(0.2 \text{ equiv.L}^{-1}\right) = \frac{\text{Mass of oxalic acid}}{\left(63 \text{ g equiv}^{-1}\right) \times (0.1\text{L})}$$

Mass of the oxalic acid

$$= \left(0.2 \text{ equiv L}^{-1}\right) \times \left(63 \text{ g equiv.}^{-1}\right) \times (0.1\text{L})$$

$$= 1.26 \text{ g}$$

Step II. ***Calculation of no. of molecules of oxalic acid***

Molar mass of oxalic acid = 126 g mol^{-1}

Now, 126 g of oxalic acid has molecules = (N_0) $= 6.022 \times 10^{23}$

1.26 g of oxalic acid has molecules

$$= \frac{6.022 \times 10^{23}}{126 \text{ g}} \; 1.26 \text{ g}$$

$$= 6.022 \times 10^{21}$$

6. Calculate the osmotic pressure of 8 % sucrose solution at 293 K. ($R = 8.314 JK^{-1} mol^{-1}$)

Soln:- The osmotic pressure is given by,

$$\pi = \frac{RTw}{MV}$$

Given that – w = 8g, M = 342 g;

($C_{12}H_{22}O_{11}$ – mol. mass is 342)

$$V = 100 \text{ cm}^3 \; (\because 8\% \text{ solution})$$

$$= 100 \times 10^{-6} \text{ m}^3, \; T = 298 \text{ K}$$

$$\therefore \pi = \frac{8.314 \times 293 \times 8}{342\left(100 \times 10^{-6}\right)}$$

$$= 569825 \text{ Pa}$$

$$= 569.825 \text{ kPa}$$

7. If 15g of urea is dissolved in 90g of water, find (a) the relative lowering of vapour pressure of the solution. (b) the vapour pressure of the solution if the vapour pressure of pure water at that temperature is 3000 Pa.

Ans:- According to Raoult's law, the relative lowering of vapour pressure is given by,

$$\frac{P^0 - P}{P^0} = \frac{n_2}{n_1 + n_2}$$

(a) Number of moles $= \dfrac{\text{mass}}{\text{molecular mass}}$

$\therefore n_2$ the number of moles of urea

$$= \frac{15}{60} = 0.25$$

and n_1 the number of moles of the solvent water is $= \dfrac{90}{18} = 5$

$$\therefore \frac{P^0 - P}{P^0} = \frac{0.25}{5 + 0.25} = 0.04762$$

$\therefore$ the relative lowering of the vapour pressure is 0.04762.

(b) $P^0 = 3000 \text{ Pa (given)}$

$$P^0 - P = 0.04762 \times P^0$$

$$= 0.04762 \times 3000$$

$$= 142.8 \text{ Pa}$$

$$\therefore P = P^0 - 142.8 = 3000 - 142.8$$

$$= 2857.14 \text{ Pa}$$

$\therefore$ Vapour pressure of the solution

$$= 2857.14 \text{ Pa}$$

8. Mention some of the differences between the ideal and non ideal solutions.

Ans:- Some of the differences between the ideal and non ideal solutions are –

Ideal solutions	*Non - ideal solutions*
1. The intermolecular interactions between the components of the solution are similar to those in the pure components.	The intermolecular interactions between the components of the solution are different from those found in the pure components.
2. There is no volume change during mixing. ($\Delta V = 0$)	Volume of the solution is either more or less than the total volume of the components mixed.
3. The enthalpy of mixing is zero ($\Delta H = 0$), that is no heat is evolved or absorbed when a solution is prepared.	The enthalpy of mixing is not zero ($\Delta H \neq 0$), that is heat is either evolved or absorbed during mixing of the compounds.
4. Obey's Raoult's law of solution.	Does not obey Raoult's law of solution. It shows either positive or negative deviation.

9. State the Van't Hoff's theory of dilute solutions

Ans:- The Van't Hoff's theory of dilute solutions states that – The osmotic pressure of a dilute solution is equal to the pressure which the solute would exert if it can be converted into a gas at the same temperature occupying the same volume as that of the solution.

10. What is meant by a semipermeable membrane? Give examples.

Ans:- A membrane which allows only the solvent molecules to pass through it but not he solute particles is called a semipermeable membrane.

Eg: Plant membranes, animal membranes like pig's bladder skin and artificial membranes like cupric ferrocyanide deposited on a porous wall etc.,

11. Components of a binary mixture of two liquids A and B were being separated by distillation. After some time, separation of components stopped and composition of vapour phase became same as that of liquid phase. Both the components started coming in the distillate. Explain why this happened.

Ans:- When the composition of a binary mixture of two liquids A and B in the liquid state and in the vapour phase is the same, the mixture is known as azeotropic mixture. In any azeotropic mixture, the components cannot be separated any more.

12. Explain why on addition of 1 mole of NaCl to 1 litre of water, the boiling point of water increases, while addition of 1 mole of methyl alcohol to one litre of water decreases its boiling point. *(Contd......)*

‘ಮಿಸ್ಟರ್ ಡಿ.ಕೆ. ಶಿವಕುಮಾರ್ ನಿಮ್ಮ ಆಟ ನಡೆಯಲ್ಲ’ ಎಂಬ ಎಚ್‌ಡಿಡಿ ಎಚ್ಚರಿಕೆಗೆ ಡಿಕೆಶಿ ತಿರುಗೇಟು

‘ಬೆದರಿಕೆಗೆ ಹೆದರಲ್ಲ, ಗೌಡರಿಗೂ ಗೊತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವೇಗೌಡರು ನನಗೆ ಎಚ್ಚರಿಕೆ ಕೊಟ್ಟಿದ್ದಾರೆ. ಅವರು ದೊಡ್ಡವರು. ಗೌರವದಿಂದ ಅವರ ಮಾತನ್ನು ಸ್ವೀಕರಿಸುತ್ತೇನೆ. ಆದರೆ, ಈ ಬೆದರಿಕೆಗೆ ಡಿ.ಕೆ. ಶಿವಕುಮಾರ್ ಹೆದರುವುದಿಲ್ಲ ಎಂಬುದು ಅವರಿಗೂ ಗೊತ್ತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

ತಮ್ಮ ಪಕ್ಷದ ಪ್ರಮುಖರ ಜೊತೆ ಭಾನುವಾರ ಸಭೆ ನಡೆಸಿದ ಬಳಿಕ ಮಾತನಾಡಿದ್ದ ದೇವೇಗೌಡರು, ‘ಮಿಸ್ಟರ್ ಡಿ.ಕೆ. ಶಿವಕುಮಾರ್ ನಿಮ್ಮ ಆಟ ನಡೆಯಲ್ಲ’ ಎಂದು ಎಚ್ಚರಿಕೆ ಕೊಟ್ಟಿದ್ದರು.

ಕೆಪಿಸಿಸಿ ಕಚೇರಿಯಲ್ಲಿ ಚನ್ನಪಟ್ಟಣ ಕ್ಷೇತ್ರದ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರನ್ನು ಕಾಂಗ್ರೆಸ್‌ಗೆ ಸೋಮವಾರ ಬರಮಾಡಿಕೊಂಡ ಬಳಿಕ ಮಾತನಾಡಿದ ಅವರು, ‘ಪೂಜನೀಯ ದೇವೇಗೌಡರೇ, ನಿಮ್ಮ ಸುಪುತ್ರ ಪದೇ ಪದೇ ಜೆಡಿಎಸ್ ವಿಸರ್ಜನೆ ಮಾಡುತ್ತೇನೆ. ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದು ಹೇಳಿದರೆ ನಿಮ್ಮ ಪಕ್ಷದ ನಾಯಕರು, ಕಾರ್ಯಕರ್ತರು ಎಲ್ಲಿ ಹೋಗಬೇಕು’ ಎಂದು ಪ್ರಶ್ನಿಸಿದರು.

‘ದೇವೇಗೌಡರೇ, ನೀವು ಮತ್ತು ನಿಮ್ಮ ಪಕ್ಷದ ನಾಯಕರು ಅನೇಕ ಬಾರಿ ಬಿಜೆಪಿ ಜೊತೆ ಕೈ ಜೋಡಿಸುವುದಿಲ್ಲ ಎಂದು ಹೇಳಿದ್ದಿರಿ. ಆದರೆ, ಈಗ ಕೈ ಜೋಡಿಸಿದ್ದೀರಿ. ನಿಮ್ಮ ಸುಪುತ್ರ ದಿನ ಬೆಳಗಾದರೆ ಸಿದ್ಧಾಂತ ಬದಲಿಸುತ್ತಾರೆ. ಯಾರ ಜೊತೆ ಬೇಕಾದರೂ ಸಂಬಂಧ ಬೆಳೆಸುತ್ತಾರೆ. ಆದರೆ, ಸಿದ್ಧಾಂತ ನಂಬಿರುವ ಕಾರ್ಯಕರ್ತರು ಏನಾಗಬೇಕು’ ಎಂದೂ ಕೇಳಿದರು.

‘ಹಳೆಯದನ್ನು ಕೆದಕಿ ಉತ್ತರ ಕೊಡುವ ಅಗತ್ಯವಿಲ್ಲ. ನೀವು ಎಷ್ಟು ಎಚ್ಚರಿಕೆ ಕೊಟ್ಟರೂ ನಿಮ್ಮ ಸುಪುತ್ರರ ಕ್ಷೇತ್ರದಲ್ಲಿ ನಿಮ್ಮನ್ನು ಸಾಕಿ ಬೆಳೆಸಿದ ಜನ ಇಂದು ಕಾಂಗ್ರೆಸ್ ಪಕ್ಷಕ್ಕೆ ಸೇರಲು ಬಂದಿದ್ದಾರೆ. ಈ ಹಿಂದೆ ನೀವು ಕೂಡ ಕಾಂಗ್ರೆಸ್ಸಿನ ಅನೇಕ ನಾಯಕರನ್ನು ನಿಮ್ಮ ಪಕ್ಷಕ್ಕೆ ಸೇರಿಸಿಕೊಂಡು ಚೆಸ್, ಫುಟ್ಬಾಲ್ ಗೇಮ್ ಆಡಿಲ್ಲವೇ? ನೀವು ಯಾರನ್ನು ಬೇಕಾದರೂ ಕಟ್ಟಿ ಹಾಕಿಕೊಳ್ಳಿ, ಮನೆಯೊಳಗೇ ಕೂಡಿ ಹಾಕಿಕೊಳ್ಳಿ. ನಾವು ಬೇಡ ಎನ್ನುವುದಿಲ್ಲ. ಈ ಹಿಂದೆ ನಮ್ಮ ಪಕ್ಷದಿಂದ ವಿಧಾನ ಪರಿಷತ್ ಸದಸ್ಯರಾಗಿದ್ದ ಸಿ.ಎಂ. ಇಬ್ರಾಹಿಂ ಅವರನ್ನು ಆ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ ನಿಮ್ಮ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ನನಗೇ ಮೈತ್ರಿ ವಿಚಾರ ತಿಳಿಸಲಿಲ್ಲವೆಂದು ಅವರು ಹೇಳಿದ್ದಾರೆ. ನಿಮ್ಮ ಪಕ್ಷದ ಬಹುತೇಕ ಮುಖಂಡರು, ಕಾರ್ಯಕರ್ತರು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅನೇಕರು ಕಾಂಗ್ರೆಸ್ ಕಡೆ ನೋಡುತ್ತಿದ್ದಾರೆ’ ಎಂದರು.

ಜೆಡಿಎಸ್ ಮುಖಂಡ, ಚನ್ನಪಟ್ಟಣ ಮಾಜಿ ಶಾಸಕ ಎಂ.ಸಿ. ಅಶ್ವಥ್ ಮತ್ತು ಅವರ ಬೆಂಬಲಿಗರು ಸೇರಿದಂತೆ ಚನ್ನಪಟ್ಟಣ ಹಾಗೂ ರಾಮನಗರದ ಜೆಡಿಎಸ್‌ನ ಅನೇಕ ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆಯಾದರು.



ಚನ್ನಪಟ್ಟಣ ಮಾಜಿ ಶಾಸಕ ಎಂ.ಸಿ. ಅಶ್ವಥ್ ಮತ್ತು ಅವರ ಬೆಂಬಲಿಗರು ಸೇರಿದಂತೆ ಚನ್ನಪಟ್ಟಣ ಹಾಗೂ ರಾಮನಗರದ ಜೆಡಿಎಸ್‌ನ ಅನೇಕ ಮುಖಂಡರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಸೋಮವಾರ ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು. ಸಚಿವರಾದ ಜಮೀರ್ ಅಹಮದ್ ಖಾನ್, ರಾಮಲಿಂಗಾರೆಡ್ಡಿ, ಸಂಸದ ಡಿ.ಕೆ. ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್ ಚಂದ್ರಪ್ಪ ಇದ್ದರು

ಪ್ಯಾಂಟ್ ಒಳಗೆ ಆರೆಸ್ಸೆಸ್ ಚಡ್ಡಿ ಹಾಕಿದ್ದು ಗೊತ್ತಿರಲಿಲ್ಲ: ಜಮೀರ್

‘ಕುಮಾರಸ್ವಾಮಿ ಅವರ ಎಲ್ಲ ವಿದ್ಯೆ ನೋಡಿದ್ದೇನೆ. ಆದರೆ, ಪ್ಯಾಂಟ್ ಒಳಗೆ ಆರೆಸ್ಸೆಸ್ ಚಡ್ಡಿ ಹಾಕಿದ್ದು ಗೊತ್ತಿರಲಿಲ್ಲ’ ಎಂದು ಸಚಿವ ಜಮೀರ್ ಅಹಮದ್ ಖಾನ್ ವ್ಯಂಗ್ಯವಾಡಿದರು.

‘ದೇವೇಗೌಡರು ಈಗಲೂ ಸೆಕ್ಯುಲರ್. ಆಗಲೂ ಸೆಕ್ಯುಲರ್. ಅವರಿಂದ ನಮ್ಮ ಸಮಾಜಕ್ಕೆ ನ್ಯಾಯ ಸಿಕ್ಕಿದೆ. ಅವರು ಎರಡನೇ ಹಂತದ ನಾಯಕರನ್ನೂ ಬೆಳೆಸಿದ್ದಾರೆ. ಆದರೆ, ಕುಮಾರಸ್ವಾಮಿ ಸೆಕ್ಯುಲರ್ ಅಲ್ಲ. ಮುಸ್ಲಿಂ ಸಮುದಾಯ ಮತ ಕೊಡದಿದ್ದರೆ ಚನ್ನಪಟ್ಟಣದಲ್ಲಿ ಫಲಿತಾಂಶ ಏನಾಗುತ್ತಿತ್ತು ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು’ ಎಂದರು.

‘ಬಿಜೆಪಿ ಜತೆ ಜೆಡಿಎಸ್ ಮೈತ್ರಿಯಿಂದ ಬೇಸರಗೊಂಡು ರಾಮನಗರ, ಚನ್ನಪಟ್ಟಣ, ಹಾಸನ, ಮಂಡ್ಯ ಸಹಿತ ವಿವಿಧ ಜಿಲ್ಲೆಗಳ ಅಲ್ಪಸಂಖ್ಯಾತರು ಸೇರಿ ಹಲವರು ನಮ್ಮ ಸಂಪರ್ಕದಲ್ಲಿದ್ದಾರೆ. ಅರಮನೆ ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಿ ಅವರೆಲ್ಲರನ್ನೂ ಕಾಂಗ್ರೆಸ್‌ಗೆ ಸೇರಿಸಿಕೊಳ್ಳಲಾಗುವುದು’ ಎಂದು ಹೇಳಿದರು.

ಹೇಗೆ ಸಮರ್ಥಿಸಿಕೊಳ್ಳುತ್ತಾರೆ: ‘ಜೆಡಿಎಸ್ -ಬಿಜೆಪಿ ಸರ್ಕಾರದಲ್ಲಿ ಜಮೀರ್ ಅಹಮದ್ ಸಚಿವರಾಗಿರಲಿಲ್ಲವೇ?’ ಎಂದು ಬಿ.ಎಂ. ಫಾರೂಕ್ ಹೇಳಿಕೆಗೆ, ‘ಆಗ ಮೈತ್ರಿ ಆಗಿರಲಿಲ್ಲ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದಡಿ ಸರ್ಕಾರ ರಚಿಸಿದ್ದೆವು. ಮೈತ್ರಿ ಆಗಿದ್ದರೆ ಆಗಲೇ ಪಕ್ಷ ಬಿಡುತ್ತಿದ್ದೆ. ಮುಸ್ಲಿಂ ಮೀಸಲಾತಿ ರದ್ದು, ಹಿಜಾಬ್, ಆಜಾನ್, ಹಲಾಲ್ ವಿಚಾರ ತೆಗೆದು ಮುಸ್ಲಿಂ ಸಮುದಾಯದ ಬಗ್ಗೆ ಬಿಜೆಪಿ ಹೇಗೆ ನಡೆದುಕೊಂಡಿತು ಎನ್ನುವುದು ಗೊತ್ತಿದೆ. ಇದನ್ನು ಫಾರೂಕ್ ಹೇಗೆ ಸಮರ್ಥಿಸಿಕೊಳ್ಳುತ್ತಾರೆ’ ಎಂದೂ ಜಮೀರ್ ಪ್ರಶ್ನಿಸಿದರು.

ಬಡ ರೈತರ ಕೆಲಸ ಆಗುತ್ತಿಲ್ಲ: ಕಾಂಗ್ರೆಸ್ ಶಾಸಕ ರಾಜು ಕಾಗೆ



ಕಾಗವಾಡ (ಬೆಳಗಾವಿ ಜಿಲ್ಲೆ): ‘ರಾಜ್ಯ ಸರ್ಕಾರದಲ್ಲಿ ಬಡ ರೈತರ ಕೆಲಸಗಳು ಸರಿಯಾಗಿ ಆಗುತ್ತಿಲ್ಲ’ ಎಂದು ಕಾಗವಾಡದ ಕಾಂಗ್ರೆಸ್ ಶಾಸಕ ರಾಜು ಕಾಗೆ ಹೇಳಿದರು.

ಉಗಾರ ಪಟ್ಟಣದ ತಮ್ಮ ಕಚೇರಿಯಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ರೈತರಿಗೆ ಸರಿಯಾಗಿ ವಿದ್ಯುತ್ ನೀಡುತ್ತಿಲ್ಲ. ಮಳೆಗಾಲದಲ್ಲೇ ಹೀಗಾದರೆ ಬೇಸಿಗೆಯಲ್ಲಿ ವಿದ್ಯುತ್ ಕೊಡುವುದನ್ನೇ ನಿಲ್ಲಿಸಿಬಿಡುತ್ತಾರೆಯೇ? ಈ ಬಗ್ಗೆ ಮುಖ್ಯಮಂತ್ರಿ ಗಮನಕ್ಕೆ ತಂದು ಚರ್ಚೆ ಮಾಡಿದರೂ ಪ್ರಯೋಜನ ಆಗಿಲ್ಲ’ ಎಂದರು.

‘ರೈತ ತನ್ನ ಜಮೀನಿನ ನೀರಿನ ಮೂಲಕ್ಕೆ ವಿದ್ಯುತ್ ಸಂಪರ್ಕ ಪಡೆಯಬೇಕಾದರೆ ಹೆಸ್ಕಾಂ 10 ಕಂಬ ಹಾಗೂ ಪರಿವರ್ತಕ ಜೋಡಣೆಯ ಅಂದಾಜು ವೆಚ್ಚ ₹4–5 ಲಕ್ಷ ಪಾವತಿಸಲು ಹೇಳುತ್ತಿದೆ. ಇದು ನನ್ನ ಹಾಗೂ ನಮ್ಮ ಸರ್ಕಾರದ ವೈಫಲ್ಯ’ ಎಂದು ಹೇಳಿದರು.

ಸ್ವಪಕ್ಷೀಯರ ವಿರುದ್ಧ ಹರಿಹಾಯ್ದ ಕಾಂಗ್ರೆಸ್ ಶಾಸಕ ಕೊತ್ತೂರು




ಕೋಲಾರ: ‘ತಲೆಕೆಟ್ಟ ಕೆಲವರು ಏನೇನೋ ಮಾತನಾಡುತ್ತಿದ್ದಾರೆ. ಸುಮ್ಮನೇ ತೀಟೆ ಮಾಡುವುದು, ಪಿನ್ ಚುಚ್ಚುವ ಕೆಲಸವೇ ಹೆಚ್ಚಾಗಿದೆ. ಪಕ್ಷದಲ್ಲಿ ಅಂಥವರನ್ನು ಸ್ವಲ್ಪ ದೂರ ಇಡಬೇಕು’ ಎಂದು ಕೋಲಾರ ಶಾಸಕ ಕೊತ್ತೂರು ಮಂಜುನಾಥ್, ಸ್ವಪಕ್ಷದ ಶಾಸಕರ ವಿರುದ್ಧವೇ ಹರಿಹಾಯ್ದಿದ್ದಾರೆ.

ನಗರದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿ, ‘ಕೆಲವರು ಜಾತಿ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ತಮ್ಮ ಜಾತಿಯವರಿಗೆ ಮುಖ್ಯಮಂತ್ರಿ ಹುದ್ದೆ ಬೇಕು ಎನ್ನುತ್ತಿದ್ದಾರೆ. ಆ ಜಾತಿಯವರು ಅದೇ ಜಾತಿಯ ಒಬ್ಬ ಡಾಕ್ಟರ್, ನರ್ಸ್, ಪೊಲೀಸ್ ಅಧಿಕಾರಿ, ಮತ್ತೊಂದು ಜಾತಿಯವರು ತಮ್ಮದೇ ಜಾತಿಯ ಅಧಿಕಾರಿಗಳನ್ನು ನೇಮಿಸಿಕೊಳ್ಳಲಿ’ ಎಂದು ಕೊತ್ತೂರು ಮಂಜುನಾಥ್ ಅವರು ಹೇಳಿದರು.

‘ನಾನು ನಿನ್ನೆ ಮುಖ್ಯಮಂತ್ರಿ ಬಳಿ ಹೋಗಿದ್ದೆ. ಬೆಂಗಳೂರಿನಲ್ಲಿ ಅಡ್ಡಾಡಬೇಡಿ, ಕ್ಷೇತ್ರಕ್ಕೆ ಹೋಗಿ ಕೆಲಸ ಮಾಡಿ ಎಂದು ಸೂಚಿಸಿದರು. ಅವರು ಸರಿಯಾಗಿಯೇ ಹೇಳಿದ್ದಾರೆ. ಅದನ್ನು ಬಿಟ್ಟು ಮಂತ್ರಿ ಬೇಕು, ಮುಖ್ಯಮಂತ್ರಿ ಹುದ್ದೆ ಬೇಕು ಎಂದು ಕೇಳುತ್ತಿದ್ದರೆ ಪ್ರಯೋಜನವಿಲ್ಲ. ನನಗೂ ಹಲವಾರು ಆಸೆಗಳಿವೆ. ಗೊತ್ತಿದ್ದರೆ ತೆಂಗಿನಮರ ಹತ್ತಬೇಕು. ಗೊತ್ತಿಲ್ಲದೇ ಹತ್ತಲು ಹೋದರೆ ಬಿದ್ದು ಕೈಕಾಲು ಮುರಿದುಕೊಳ್ಳುತ್ತೇವೆ’ ಎಂದರು.

ಸಂಕ್ರಾಂತಿ ವೇಳೆಗೆ ಸರ್ಕಾರ ಪತನ: ಸಿ.ಪಿ. ಯೋಗೇಶ್ವರ್

ಪ್ರಜಾವಾಣಿ ವಾರ್ತೆ



ಚನ್ನಪಟ್ಟಣ (ರಾಮನಗರ): ‘ಸಂಕ್ರಾಂತಿ ವೇಳೆಗೆ, ಸೂರ್ಯ ಪಥ ಬದಲಿಸುವಂತೆ ರಾಜ್ಯ ರಾಜಕೀಯದ ಪಥವು ಬದಲಾಗಲಿದೆ. ಕಾಂಗ್ರೆಸ್ ಶಾಸಕರೇ ಸರ್ಕಾರದ ವಿರುದ್ಧ ತಿರುಗಿ ಬೀಳಲಿದ್ದಾರೆ, ಸರ್ಕಾರ ಪತನವಾಗಲಿದೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸದ್ಯದ ಬೆಳವಣಿಗೆ ಮತ್ತು ಕಾಂಗ್ರೆಸ್ ನಾಯಕರ ಬಗ್ಗೆ ಆ ಪಕ್ಷದ ಶಾಸಕರೇ ಅಸಮಾಧಾನ ತೋಡಿಕೊಳ್ಳುತ್ತಿದ್ದಾರೆ. ಕೆಲವರು ನನ್ನೊಂದಿಗೆ ವೈಯಕ್ತಿಕವಾಗಿಯೂ ಮಾತನಾಡಿದ್ದಾರೆ’ ಎಂದರು.

‘ಶಾಸಕರು ಡಮ್ಮಿಗಳಾಗಿದ್ದು, ಅನುದಾನವಿಲ್ಲದೆ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಎಲ್ಲವೂ ಗ್ಯಾರಂಟಿ ಯೋಜನೆಗಳಿಗೆ ಖರ್ಚಾಗಿದೆ, ಅನುದಾನವಿಲ್ಲ ಎಂದು ಸಚಿವರು ಹೇಳುತ್ತಿದ್ದಾರೆ. ಕಾಂಗ್ರೆಸ್ ಶಾಸಕರು ತಮ್ಮ ಭವಿಷ್ಯದ ಬಗ್ಗೆ ಆತಂಕದಲ್ಲಿದ್ದಾರೆ’ ಎಂದರು.

> **ಸಂಕ್ರಾಂತಿ ವೇಳೆಗೆ ಕಾಂಗ್ರೆಸ್ ಸರ್ಕಾರ ಬೀಳುತ್ತದೆ ಎಂದು ಯೋಗೇಶ್ವರ್ ಹೇಳಿರುವುದು ಸರಿಯಾಗಿದೆ. ಮುಂದೇನು ಎಂದು ಎಚ್.ಡಿ.ಕುಮಾರಸ್ವಾಮಿ ಅವರನ್ನು ಕೇಳಿ**
> **ಆರ್.ಅಶೋಕ,** ಬಿಜೆಪಿ ಶಾಸಕ

‘ಡಿ.ಕೆ.ಶಿವಕುಮಾರ್ ಅವರಂತೆ ನಾವು ಯಾವುದೇ ಆಪರೇಷನ್ ಮಾಡುವುದಿಲ್ಲ. ನಮ್ಮ ಸಂಪರ್ಕದಲ್ಲಿ ಯಾರೂ ಇಲ್ಲ. ಸದ್ಯ ನನಗಿರುವ ಮಾಹಿತಿ ಹಂಚಿಕೊಳ್ಳುತ್ತಿದ್ದೇನೆ ಅಷ್ಟೆ’ ಎಂದು ಯೋಗೇಶ್ವರ್ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಲೋಕಸಭಾ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿ ಅನಿವಾರ್ಯವಾಗಿದೆ. ಡಿ.ಕೆ. ಶಿವಕುಮಾರ್ ಆಪರೇಷನ್ ಹಸ್ತ ಆರಂಭಿಸಿದ್ದಾರೆ. ಅವರನ್ನು ಎದುರಿಸಲು ಮೈತ್ರಿ ಮಾಡಿಕೊಳ್ಳಲಾಗಿದೆ. ಇದರಿಂದ ಎರಡೂ ಪಕ್ಷಗಳಿಗೂ ಅನುಕೂಲವಾಗಲಿದೆ’ ಎಂದು ಹೇಳಿದರು.

ಸಾವಿರ ಮದ್ಯದಂಗಡಿಗೆ ಅನುಮತಿ ಯಾವ ಪುರುಷಾರ್ಥಕ್ಕೆ?: ಪಾಟೀಲ



ಬಿ.ಆರ್. ಪಾಟೀಲ

ಕಲಬುರಗಿ: ‘ಗೃಹಲಕ್ಷ್ಮಿ, ಶಕ್ತಿ, ಉಚಿತ ಪಡಿತರ ಮುಂತಾದ ಗ್ಯಾರಂಟಿ ಯೋಜನೆಗಳ ಮೂಲಕ ಜನಸಾಮಾನ್ಯರ ಬದುಕಿಗೆ ಭದ್ರ ಬುನಾದಿ ಹಾಕಿದ ರಾಜ್ಯ ಸರ್ಕಾರ, ಸಾವಿರ ಮದ್ಯದಂಗಡಿಗಳನ್ನು ತೆರೆಯಲು ಮುಂದಾಗಿರುವುದು ಜನರಿಗೆ ಒಂದು ಕೈಯಲ್ಲಿ ಕೊಟ್ಟು ಮತ್ತೊಂದು ಕೈಯಲ್ಲಿ ಕಿತ್ತುಕೊಳ್ಳುವ ಕೆಲಸ ಮಾಡಿದಂತಾಗಲಿದೆ’ ಎಂದು ಆಳಂದದ ಕಾಂಗ್ರೆಸ್ ಶಾಸಕ ಬಿ.ಆರ್.ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ನಶೆ ಮುಕ್ತ ಭಾರತ ಜಾಗೃತಿ ಆಂದೋಲನ ಸಮಿತಿ ಸೋಮವಾರ ಹಮ್ಮಿಕೊಂಡಿದ್ದ ‘ನಶಾ ನಿಷೇಧಾಗ್ರಹ ಸಮಾವೇಶ’ದಲ್ಲಿ ಅವರು ಮಾತನಾಡಿದರು.

‘ಜನರು ನೀರು, ರಸ್ತೆ, ಉತ್ತಮ ಶಿಕ್ಷಣ, ಆಸ್ಪತ್ರೆ ಕೇಳುತ್ತಿದ್ದಾರೆ. ಯಾರೂ ಮದ್ಯ ಕೇಳಿಲ್ಲ. ಹೋದ ಕಡೆಯಲ್ಲೆಲ್ಲ ನಮಗೆ ಅಕ್ಕಿ, ಬೇಳೆ ಯಾವುದೂ ಬೇಡ, ದುಡಿದು ತಿನ್ನುತ್ತೇವೆ. ಮದ್ಯ ಮಾರಾಟ ಬಂದ್ ಮಾಡಿ ಎಂದು ಜನ ಬೇಡಿಕೆ ಇಡುತ್ತಿದ್ದಾರೆ. ಸರ್ಕಾರ ಒಂದು ಸಾವಿರ ಮದ್ಯದಂಗಡಿ ತೆರೆಯುವುದಾಗಿ ಹೇಳುತ್ತಿರುವುದು ಯಾವ ಪುರುಷಾರ್ಥಕ್ಕೆ’ ಎಂದು ಹರಿಹಾಯ್ದ ಅವರು, ‘ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ’ ಎಂದು ಹೇಳಿದರು.

ನನ್ನಲ್ಲಿ ದಾಖಲೆಗಳಿವೆ: ಶಾಮನೂರು

ಪ್ರಜಾವಾಣಿ ವಾರ್ತೆ



ಶಾಮನೂರು ಶಿವಶಂಕರಪ್ಪ

ದಾವಣಗೆರೆ: ‘ಯಾವ ಸಮುದಾಯದ ಅಧಿಕಾರಿಗಳನ್ನು ಎಲ್ಲೆಲ್ಲಿ ನಿಯೋಜಿಸಿದ್ದಾರೆ ಎಂಬ ಬಗ್ಗೆ ನನ್ನಲ್ಲಿ ದಾಖಲೆಗಳಿವೆ. ಜಿಲ್ಲಾಧಿಕಾರಿಯಾಗಿ ಒಬ್ಬರನ್ನೂ ನೇಮಿಸಿಲ್ಲ. ಈ ಕುರಿತು ಮುಖ್ಯಮಂತ್ರಿ ಜೊತೆ ಚರ್ಚಿಸಲಾಗುವುದು ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

‘ವೀರಶೈವ ಲಿಂಗಾಯತ ಸಮುದಾಯದ ಏಳು ಜನರಿಗೆ ಸಚಿವ ಸ್ಥಾನ ನೀಡಿದ್ದಾರೆ. ಅದರ ಬಗ್ಗೆ ನಮ್ಮ ತಕರಾರು ಇಲ್ಲ. ಸಮುದಾಯದ ಐಎಎಸ್, ಐಪಿಎಸ್ ಹಾಗೂ ಕೆಎಎಸ್ ಅಧಿಕಾರಿಗಳಿಗೆ ಅನ್ಯಾಯ ಆಗಿರುವುದು ಸತ್ಯ. ಅವರಿಗೆ ಪ್ರಮುಖ ಹುದ್ದೆಗಳನ್ನು (ಕೀ ಪೋಸ್ಟ್) ನೀಡಿಲ್ಲ. ಅದಕ್ಕೆಂದೇ ಈ ವಿಷಯದ ಬಗ್ಗೆ ರಾಜ್ಯದಾದ್ಯಂತ ಚರ್ಚೆ ಆಗುತ್ತಿದೆ’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ನಾನು ಎಚ್.ವಿಶ್ವನಾಥ್ ತರಹ ಯಾರಿಗೋ ಬೆಣ್ಣೆ ಹಚ್ಚಿ ಎಂಎಲ್‌ಸಿ ಆಗಿಲ್ಲ. 7 ಸಲ ಜನರಿಂದ ಆಯ್ಕೆಯಾಗಿದ್ದೇನೆ. ನಾನು ಮಾತನಾಡಿದ್ದು, ವೀರಶೈವ ಲಿಂಗಾಯತ ಸಮುದಾಯದ ಅಧಿಕಾರಿಗಳ ಬಗ್ಗೆ. ಸಚಿವ ಸ್ಥಾನದ ಬಗ್ಗೆ ಹೇಳಿಕೆ ನೀಡಿರುವ ಅವನನ್ನು ಹುಚ್ಚಾಸ್ಪತ್ರೆಗೆ ಕಳುಹಿಸಿ’ ಎಂದು ವಾಗ್ದಾಳಿ ನಡೆಸಿದರು.

> **ನಮ್ಮ ಸರ್ಕಾರದ ಬಗ್ಗೆ ಹೊಟ್ಟೆಕಿಚ್ಚು ಇರುವವರು ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸಿದ್ದಾರೆ**
> **ಎಂ.ಲಕ್ಷ್ಮಣ,** ಕೆಪಿಸಿಸಿ ವಕ್ತಾರ

ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ವೀರಶೈವ ಲಿಂಗಾಯತ ಅಧಿಕಾರಿಗಳಿಗೆ ಆಯಕಟ್ಟಿನ ಜಾಗ ನೀಡದ್ದರಿಂದ, ಅವರ ಪಾಡು ನಾಯಿ ಪಾಡಾಗಿದೆ ಎಂದು ಶಾಮನೂರು ಶಿವಶಂಕರಪ್ಪ ಕಳೆದ ವಾರ ಬೆಂಗಳೂರಿನಲ್ಲಿ ನಡೆದಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಟೀಕಿಸಿದ್ದರು.

ಬಿಜೆಪಿ ಸದಸ್ಯ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣ
‘ಬಿ’ ರಿಪೋರ್ಟ್ ತಿರಸ್ಕರಿಸಿದ ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಪೊಲೀಸರು ಸಲ್ಲಿಸಿದ್ದ ‘ಬಿ’ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಯೋಗೀಶ್‌ಗೌಡರ ತಮ್ಮ ಗುರುನಾಥಗೌಡ ಗೌಡರ್ ಸಲ್ಲಿಸಿದ್ದ ದೂರಿನ ಅನ್ವಯ ತನಿಖೆ ನಡೆಸಿದ್ದ ಧಾರವಾಡ ಪೊಲೀಸರು 2019ರಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ‘ಬಿ’ ರಿಪೋರ್ಟ್ ಸಲ್ಲಿಸಿದ್ದರು. ನಂತರ ಈ ಪ್ರಕರಣವನ್ನು ಧಾರವಾಡ ಜಿಲ್ಲೆಯ 4ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಬೆಂಗಳೂರಿನಲ್ಲಿರುವ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ‘ಕ್ಕೆ ವರ್ಗಾಯಿಸಿತ್ತು. ‘ಬಿ‘ ರಿಪೋರ್ಟ್ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶೆ ಜೆ.ಪ್ರೀತ್ ವಿಚಾರಣೆ ನಡೆಸಿದ್ದು, ‘ಬಿ ರಿಪೋರ್ಟ್ ತೃಪ್ತಿಕರವಾಗಿಲ್ಲ. ಧಾರವಾಡ ಉಪನಗರ ಠಾಣೆಯ ಪೊಲೀಸರು ಪ್ರಕರಣವನ್ನು ಶೀಘ್ರವಾಗಿ ತನಿಖೆ ನಡೆಸಬೇಕು" ಎಂದು ಆದೇಶಿಸಿದ್ದಾರೆ.

ಪ್ರಕರಣವೇನು?: ಯೋಗೀಶ್‌ಗೌಡ ಗೌಡರ್ ಕೊಲೆ 2016ರ ಜೂನ್‌ನಲ್ಲಿ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 2020ರ ನವೆಂಬರ್‌ನಲ್ಲಿ ವಿನಯ ಕುಲಕರ್ಣಿ ಅವರನ್ನು ಬಂಧಿಸಿ, ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಒಂಬತ್ತು ತಿಂಗಳ ಕಾಲ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿತ್ತು.

‘ಗ್ರಾಮ ನ್ಯಾಯಾಲಯ ವ್ಯವಸ್ಥೆ ಜಾರಿಗೆ ಚಿಂತನೆ’

ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮ ನ್ಯಾಯಾಲಯ ವ್ಯವಸ್ಥೆ ಜಾರಿ ಮಾಡಲು ಚಿಂತನೆ ನಡೆಸಿದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಮ್ಮಿಕೊಂಡಿದ್ದ 2023 ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಮತ್ತು ಸ್ವಚ್ಛ ಸರ್ವೇಕ್ಷಣಾ ಗ್ರಾಮೀಣ ರಾಜ್ಯ ಮಟ್ಟದ ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಗ್ರಾಮಗಳ ವ್ಯಾಜ್ಯಗಳು ಗ್ರಾಮಗಳಲ್ಲೇ ಬಗೆಹರಿಯಬೇಕು ಎನ್ನುವ ಮಹತ್ವಾಕಾಂಕ್ಷೆಯಿಂದ ಈ ಬಗ್ಗೆ ಗಂಭೀರ ಚಿಂತನೆ ನಡೆದಿದೆ. ಮಹಾತ್ಮಗಾಂಧಿ ಮತ್ತು ರಾಜೀವ್‌ಗಾಂಧಿ ಅವರ ಗ್ರಾಮ ಸ್ವರಾಜ್ಯ ಮತ್ತು ಅಧಿಕಾರ ವಿಕೇಂದ್ರೀಕರಣ ಆಶಯದಂತೆ ಗ್ರಾಮ ನ್ಯಾಯಾಲಯಗಳ ಸ್ಥಾಪನೆಯಾದರೆ ಗ್ರಾಮಸ್ಥರಿಗೆ ಅನುಕೂಲ ಆಗಲಿದೆ’ ಎಂದರು.

‘ಖಾದಿ- ಗ್ರಾಮೋದ್ಯೋಗ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಜೊತೆಗೆ, ಗ್ರಾಮೋದ್ಯೋಗ ಉತ್ಪನ್ನಗಳಿಗೆ ಮಾರುಕಟ್ಟೆ ವಿಸ್ತರಿಸಲು ಕೂಡಾ ಕ್ರಮ ಕೈಗೊಳ್ಳಲಾಗುವುದು’ ಎಂದು ಅವರು ಭರವಸೆ ನೀಡಿದರು.

‘ಜನತಂತ್ರದ ವಿಕೇಂದ್ರೀಕರಣಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತಂದವರು ರಾಜೀವ್‌ಗಾಂಧಿ. ಅದನ್ನು ಜಾರಿಗೆ ತಂದವರು ಪಿ.ವಿ. ನರಸಿಂಹರಾವ್. ಸ್ಥಳೀಯ ಸಂಸ್ಥೆ ಮತ್ತು ಪಂಚಾಯಿತಿಗಳಲ್ಲಿ ಶೇ 50 ಮೀಸಲಾತಿ ಜಾರಿಯಾಗಲು ಕಾರಣ ರಾಜೀವ್‌ಗಾಂಧಿ ಮತ್ತು ಕಾಂಗ್ರೆಸ್. ಹಿಂದುಳಿದ ವರ್ಗಗಳ ಮಹಿಳೆಯರಿಗೂ ಮೀಸಲಾತಿ ಕಲ್ಪಿಸಬೇಕು ಎನ್ನುವುದು ನಮ್ಮ ಆಗ್ರಹ’ ಎಂದರು.

ಪ್ರತ್ಯೇಕ ಸರ್ಕಾರ: ‘ಗ್ರಾಮ ಪಂಚಾಯಿತಿಗಳು ಪ್ರತ್ಯೇಕ ಸರ್ಕಾರವಾಗಿ ಆಡಳಿತ ಮಾಡಬೇಕು. ಪಂಚಾಯಿತಿ ಮಟ್ಟದ ಅಧಿಕಾರಿಗಳು ಸ್ಥಳೀಯವಾಗಿ ವಾಸವಿರಬೇಕು. ಬೇರೆ ಕಡೆ ಹುಡುಕಿಕೊಂಡು ಹೋಗುವಂತಾಗಬಾರದು. ಪಂಚಾಯಿತಿ ಮಟ್ಟದಲ್ಲಿ ಪ್ರತಿಯೊಂದು ಆಸ್ತಿಯ ಮಾಹಿತಿ ದಾಖಲಾತಿ ಇರಬೇಕು. ತೆರಿಗೆ ಸಂಗ್ರಹಕ್ಕೆ ಜನರಿಗೆ ಉತ್ತೇಜಿಸಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ನಸೀರ್ ಅಹಮದ್, ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಇದ್ದರು.



‘ಗಾಂಧಿ ಗ್ರಾಮ ಪುರಸ್ಕಾರ’ ಪ್ರಶಸ್ತಿ ಪಡೆದ ಹಾವೇರಿಯ ಆಲದಕಟ್ಟಿ ಗ್ರಾಮ ಪಂಚಾಯತಿಯ ನಿಂಗಪ್ಪ ಫಕೀರಪ್ಪ ನಿಂಬಕ್ಕನವರ್, ಮಂಡ್ಯದ ಮೇಲುಕೋಟೆ ಗ್ರಾಮ ಪಂಚಾಯತಿಯ ಅಧ್ಯಕ್ಷ ಎಸ್. ಸೋಮಶೇಖರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪಾಲಹಳ್ಳಿ ಕೆ. ರಾಜೇಶ್, ಬೇಲೂರಿನ ಇಬ್ಬೀಡು ಗ್ರಾಮ ಪಂಚಾಯತಿಯ ಅಧ್ಯಕ್ಷೆ ಮಂಜುಳಾ, ಬೆಳಗಾವಿಯ ಚಿಕ್ಕೋಡಿ ತಾಲ್ಲೂಕಿನ ಅಂಕಲಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಬಾಳಪ್ಪ ಉಮರಾಣಿ ಮತ್ತು ಯಾದಗಿರಿಯ ಬಂದಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಮಲ್ಲಿಕಾರ್ಜುನ್ ಕಿವಿಡೇರ್ ಪರಸ್ಪರ ಅಭಿನಂದಿಸಿದರು –ಪ್ರಜಾವಾಣಿ ಚಿತ್ರ

‘ಗಾಂಧಿ ನೀತಿಗಳ ವಿರೋಧಿ ಸರ್ಕಾರ’

ಬೆಂಗಳೂರು: ಒಂದು ಕಡೆ ಸಿದ್ದರಾಮಯ್ಯ ಸರ್ಕಾರ ಸಿಕ್ಕ– ಸಿಕ್ಕಲ್ಲೆಲ್ಲಾ ಮದ್ಯದಂಗಡಿ ತೆರೆಯುತ್ತಿದೆ. ಮತ್ತೊಂದೆಡೆ ‘ಗಾಂಧಿ ಕಂಡ ಕನಸು ಕರ್ನಾಟಕದಲ್ಲಿ ನನಸಾಗಿದೆ‘ ಎಂಬುದಾಗಿ ಜಾಹಿರಾತು ನೀಡುತ್ತಿದೆ. ಇದು ವಿಪರ್ಯಾಸ ಎಂದು ಶಾಸಕ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದ್ದಾರೆ.

‘ಸರ್ಕಾರ ನಡೆಸುವವರು ಮಾಡುವುದೆಲ್ಲಾ ಗಾಂಧಿ ವಿರೋಧಿ ನೀತಿಗಳೇ. ಸುಳ್ಳು ಹೇಳುವ ಮೂಲಕವೇ ಗಾಂಧಿ ವಿರೋಧಿ ನೀತಿ ಆರಂಭವಾಗುತ್ತದೆ’ ಎಂದು ಬೊಮ್ಮಾಯಿ ಕುಟುಕಿದರು.

‘ಸುಳ್ಳು ಹೇಳಿ ಜನರ ದಿಕ್ಕು ತಪ್ಪಿಸುವುದು ಮಾತ್ರವಲ್ಲ, ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಮದ್ಯದಂಗಡಿ ತೆರೆಯುತ್ತಿದ್ದಾರೆ. ಈ ರೀತಿ ಮಾಡಿ ಎಂದು ಗಾಂಧಿ ಹೇಳಿದ್ದರೆ? ಹೇಳಲು ಮಾತ್ರ ಗಾಂಧಿ–ಶಾಂತಿ ಮಂತ್ರ. ಮಾಡುವುದೆಲ್ಲ ಗಾಂಧಿ ವಿರೋಧಿ ಕೆಲಸಗಳು’ ಎಂದು ಹರಿಹಾಯ್ದರು.

ಮಸೀದಿ ಬಾಗಿಲಿಗೆ ಮಂಗಳಾರತಿ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಹಿಂದೂ ಮಹಾಮಂಡಳಿಯ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ಇಲ್ಲಿನ ಜಾಮಿಯಾ ಮಸೀದಿ ಬಾಗಿಲಿಗೆ ಆರತಿ ಬೆಳಗಿ, ಹಿಂದೂ ದೇವರ ಹೆಸರಲ್ಲಿ ಘೋಷಣೆ ಕೂಗಿದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಹಿನ್ನೆಲೆಯಲ್ಲಿ ಗಂಗಾವತಿ ನಗರ ಪೊಲೀಸ್ ಠಾಣೆಯಲ್ಲಿ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಯಮನೂರ ರಾಠೋಡ, ರೌಡಿಶೀಟರ್‌ಗಳಾದ ಶ್ರೀಕಾಂತ ಹೊಸಕೇರಿ, ಕುಮಾರ ಹೂಗಾರ, ಚೆನ್ನಬಸವ ಹೂಗಾರ ಹಾಗೂ ಸಂಗಮೇಶ ಅಯೋಧ್ಯ ವಿರುದ್ಧ ಪೊಲೀಸರು ಸ್ವಯಂಪ್ರೇರಿತರಾಗಿ ದೂರು ದಾಖಲಿಸಿಕೊಂಡಿದ್ದಾರೆ.

‘ಸೆ.28ರಂದು ಗಣಪತಿ ವಿಸರ್ಜನೆ ಮೆರವಣಿಗೆ ಜಾಮಿಯಾ ಮಸೀದಿ ಬಳಿ ಬರುತ್ತಿದ್ದಂತೆಯೇ ಮಸೀದಿ ಬಾಗಿಲಿಗೆ ಆರತಿ ಬೆಳಗಿದ್ದಾರೆ. ಗಲಭೆ ಮಾಡುವ ಉದ್ದೇಶದಿಂದ ಜೈಶ್ರೀರಾಮ್, ಭಾರತ ಮಾತಾಕೀ ಜೈ, ಗವಿ ಗಂಗಾಧರೇಶ್ವರ ಮಹಾರಾಜ ಕೀ ಜೈ ಎನ್ನುವ ಘೋಷಣೆಗಳನ್ನು ಕೂಗಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಕಾವೇರಿ ವಿವಾದ: ಬಿಜೆಪಿಗೆ ಡಿ.ಕೆ. ಶಿವಕುಮಾರ್ ಸವಾಲು

‘ಕೇಂದ್ರದ ಮೇಲೆ ಒತ್ತಡ ಹೇರಲಿ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ವಿಚಾರದಲ್ಲಿ ಬಿಜೆಪಿ ಕೇವಲ ರಾಜಕೀಯ ಮಾಡುತ್ತಿದೆ. ಆ ಪಕ್ಷದ ನಾಯಕರಿಗೆ ರಾಜ್ಯದ ಹಿತದ ಬಗ್ಗೆ ಕಾಳಜಿ ಇದ್ದರೆ ಕೇಂದ್ರ ಸರ್ಕಾರದಿಂದ ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಅನುಮತಿ ಕೊಡಿಸಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲೆಸೆದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಸುಪ್ರೀಂ ಕೋರ್ಟ್ ವಿಚಾರಣೆ ವೇಳೆ ಕರ್ನಾಟಕ ತನ್ನ ಜಾಗದಲ್ಲಿ ಅಣೆಕಟ್ಟು ಕಟ್ಟಲು ಅಡ್ಡಿಪಡಿಸಬೇಡಿ ಎಂದು ಅಭಿಪ್ರಾಯಪಟ್ಟಿದೆ. ಹೀಗಾಗಿ ಬಿಜೆಪಿ ನಾಯಕರು ರಾಜಕೀಯ ಬಿಟ್ಟು ರಾಜ್ಯದ ಹಿತಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಿ’ ಎಂದು ತಿಳಿಸಿದರು.

‘ಈಗಿನ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳ ಸ್ಥಿತಿ ನಾಯಿ ಪಾಡಾಗಿದೆ’ ಎಂದು ಶಾಮನೂರು ಶಿವಶಂಕರಪ್ಪ ಅವರು ಹೇಳಿಕೆ ನೀಡಿದ ಬೆನ್ನಲ್ಲೇ ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳ ಸಂಖ್ಯೆಯ ಪತ್ರ ಹರಿದಾಡುತ್ತಿರುವ ಬಗ್ಗೆ ಕೇಳಿದಾಗ, ‘ಯಾರೋ ದೂರು ಕೊಟ್ಟಿರುವ ಹಿನ್ನೆಲೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಅವರ ಜೊತೆ ನಾವೆಲ್ಲ ಕುಳಿತು ಚರ್ಚೆ ಮಾಡುತ್ತೇವೆ’ ಎಂದರು.

‘ಅಕ್ರಮವಾಗಿ ನೀರು ಪಡೆಯುತ್ತಿರುವ ತಮಿಳುನಾಡು’



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲಿಸಿ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಮಾತನಾಡಿದರು

ಮಂಡ್ಯ: ‘ತಮಿಳುನಾಡು ಸರ್ಕಾರ ಅಕ್ರಮವಾಗಿ ಕಾವೇರಿ ನದಿ ನೀರು ಪಡೆಯುತ್ತಿದೆ. ಅನಧಿಕೃತವಾಗಿ ಕೃಷಿ ಭೂಮಿ ಹೆಚ್ಚಿಸಿದೆ. ರಾಜ್ಯ ಸರ್ಕಾರ ಇದನ್ನು ಗುರುತಿಸಿ ಕಾವೇರಿ ನೀರು ನಿರ್ವಹಣಾ ಸಮಿತಿ, ಪ್ರಾಧಿಕಾರದ ಮುಂದೆ ಮಂಡಿಸಲು ಸೋತಿದೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.


ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಹೋರಾಟ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಅವರು ಮಾತನಾಡಿದರು.

‘ತಮಿಳುನಾಡಿನ ಅಕ್ರಮ ನೀರಾವರಿಯ ಬಗ್ಗೆ ಪ್ರಶ್ನೆ ಎತ್ತುವವರೆಗೂ ಅವರ ಪರವಾಗಿಯೇ ಆದೇಶ ಬರಲಿದೆ. ರಾಜ್ಯ ಸರ್ಕಾರ ಕೇವಲ ರಕ್ಷಣಾತ್ಮಕವಾಗಿ ಹೆಜ್ಜೆ ಇಡುತ್ತಿದ್ದು, ಆಕ್ರಮಣಕಾರಿಯಾಗಿಯೂ ನಡೆಯುವ ಅವಶ್ಯಕತೆ ಇದೆ‘ ಎಂದು ಅಭಿಪ್ರಾಯ ಪಟ್ಟರು.

‘ತಮಿಳುನಾಡಿನಲ್ಲಿಯೂ ಇಷ್ಟೇ ಪ್ರದೇಶದಲ್ಲಿ ಬೆಳೆ ಬೆಳೆಯಬೇಕು ಎಂಬ ನಿಯಮವಿದೆ. ಆದರೆ, ತಮಿಳುನಾಡು ಸರ್ಕಾರ ಈ ನಿಯಮವನ್ನು ಉಲ್ಲಂಘಿಸಿದೆ’ ಎಂದು ಅವರು ಆರೋಪಿಸಿದರು.

ಸಾಮೂಹಿಕ ಅತ್ಯಾಚಾರ: ಐವರ ಬಂಧನ

ಪ್ರಜಾವಾಣಿ ವಾರ್ತೆ



ಬೆಳಗಾವಿ: ಜಿಲ್ಲೆಯ ಗೋಕಾಕ ನಗರದಲ್ಲಿ ಮಹಿಳೆಯನ್ನು ಅಪಹರಿಸಿ, ಸಾಮೂಹಿಕವಾಗಿ ಅತ್ಯಾಚಾರ ಎಸಗಿರುವ ಕೃತ್ಯ ನಡೆದಿದೆ. ಪೊಲೀಸರು ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಮತ್ತೊಬ್ಬ ತಲೆಮರೆಸಿಕೊಂಡಿದ್ದು, ಆತನಿಗಾಗಿ ಹುಡುಕಾಟ ನಡೆದಿದೆ ಎಂದು ಸೋಮವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್ಪಿ ಡಾ.ಭೀಮಾಶಂಕರ ಗುಳೇದ ಸೋಮವಾರ ತಿಳಿಸಿದರು.


ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಗೋಕಾಕ ಪೊಲೀಸರು, ಸ್ವಯಂ ಪ್ರೇರಣೆಯಿಂದ ತನಿಖೆ ಕೈಗೊಂಡು ಈ ಪ್ರಕರಣ ಪತ್ತೆ ಮಾಡಿದ್ದಾರೆ.

‘ಗೋಕಾಕ ತಾಲ್ಲೂಕಿನ ಬೆನಚಿನಮರಡಿ ಗ್ರಾಮದ ರಮೇಶ ಉದ್ದಪ್ಪ ಖಿಲಾರಿ, ದುರ್ಗಪ್ಪ ಸೋಮಲಿಂಗ ವಡ್ಡರ, ಯಲ್ಲಪ್ಪ ಸಿದ್ದಪ್ಪ ಗೀಸನಿಂಗವ್ವಗೋಳ, ಕೃಷ್ಣ ಪ್ರಕಾಶ ಪೂಜೇರಿ, ರಾಮಸಿದ್ಧ ಗುರುಸಿದ್ಧಪ್ಪ ತಪಸಿ ಬಂಧಿತರು. ಬಸವರಾಜ ಖಿಲಾರಿ ಪರಾರಿಯಾಗಿದ್ದಾನೆ’ ಎಂದು ಎಸ್ಪಿ ಡಾ.ಭೀಮಾಶಂಕರ ತಿಳಿಸಿದರು.

‘ಸಂತ್ರಸ್ತೆ ವ್ಯಕ್ತಿಯೊಬ್ಬರೊಂದಿಗೆ ಹಳ್ಳಿಯಿಂದ ಸೆ.5 ರಂದು (ಶಿಕ್ಷಕರ ದಿನ) ಗೋಕಾಕದ ಮಾರುಕಟ್ಟೆಗೆ ಬಂದಿದ್ದರು. ಆರೋಪಿ ಬಸವರಾಜ ಖಿಲಾರಿ ಈ ಇಬ್ಬರಿಗೆ ಪರಿಚಿತನಾಗಿದ್ದು, ಮನೆಗೆ ಚಹಾಕ್ಕೆ ಆಹ್ವಾನಿಸಿ ಇಬ್ಬರನ್ನೂ ಕೂಡಿಹಾಕಿದ್ದ. ಅಲ್ಲಿಗೆ ಬಂದ ಐವರು ಆರೋಪಿಗಳು ಬೆಳಿಗ್ಗೆಯಿಂದ ರಾತ್ರಿಯವರೆಗೂ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದರು. ಅವರಲ್ಲಿದ್ದ ₹ 2,000, ಆಭರಣ ಕಸಿದುಕೊಂಡಿದ್ದಾರೆ. ಎಟಿಎಂ ಬಳಸಿ ಹಣ ಡ್ರಾ ಮಾಡಿಕೊಂಡರು. ಕೊನೆಗೆ ಸಂತ್ರಸ್ತೆ ಹಾಗೂ ಅವರೊಂದಿಗೆ ಬಂದಿದ್ದ ಪುರುಷನನ್ನು ಜೊತೆಯಾಗಿ ನಿಲ್ಲಿಸಿ ‘ಖಾಸಗಿ’ ಫೋಟೊ ತೆಗೆದರು. ಅತ್ಯಾಚಾರ ಸಂಗತಿಯನ್ನು ಪೊಲೀಸರಿಗೆ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಸಿದ್ದರು’ ಎಂದು ಎಸ್ಪಿ ಡಾ.ಭೀಮಾಶಂಕರ ಗುಳೇದ ತಿಳಿಸಿದರು.

‘ಆರೋಪಿಗಳು ಗೋಕಾಕ ಭಾಗದಲ್ಲಿ ಕುಖ್ಯಾತ ‘ಖಿಲಾರಿ ಗ್ಯಾಂಗ್’ ಹಾಗೂ ‘ಎಸ್.ಪಿ. ಸರ್ಕಾರ್ ಗ್ಯಾಂಗ್’ ಎಂಬ ದರೋಡೆಕೋರರ ಗುಂಪಿನ ಸದಸ್ಯರೇ ಆಗಿದ್ದು ಪ್ರತಿಯೊಬ್ಬರ ಮೇಲೂ ಬೇರೆಬೇರೆ ಠಾಣೆಗಳಲ್ಲಿ 6ರಿಂದ 8 ಪ್ರಕರಣಗಳು ದಾಖಲಾಗಿವೆ. ಮಹಿಳೆ ಈ ಆರೋಪಿಗಳನ್ನು ಗುರುತಿಸಿದ್ದಾರೆ’ ಎಂದು ಹೇಳಿದರು.

ಏಕತಾರಿ ಕಲಾವಿದ ವೀರಭದ್ರಪ್ಪ ನಿಧನ



ನಿಡಗುಂದಿ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಮುದ್ದಾಪುರದ ಏಕತಾರಿ ಕಲಾವಿದ ವೀರಭದ್ರಪ್ಪ ದಳವಾಯಿ(81) ಸೋಮವಾರ ನಿಧನರಾದರು. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ಅವರಿಗೆ ಪತ್ನಿ, ಗೊಂಬೆಯಾಟದ ಕಲಾವಿದ ಸಿದ್ದು ಬಿರಾದಾರ ಹಾಗೂ ಐವರು ಪುತ್ರಿಯರು ಇದ್ದಾರೆ.

ಏಕತಾರಿ (ಒಂದೇ ತಂತಿಯುಳ್ಳ ವಾದ್ಯ) ನುಡಿಸುತ್ತ ತತ್ವ ಪದಗಳನ್ನು ಹಾಡುತ್ತಿದ್ದ ವೀರಭದ್ರಪ್ಪ ಆಕಾಶವಾಣಿ ಕಲಾವಿದರು ಆಗಿದ್ದರು. ಐದು ರಾಜ್ಯಗಳಲ್ಲಿ 600 ಕ್ಕೂ ಹೆಚ್ಚು ಕಲಾ ಪ್ರದರ್ಶನವನ್ನು ನೀಡಿದ್ದರು.

ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಸಂರಕ್ಷಣಾ ಕಲಾ ಸಂಘ ಸ್ಥಾಪಿಸಿ, ಮುದ್ದಾಪುರದಲ್ಲಿ ಸ್ವಂತದ 4 ಗುಂಟೆ ಜಾಗವನ್ನು ನೀಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ₹25 ಲಕ್ಷ ವೆಚ್ಚದಲ್ಲಿ ಸಾಂಸ್ಕೃತಿಕ ಭವನ ನಿರ್ಮಿಸಿದ್ದರು. ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.




❦ ಸುಭಾಷಿತ ❦

ಪರಸ್ಪರ ಅರ್ಥ ಮಾಡಿಕೊಳ್ಳುವುದಕ್ಕೆ ಇಬ್ಬರು ವ್ಯಕ್ತಿಗಳು ಒಂದೇ ಭಾಷೆಯಲ್ಲಿ ಮಾತನಾಡಿಕೊಳ್ಳಬೇಕು ಎಂದೇನಿಲ್ಲ, ಒಂದೇ ಬಗೆಯ ಭಾವನೆಗಳನ್ನು ಹಂಚಿಕೊಂಡರೆ ಸಾಕು.
-ರೂಮಿ

ಜೆ.ಪಿ.ಮಾರ್ಗನ್ ಸೂಚ್ಯಂಕಕ್ಕೆ ಭಾರತದ ಬಾಂಡ್: ಹೊಸ ಅವಕಾಶ

ಭಾರತದ ಸರ್ಕಾರಿ ಬಾಂಡ್‌ಗಳನ್ನು ಅಮೆರಿಕದ ಪ್ರತಿಷ್ಠಿತ ಜೆ.ಪಿ.ಮಾರ್ಗನ್‌ನ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳ ಸೂಚ್ಯಂಕಕ್ಕೆ ಸೇರ್ಪಡೆ ಮಾಡುತ್ತಿರುವುದು ಇಲ್ಲಿನ ಹಣಕಾಸು ಮಾರುಕಟ್ಟೆಯು ಪಕ್ವವಾಗುತ್ತಿರುವುದನ್ನು ಹಾಗೂ ಈ ಮಾರುಕಟ್ಟೆಯು ಪಡೆದುಕೊಳ್ಳುತ್ತಿರುವ ಮಹತ್ವವನ್ನು ಸೂಚಿಸುತ್ತಿದೆ. ಈ ಸೂಚ್ಯಂಕದಲ್ಲಿ ಸ್ಥಾನ ಪಡೆಯಲು ಭಾರತವು 2013ರಿಂದಲೂ ಪ್ರಯತ್ನ ನಡೆಸಿದೆ. ಹೀಗಾಗಿ, ಈಗಿನ ಬೆಳವಣಿಗೆಯು ಆಶ್ಚರ್ಯ ಮೂಡಿಸುವಂಥದ್ದೇನೂ ಅಲ್ಲ. ರಷ್ಯಾವನ್ನು ಸೂಚ್ಯಂಕದಿಂದ ಹೊರಹಾಕಿರುವುದು ಮತ್ತು ಚೀನಾ ಜೊತೆ ಪಾಶ್ಚಾತ್ಯ ದೇಶಗಳ ಸಂಬಂಧವು ಹಳಸಿರುವುದು ಈಗ ಭಾರತವನ್ನು ಈ ಸೂಚ್ಯಂಕಕ್ಕೆ ಸೇರಿಸುವ ಪ್ರಕ್ರಿಯೆಗೆ ವೇಗ ತಂದುಕೊಟ್ಟಿರಬಹುದು. ಭಾರತದ ಸರ್ಕಾರಿ ಬಾಂಡ್‌ಗಳು ಈ ಸೂಚ್ಯಂಕವನ್ನು ಸೇರಲಿರುವ ಪರಿಣಾಮವಾಗಿ, ಭಾರತಕ್ಕೆ ವಿದೇಶಿ ಬಂಡವಾಳವು ಭಾರಿ ಪ್ರಮಾಣದಲ್ಲಿ ಹರಿದುಬರುವ ನಿರೀಕ್ಷೆ ಇದೆ. ಇದು ಭಾರತದ ಮಾರುಕಟ್ಟೆಗಳ ವ್ಯಾಪ್ತಿ ಇನ್ನಷ್ಟು ಹೆಚ್ಚಲು ನೆರವಾಗುತ್ತದೆ. ಭಾರತದ ಬಾಂಡ್‌ಗಳನ್ನು ಸೂಚ್ಯಂಕಕ್ಕೆ ಸೇರಿಸುವ ಕೆಲಸವು 2024ರ ಜೂನ್‌ನಿಂದ 10 ತಿಂಗಳ ಅವಧಿಯಲ್ಲಿ ಹಂತ ಹಂತವಾಗಿ ಆಗಲಿದೆ. ಸೂಚ್ಯಂಕದಲ್ಲಿ ಭಾರತದ ಬಾಂಡ್‌ಗಳಿಗೆ ಸಿಗಬಹುದಾದ ಗರಿಷ್ಠ ಪ್ರಾಧಾನ್ಯ ಶೇಕಡ 10ರಷ್ಟು ಇರಲಿದೆ. ಚೀನಾ, ಬ್ರೆಜಿಲ್, ಇಂಡೊನೇಷ್ಯಾ ದೇಶಗಳ ಬಾಂಡ್‌ಗಳಿಗೆ ಇರುವಷ್ಟೇ ಪ್ರಾಧಾನ್ಯವು ಭಾರತದ ಬಾಂಡ್‌ಗಳಿಗೂ ಸಿಗಲಿದೆ. ಸೂಚ್ಯಂಕಕ್ಕೆ ಸೇರ್ಪಡೆಯಾಗುವ ಪರಿಣಾಮವಾಗಿ ಭಾರತಕ್ಕೆ 20 ಬಿಲಿಯನ್ ಡಾಲರ್‌ನಿಂದ (ಅಮೆರಿಕದ ಡಾಲರ್ ಎದುರು ರೂಪಾಯಿಯ ಈಗಿನ ಮೌಲ್ಯದ ಪ್ರಕಾರ ಅಂದಾಜು ₹ 1.66 ಲಕ್ಷ ಕೋಟಿ) 30 ಬಿಲಿಯನ್ ಡಾಲರ್‌ವರೆಗೆ (ಅಂದಾಜು ₹ 2.49 ಲಕ್ಷ ಕೋಟಿ) ಬಂಡವಾಳ ಹರಿದುಬರಬಹುದು ಎಂದು ನಿರೀಕ್ಷಿಸಲಾಗಿದೆ. ಜೆ.ಪಿ.ಮಾರ್ಗನ್ ಮಾತ್ರವೇ ಅಲ್ಲದೆ, ವಿಶ್ವದ ಇತರ ಪ್ರಮುಖ ಸೂಚ್ಯಂಕಗಳು ಕೂಡ ಇದೇ ಮಾದರಿಯಲ್ಲಿ ಭಾರತದ ಸರ್ಕಾರಿ ಬಾಂಡ್‌ಗಳಿಗೆ ತಮ್ಮಲ್ಲಿ ಸ್ಥಾನ ಕಲ್ಪಿಸಬಹುದು.



ಭಾರತದ ಸರ್ಕಾರಿ ಬಾಂಡ್‌ಗಳು ಈ ಸೂಚ್ಯಂಕವನ್ನು ಸೇರಲಿರುವ ಪರಿಣಾಮವಾಗಿ, ಭಾರತಕ್ಕೆ ವಿದೇಶಿ ಬಂಡವಾಳವು ಭಾರಿ ಪ್ರಮಾಣದಲ್ಲಿ ಹರಿದುಬರುವ ನಿರೀಕ್ಷೆ ಇದೆ

ಭಾರತದ ಮಾರುಕಟ್ಟೆಗಳಿಗೆ ಬರಲಿರುವ ಬಂಡವಾಳವು ಕೇಂದ್ರ ಸರ್ಕಾರಕ್ಕೆ ತನ್ನ ವಿತ್ತೀಯ ಕೊರತೆ ಹಾಗೂ ಚಾಲ್ತಿ ಖಾತೆ ಕೊರತೆಯನ್ನು ತುಂಬಿಕೊಳ್ಳುವುದಕ್ಕೆ ಇನ್ನೊಂದು ಹೊಸ ಮೂಲವನ್ನು ಸೃಷ್ಟಿಸಿಕೊಡಲಿದೆ. ಅಲ್ಲದೆ, ಸರ್ಕಾರಕ್ಕೆ ಬಂಡವಾಳ ಸಂಗ್ರಹದ ವೆಚ್ಚವನ್ನು ತಗ್ಗಿಸುವಲ್ಲಿ ನೆರವಾಗುತ್ತದೆ. ಭಾರತದ ಬಾಂಡ್ ಮಾರುಕಟ್ಟೆಯು ಇನ್ನಷ್ಟು ಬಲಗೊಳ್ಳಲಿದೆ. ಭಾರತವು ಭಾರಿ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಾದರೆ, ಭಾರತಕ್ಕೆ ಅದನ್ನು ತಾಳಿಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ಮಾರುಕಟ್ಟೆಯ ಅನಿಶ್ಚಿತತೆಗಳನ್ನು ಹಾಗೂ ಏರಿಳಿತಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ವಿದೇಶಿ ಬಂಡವಾಳದ ಒಳಹರಿವಿನ ಕಾರಣದಿಂದಾಗಿ ಭಾರತದ ರೂಪಾಯಿಯು ಬಲ ಪಡೆದುಕೊಳ್ಳಬಹುದು. ವಿನಿಮಯ ದರದಲ್ಲಿ ಸ್ಥಿರತೆ ಕಂಡುಕೊಂಡರೆ ಇನ್ನಷ್ಟು ವಿದೇಶಿ ಸಾಂಸ್ಥಿಕ ಹೂಡಿಕೆ ಭಾರತದತ್ತ ಹರಿಯಬಹುದು. ಬ್ಯಾಂಕ್‌ಗಳಿಗೆ ಸರ್ಕಾರದ ಬಾಂಡ್‌ಗಳನ್ನು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಬೇಕಾದ ಒತ್ತಡ ಇರುವುದಿಲ್ಲವಾದ ಕಾರಣ, ಅವು ಖಾಸಗಿ ವಲಯಕ್ಕೆ ಹೆಚ್ಚು ಸಾಲ ನೀಡಲು ಸಾಧ್ಯವಾಗುತ್ತದೆ. ಮೂಲಸೌಕರ್ಯ ವಲಯದ ಮೇಲಿನ ಹೂಡಿಕೆಗಳಿಗೆ ಹೆಚ್ಚಿನ ಆದ್ಯತೆ ಸಿಗುತ್ತದೆ. ಅಲ್ಲದೆ, ಭಾರತದ ಹಣಕಾಸು ಮಾರುಕಟ್ಟೆಗಳು ಜಾಗತಿಕ ಮಾರುಕಟ್ಟೆಗಳೊಂದಿಗೆ ಇನ್ನಷ್ಟು ಉತ್ತಮವಾಗಿ ಸೇರಿಕೊಳ್ಳಬಹುದು.

ಜೆ.ಪಿ.ಮಾರ್ಗನ್ ತೀರ್ಮಾನವನ್ನು ಎಲ್ಲರೂ ಸ್ವಾಗತಿಸಿದ್ದಾರಾದರೂ, ಅದು ಬಂಡವಾಳ ಮಾರುಕಟ್ಟೆಗಳಲ್ಲಿ ಭಾರಿ ಪರಿಣಾಮ ಉಂಟುಮಾಡಿಲ್ಲ. ಏಕೆಂದರೆ ಈ ಸೇರ್ಪಡೆಯನ್ನು ಬಹುತೇಕರು ನಿರೀಕ್ಷಿಸಿದ್ದರು ಹಾಗೂ ಇದು ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರಲು ಒಂದು ವರ್ಷ ಬೇಕಿದೆ. ಕೆಲವು ಅಡ್ಡಿಗಳನ್ನು ನಿವಾರಿಸಿಕೊಳ್ಳಬೇಕಿದೆ, ಕೆಲವು ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳಬೇಕಿದೆ. ಇಡೀ ಪ್ರಕ್ರಿಯೆಯಲ್ಲಿ, ಅಂದರೆ ಭಾರತವು ಜಾಗತಿಕ ಹಣಕಾಸು ಮಾರುಕಟ್ಟೆಗಳ ಜೊತೆ ಇನ್ನಷ್ಟು ಒಗ್ಗೂಡುವುದರಲ್ಲಿ ಒಂದಿಷ್ಟು ಸವಾಲುಗಳು ಕೂಡ ಇವೆ. ಬಂಡವಾಳದ ಒಳಹರಿವು ಹೆಚ್ಚಳದ ಪರಿಣಾಮವಾಗಿ ರೂಪಾಯಿ ಮೌಲ್ಯವು ಹೆಚ್ಚಾದರೆ, ರಫ್ತಿನ ಮೇಲೆ ನಕಾರಾತ್ಮಕ ಪರಿಣಾಮಗಳು ಉಂಟಾಗಬಹುದು. ಇದನ್ನು ನಿಭಾಯಿಸಬೇಕಾಗುತ್ತದೆ. ಭಾರತದ ಹಣಕಾಸಿನ ಪರಿಸ್ಥಿತಿ ಹಾಗೂ ಇಲ್ಲಿನ ಹಣಕಾಸು ವಲಯದಲ್ಲಿನ ಚಟುವಟಿಕೆಗಳ ಮೇಲೆ ಹೆಚ್ಚಿನ ನಿಗಾ ಇರುತ್ತದೆ. ಸರ್ಕಾರವು ತನ್ನ ವಿತ್ತೀಯ ಹೊಣೆಗಾರಿಕೆಯನ್ನು ಎಷ್ಟು ಚೆನ್ನಾಗಿ ನಿಭಾಯಿಸುತ್ತದೆ ಎಂಬುದರ ಬಗ್ಗೆ ಹೆಚ್ಚಿನ ಗಮನ ಇರುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹಣಕಾಸಿನ ಬಿಕ್ಕಟ್ಟುಗಳು ಇದ್ದಾಗ, ಭಾರತದ ಬಾಂಡ್‌ಗಳ ಮೇಲೆಯೂ ಒತ್ತಡ ಉಂಟಾಗಬಹುದು. ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಕೂಡ ಒಂದಿಷ್ಟು ಸವಾಲುಗಳು ಎದುರಾಗಬಹುದು. ಆದರೆ ಅದಕ್ಕೆ ರೂಪಾಯಿಯ ನಿರ್ವಹಣೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಗುತ್ತದೆ. ಹಾಗೆಯೇ, ಆರ್‌ಬಿಐ ಜೊತೆ ಸರ್ಕಾರ ಹೇಗೆ ವರ್ತಿಸುತ್ತದೆ ಎಂಬುದನ್ನು ಜಗತ್ತು ಹೆಚ್ಚು ಸೂಕ್ಷ್ಮವಾಗಿ ಗಮನಿಸಲಿದೆ.

ದಿನದ ಟ್ವೀಟ್

ಯಾರಿಗಾದ ನಷ್ಟ?



ಶಿವಮೊಗ್ಗ ನಗರದಲ್ಲಿ ನಡೆದ ಇತ್ತೀಚಿನ ವಿದ್ಯಮಾನಗಳು ಯಾರೊಬ್ಬರನ್ನೂ ಜಾತ್ಯತೀತರಾಗಿ ಇರುವುದಕ್ಕೆ ಆಸ್ಪದ ನೀಡುವುದಿಲ್ಲ. ಈ ಬೆಳವಣಿಗೆಯು ಪ್ರಬಲ ಜಾತ್ಯತೀತ ಮನೋಭಾವದವರು ಸಹ ತಮ್ಮ ನಿಲುವಿನ ಬಗ್ಗೆ ಪ್ರಶ್ನಿಸಿಕೊಳ್ಳಲು ಆರಂಭಿಸುವಂತೆ ಮಾಡುತ್ತದೆ. ರಾಜಕೀಯವು ಮಲೆನಾಡಿನ ಸೌಂದರ್ಯವನ್ನು ಸಂಪೂರ್ಣವಾಗಿ ನಾಶ ಮಾಡಿದೆ. ಇದು ಯಾರಿಗಾದ ನಷ್ಟ? ಇಲ್ಲಿ ಬಂಡವಾಳ ಹೂಡಲು ಯಾರು ಮುಂದೆ ಬರುತ್ತಾರೆ? ಈ ಪ್ರದೇಶ ಹೇಗೆ ಬೆಳವಣಿಗೆ ಹೊಂದುತ್ತದೆ?

ಆಕಾಶ್ ಆರ್. ಪಾಟೀಲ್, ಕಾನೂನು ವಿದ್ಯಾರ್ಥಿ

ಕಿಡಿನುಡಿ



ಕಾಂಗ್ರೆಸ್ ಪಕ್ಷದವರಲ್ಲಿ ಯಾರಿಗಾದರೂ ಹೊಟ್ಟೆಕಿಚ್ಚಿದ್ದರೆ ನಾಲ್ಕು ಗೋಡೆಗಳೊಳಗೆ ಚರ್ಚಿಸಿ ಬಗೆಹರಿಸಿಕೊಳ್ಳಲಿ. ಪಕ್ಷ ದೊಡ್ಡದು ಎಂಬುದನ್ನು ಮರೆಯಬಾರದು. ಖುಷಿಗೋ ತೆವಲಿಗೋ ಅಥವಾ ತೀಟೆಗೋ ಬಿಜೆಪಿ ಮತ್ತು ಜೆಡಿಎಸ್‌ನವರಿಗೆ ಆಹಾರ ಕೊಡಬೇಡಿ. ಸಮಸ್ಯೆ ಇದ್ದರೆ ಮುಖ್ಯಮಂತ್ರಿ ಹಾಗೂ ಹೈಕಮಾಂಡ್ ಜೊತೆ ಮಾತನಾಡಿ ಪರಿಹರಿಸಿಕೊಳ್ಳಿ.

ಎಂ.ಲಕ್ಷ್ಮಣ, ಕೆಪಿಸಿಸಿ ವಕ್ತಾರ

25 ವರ್ಷಗಳ ಹಿಂದೆ

ಶನಿವಾರ, 3-10-1998

- **ಬೆಂಬಲ ಮುಂದುವರಿಕೆ ಪ್ರಶ್ನೆ: ಬಿಜೆಪಿಗೆ ಈಗ ಅಕಾಲಿಕ ಬೆದರಿಕೆ**

ನವದೆಹಲಿ (ಯುಎನ್‌ಐ), ಅ. 2– ಉಧಂಸಿಂಗ್ ನಗರ ಜಿಲ್ಲೆ ವಿವಾದಕ್ಕೆ ಸಂಬಂಧಿಸಿ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಳ್ಳುವ ಸಾಧ್ಯತೆ ಬಗ್ಗೆ ಶಿರೋಮಣಿ ಅಕಾಲಿ ದಳವು (ಎಸ್‌ಎಡಿ), ಡಿಎಂಕೆ, ರಾಷ್ಟ್ರೀಯ ಲೋಕದಳ ಹಾಗೂ ತೃಣಮೂಲ ಕಾಂಗ್ರೆಸ್ ಪಕ್ಷಗಳ ಜತೆ ಮಾತುಕತೆ ನಡೆಸುತ್ತಿದೆ ಎಂದು ಅಕಾಲಿ ದಳದ ಅಧ್ಯಕ್ಷ ಪ್ರಕಾಶ್ ಸಿಂಗ್ ಬಾದಲ್ ಇಂದು ರಾತ್ರಿ ತಿಳಿಸಿದ್ದಾರೆ.

ಉಧಂಸಿಂಗ್ ನಗರ ಜಿಲ್ಲೆಯ ನಿಯೋಗದ ಜತೆ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ, ಪಂಜಾಬಿನ ಮುಖ್ಯಮಂತ್ರಿಯೂ ಆಗಿರುವ ಬಾದಲ್ ಅವರು, 'ಈ ಸಂಬಂಧ ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ, ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಹಾಗೂ ರಾಷ್ಟ್ರೀಯ ಲೋಕದಳದ ಓಂಪ್ರಕಾಶ್ ಚೌತಾಲ ಅವರ ಜತೆ ಮಾತುಕತೆ ನಡೆಯುತ್ತಿದೆ' ಎಂದರು.

50 ವರ್ಷಗಳ ಹಿಂದೆ

ಬುಧವಾರ, 3-10-1973

- **ಆನೇಕಲ್‌ನಲ್ಲಿ ಉದ್ರಿಕ್ತ ಜನರ ಮೇಲೆ ಗೋಲಿಬಾರ್: ಬಾಲಕನಿಗೆ ಗುಂಡೇಟು**

ಆನೇಕಲ್, ಅ. 2– ನಿನ್ನೆ ರಾತ್ರಿ ಇಲ್ಲಿ ಕಲ್ಲು ತೂರಾಟದಲ್ಲಿ ತೊಡಗಿದ್ದ ಉದ್ರಿಕ್ತ ಜನರ ಗುಂಪನ್ನು ಚದುರಿಸಲು ಪೊಲೀಸರು ಎರಡು ಸುತ್ತು ಗುಂಡು ಹಾರಿಸಿದರು.

ಬಾಲಕನೊಬ್ಬನಿಗೆ ಗುಂಡು ತಗಲಿ ಗಾಯವಾಗಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ.

ನಿನ್ನೆ ಬೆಳಿಗ್ಗೆ ಆನೇಕಲ್ ಕಡೆಯಿಂದ ಧಾನ್ಯ ತುಂಬಿದ್ದ ಎರಡು ಲಾರಿಗಳು ಬೆಂಗಳೂರಿಗೆ ಹೋಗುತ್ತಿದ್ದುದನ್ನು ಜನರು ತಡೆದು, ಲಾರಿಗಳನ್ನು ಪೊಲೀಸ್ ಠಾಣೆಗೆ ತಂದು, ಧಾನ್ಯವನ್ನು ಅಲ್ಲಿಯೇ ಜನರಿಗೆ ಹಂಚಲು ಒತ್ತಾಯಪಡಿಸಿದರು. ಆದರೆ, ಅದಕ್ಕೆ ಪೊಲೀಸರು ಒಪ್ಪಲಿಲ್ಲ. ಹೆಡ್ ಕಾನ್‌ಸ್ಟೆಬಲ್ ಒಬ್ಬರು ಲಾರಿಯೊಂದನ್ನು ಬಿಟ್ಟುಬಿಟ್ಟರು. ಇದರಿಂದ ಜನರು ಉದ್ರಿಕ್ತಗೊಂಡರು. ನಿನ್ನೆ ಬೆಳಿಗ್ಗೆ 6 ಗಂಟೆಯಿಂದ ಜನರ ಗುಂಪು ಕಚೇರಿ ಆವರಣದಲ್ಲಿ ಸೇರಿ ಪ್ರತಿಭಟನೆ ಸೂಚಿಸುತ್ತಿತ್ತು. ಈ ಮಧ್ಯೆ ಜನಸಂಘದವರು ನಡೆಸಿದ ಶಾಂತಿ ಪ್ರಯತ್ನ ವಿಫಲವಾಯಿತು.

- **ರೈಲ್ವೆ ಪ್ರಯಾಣ, ಸಾಗಣೆ ದರದಲ್ಲಿ ಗಣನೀಯ ಏರಿಕೆ**

ಮುಜಫ್ಫರ್‌ಪುರ, ಅ. 2– ಮುಂದಿನ ಹಣಕಾಸು ವರ್ಷದಿಂದ ರೈಲ್ವೆ ಪ್ರಯಾಣ ಮತ್ತು ಸರಕು ಸಾಗಣೆ ದರವು ಗಣನೀಯ ಪ್ರಮಾಣದಲ್ಲಿ ಹೆಚ್ಚುವುದು ಎಂದು ರೈಲ್ವೆ ಮಂತ್ರಿ ಎಲ್.ಎನ್. ಮಿಶ್ರಾ ಅವರು ಇಂದು ಸೂಚನೆ ನೀಡಿದರು.

ಈ ಸಂಬಂಧದ ತಂತ್ರಜ್ಞಾನ ನಿರ್ವಹಣೆಗೆ ಬೇಕು ಸದೃಢ ಒಪ್ಪಂದ

ಬಾಹ್ಯಾಕಾಶ ಪೈಪೋಟಿಯ ಹೊಸ ಆತಂಕ



ವಿಶ್ಲೇಷಣೆ

ಎಚ್.ಆರ್. ಕೃಷ್ಣಮೂರ್ತಿ

ಚಂದ್ರನ ದಕ್ಷಿಣ ಧ್ರುವ ಪ್ರದೇಶದಲ್ಲಿ ವಿಕ್ರಮ್ ಲ್ಯಾಂಡರನ್ನು ಮೃದುವಾಗಿ ಇಳಿಸಿ, ಜಗತ್ತಿನ ಎಲ್ಲ ಬಾಹ್ಯಾಕಾಶ ಸಂಸ್ಥೆಗಳ ಮೆಚ್ಚುಗೆಗೆ ಇಸ್ರೊ ಪಾತ್ರವಾದ ಒಂದು ತಿಂಗಳ ನಂತರ, ಚೀನಾದ ಪ್ರಧಾನ ಬಾಹ್ಯಾಕಾಶ ವಿಜ್ಞಾನಿ ವುವಾಂಗ್ ಯುವಾನ್, ವಿಕ್ರಮ್ ಲ್ಯಾಂಡರ್ ಚಂದ್ರಸ್ಪರ್ಶ ಮಾಡಿದ ತಾಣ ದಕ್ಷಿಣ ಧ್ರುವ ಅಲ್ಲವೇ ಅಲ್ಲ ಎಂದಿದ್ದಾರೆ! ಭಾರತದ ಈ ಅಸಾಧಾರಣ ಸಾಧನೆಗೆ ಎರಡು ದಿನಗಳ ಮುಂಚೆ, ರಷ್ಯಾದ ಲೂನಾ-25 ಲ್ಯಾಂಡರ್ ದಕ್ಷಿಣ ಧ್ರುವ ಪ್ರದೇಶದಲ್ಲಿ ಮೃದುವಾಗಿ ಇಳಿಯಲು ಸಾಧ್ಯವಾಗದೆ, ನೆಲಕ್ಕೆ ಅಪ್ಪಳಿಸಿ ನಾಶವಾಗಿತ್ತು. ಭಾರತ ಮತ್ತು ಚೀನಾ ಆ ಅನಾಹುತವನ್ನು ಎತ್ತಿ ತೋರಿಸಲಿಲ್ಲ. ಆದರೆ ಕೆಲವೇ ದಿವಸಗಳಲ್ಲಿ ಅಮೆರಿಕ ಮಾತ್ರ, ಲೂನಾ-25 ಚಂದ್ರನ ನೆಲಕ್ಕಪ್ಪಳಿಸಿದ ತಾಣದಲ್ಲಿ ಉಂಟಾದ 10 ಮೀಟರ್ ವ್ಯಾಸದ ಕುಳಿಯ ಚಿತ್ರವನ್ನು ಜಗತ್ತಿಗೆ ಬಿಡುಗಡೆ ಮಾಡಿತು!

ಚೀನಾ ಮತ್ತು ಅಮೆರಿಕದ ಈ ನಡೆಯನ್ನು ಬಾಹ್ಯಾಕಾಶ ಪೈಪೋಟಿಯ ಭಾಗವಾದ ಕುಚೋದ್ಯ, ಅಸೂಯೆ, ನಿರಾಸೆ, ಅಪಪ್ರಚಾರವಷ್ಟೇ ಎಂದು ವಿಜ್ಞಾನಿಗಳು ಹಾಗೂ ವ್ಯಾಖ್ಯಾನಕಾರರು ತಳ್ಳಿಹಾಕಿದ್ದಾರೆ. ಆದರೆ ಅದೇ ಸಮಯದಲ್ಲಿ, ಬಾಹ್ಯಾಕಾಶ ಪೈಪೋಟಿ ತರುತ್ತಿರುವ ಅಪಾಯಗಳನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾದ ಅಗತ್ಯದತ್ತ ಗಮನ ಸೆಳೆದಿದ್ದಾರೆ.

1955–75ರ 'ಸ್ಪೇಸ್ ರೇಸ್' ಅವಧಿಯಲ್ಲಿ ಬಾಹ್ಯಾಕಾಶದಲ್ಲಿ ಇದ್ದುದು ಅಮೆರಿಕ ಮತ್ತು ಸೋವಿಯತ್ ರಷ್ಯಾದ ಸೀಮಿತ ಸಂಖ್ಯೆಯ ಕೃತಕ ಉಪಗ್ರಹಗಳು ಮಾತ್ರ. ಅವುಗಳಲ್ಲೂ ನಾಗರಿಕ ಸೇವೆ ಮತ್ತು ವಾಣಿಜ್ಯೋದ್ದೇಶದ ಉಪಗ್ರಹಗಳ ಸಂಖ್ಯೆ ಬಹು ಕಡಿಮೆ. ಆದರೆ ಇಂದಿನ ಪರಿಸ್ಥಿತಿಯೇ ಬೇರೆ. ಬಾಹ್ಯಾಕಾಶದಲ್ಲಿ ಉಪಗ್ರಹಗಳ ಜಾಡು ಹಿಡಿಯುವ 'ಆರ್ಬೈಟಿಂಗ್ ನೌ' ಜಾಲತಾಣದ ಮಾಹಿತಿಯಂತೆ, ಈ ವರ್ಷದ ಮೇ ಅಂತ್ಯದಲ್ಲಿ ಭೂಮಿಯ ಸುತ್ತ ವಿವಿಧ ಕಕ್ಷೆಗಳಲ್ಲಿ ಪರಿಭ್ರಮಿಸುತ್ತಿರುವ ಸಕ್ರಿಯ ಉಪಗ್ರಹಗಳ ಸಂಖ್ಯೆ 7,702. ದೂರಸಂಪರ್ಕ, ಹವಾಮಾನ ಮುನ್ಸೂಚನೆ, ಸಂಚಾರ, ಉಪಗ್ರಹ ಆಧಾರಿತ ವೈದ್ಯಕೀಯ ಸೇವೆ, ಶಿಕ್ಷಣ, ರಕ್ಷಣೆ, ವಾಣಿಜ್ಯ ವ್ಯವಹಾರದಂತಹ ಅಸಂಖ್ಯ ಕ್ಷೇತ್ರಗಳಲ್ಲಿ ಉಪಗ್ರಹಗಳನ್ನು ಬಳಸುತ್ತಿದ್ದೇವೆ. ಅಂತಹ ಉಪಗ್ರಹಗಳ ಜೊತೆಗೆ ಸಂಪರ್ಕ ಕಡಿದುಹೋದರೆ ದೇಶವೊಂದರ ಸಮಸ್ತ ಚಟುವಟಿಕೆಗಳೂ ಸ್ತಬ್ಧವಾಗಿ ಹೋಗುತ್ತವೆ.

ವಿವಿಧ ದೇಶಗಳ ನಡುವಿನ ಪೈಪೋಟಿ, ಅಪನಂಬಿಕೆಯಿಂದಾಗಿ, ಈ ಉಪಗ್ರಹಗಳು ಶತ್ರುಗಳ ಕಾರ್ಯಾಚರಣೆಗೆ ತುತ್ತಾದರೆ, ಅಂತಹ ದೇಶದ ಪರಿಸ್ಥಿತಿ ದುರ್ಭರವಾಗುತ್ತದೆ. ಜಾಗತಿಕವಾಗಿ ದೇಶಗಳ ನಡುವಿನ ಸಂಘರ್ಷಗಳ ಅಧ್ಯಯನ ಮಾಡುವ 'ಗ್ಲೋಬಲ್ ಕಾನ್‌ಫ್ಲಿಕ್ಟ್ ಟ್ರ್ಯಾಕರ್' ಸಂಸ್ಥೆಯ ವರದಿಯಂತೆ, ಸದ್ಯದಲ್ಲಿ ನಡೆಯುತ್ತಿರುವ ರಷ್ಯಾ- ಉಕ್ರೇನ್ ಯುದ್ಧದಲ್ಲಿ, ಇಲಾನ್ ಮಸ್ಕ್ ಒಡೆತನದ 'ಸ್ಟಾರ್‌ಲಿಂಕ್ ಕಮ್ಯುನಿಕೇಷನ್ ಸಿಸ್ಟಮ್'ನಿಂದ ಗರಿಷ್ಠ ಮಟ್ಟದ ತಾಂತ್ರಿಕ ನೆರವು ಉಕ್ರೇನ್‌ಗೆ ದೊರೆಯುತ್ತಿದೆ. ಆದರೆ ಸ್ಟಾರ್‌ಲಿಂಕ್ ಯಾವುದೇ ಕಾರಣದಿಂದ ಉಪಗ್ರಹ ಆಧಾರಿತ ಸೌಲಭ್ಯಗಳನ್ನು ಹಿಂತೆಗೆದುಕೊಂಡರೆ, ಉಕ್ರೇನ್‌ಗೆ ತೀವ್ರ ಆಘಾತವಾಗಲಿದೆ. ಇದೇ ಸಮಯದಲ್ಲಿ ರಷ್ಯನ್ನರು, ಸ್ಟಾರ್‌ಲಿಂಕ್ ಸೇವೆಗೆ ಅಡಚಣೆ ಉಂಟುಮಾಡುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಸಂಸ್ಥೆ ನೀಡಿದೆ. ಸೋಲಿನ ಹಿಡಿತದಲ್ಲಿರುವ ದೇಶವೊಂದು, ತೀವ್ರ ಹತಾಶೆಯ ಪರಿಸ್ಥಿತಿಯಲ್ಲಿ, ಎದುರಾಳಿಯ ಉಪಗ್ರಹಗಳನ್ನು ನಾಶ ಮಾಡಿ ಯುದ್ಧವನ್ನು ಬಾಹ್ಯಾಕಾಶಕ್ಕೆ ವಿಸ್ತರಿಸದಂತೆ ನೋಡಿಕೊಳ್ಳುವುದೇ ಇಂದಿನ ಬಹುದೊಡ್ಡ ಸವಾಲು.

2007ಕ್ಕಿಂತ ಮುಂಚೆ, ಬಾಹ್ಯಾಕಾಶದಲ್ಲಿರುವ ಉಪಗ್ರಹಗಳನ್ನು ನಾಶಪಡಿಸುವ ಕ್ಷಿಪಣಿಗಳ (ಆ್ಯಂಟಿ ಸ್ಯಾಟಲೈಟ್ ಮಿಸೈಲ್) ಪರೀಕ್ಷೆ ತಡೆಯುವ ಅನೌಪಚಾರಿಕ ಒಪ್ಪಂದಕ್ಕೆ ಎಲ್ಲ ದೇಶಗಳೂ ಬದ್ಧವಾಗಿದ್ದವು. ಆದರೆ 2007ರ ಜನವರಿಯಲ್ಲಿ ಈ ಒಪ್ಪಂದವನ್ನು ಉಲ್ಲಂಘಿಸಿದ ಚೀನಾ, ಬಾಹ್ಯಾಕಾಶದ 893 ಕಿ.ಮೀ. ಎತ್ತರದಲ್ಲಿದ್ದ ತನ್ನದೇ ಆದ ಹವಾಮಾನ ಉಪಗ್ರಹವನ್ನು ಕ್ಷಿಪಣಿಯಿಂದ ನಾಶಪಡಿಸಿತು. 2019ರ ಮಾರ್ಚ್‌ನಲ್ಲಿ, ಒಡಿಶಾದಿಂದ ಉಡಾಯಿಸಿದ ಭಾರತದ ಮೊದಲ ಉಪಗ್ರಹ ನಿಗ್ರಹ ಕ್ಷಿಪಣಿಯು ಭೂಸಮೀಪ ಕಕ್ಷೆಯಲ್ಲಿ ನಿಷ್ಕ್ರಿಯವಾಗಿದ್ದ ನಮ್ಮದೇ ಉಪಗ್ರಹವನ್ನು ಹೊಡೆದುರುಳಿಸಿತು. ಇದೀಗ ಭೂಮಿಯಿಂದಲೇ ಬಿತ್ತರಿಸಿದ ಲೇಸರ್ ಕಿರಣಪುಂಜದಿಂದ ಉಪಗ್ರಹಗಳನ್ನು ನಿಷ್ಕ್ರಿಯಗೊಳಿಸುವ ತಂತ್ರಜ್ಞಾನವನ್ನು ಚೀನಾ ಪರೀಕ್ಷಿಸಿದೆ ಎಂಬ ವರದಿಗಳಿವೆ.

ಭವಿಷ್ಯದಲ್ಲಿ ಬಾಹ್ಯಾಕಾಶ ಸಮರಗಳ ಸಾಧ್ಯತೆ ಒಂದುಕಡೆ ನಿರಂತರವಾಗಿ ಹೆಚ್ಚುತ್ತಿದ್ದರೆ, ಇನ್ನೊಂದೆಡೆ, ಅಂತಹ ಅವಘಡಗಳನ್ನು ನಿಯಂತ್ರಿಸುವ, ತಪ್ಪಿಸುವ ವ್ಯವಸ್ಥೆಗಳ ಕೊರತೆ ಕಾಡುತ್ತಿದೆ. ಬಾಹ್ಯಾಕಾಶದ ಶಾಂತಿಯುತ ಬಳಕೆಯನ್ನು ಸಾಧ್ಯವಾಗಿಸುವಂತಹ ಒಪ್ಪಂದಗಳು ಇಲ್ಲವೆಂದಲ್ಲ. ಈ ಹಿಂದಿನ ಶೀತಲ ಸಮರದ ಸಮಯದಲ್ಲಿ ರೂಪುಗೊಂಡ 1967ರ ಬಾಹ್ಯಾಕಾಶ ಒಪ್ಪಂದ, ಗಗನಯಾತ್ರಿಗಳು, ಉಪಗ್ರಹ ಮುಂತಾದವುಗಳನ್ನು ರಕ್ಷಿಸಿ ಭೂಮಿಗೆ ಹಿಂತಿರುಗಿ ತರುವ 1968ರ ಒಪ್ಪಂದ, ಬಾಹ್ಯಾಕಾಶದ ಭಗ್ನಾವಶೇಷಗಳಿಂದ ಭೂಮಿಯ ಮೇಲೆ ಸಂಭವಿಸುವ ಹಾನಿಯ ಹೊಣೆಗಾರಿಕೆಯನ್ನು ನಿರ್ಧರಿಸುವ 1972ರ ಒಪ್ಪಂದ,



ವಿವಿಧ ದೇಶಗಳು ಬಾಹ್ಯಾಕಾಶಕ್ಕೆ ಕಳುಹಿಸುವ ಎಲ್ಲ ಉಪಗ್ರಹ ಮತ್ತು ಇನ್ನಿತರ ನೌಕೆಗಳ ಸಮಸ್ತ ವಿವರಗಳನ್ನೂ ವಿಶ್ವಸಂಸ್ಥೆಯಲ್ಲಿ ದಾಖಲಿಸಬೇಕಾದ 1975ರ ಒಪ್ಪಂದ, ಚಂದ್ರ ಮತ್ತು ಇತರ ಆಕಾಶಕಾಯಗಳ ಅನ್ವೇಷಣೆಗೆ ಸಂಬಂಧಿಸಿದ 1979ರ ಒಪ್ಪಂದದಂತಹವುಗಳ ಜೊತೆಗೆ ಅನೇಕ ಮಾರ್ಗದರ್ಶಿ ಸೂತ್ರಗಳೂ ಇವೆ. ಆದರೆ ಇವುಗಳಲ್ಲಿ ಅನೇಕ ಕುಂದುಕೊರತೆಗಳಿವೆ. ಉದಾಹರಣೆಗೆ, 1967ರ ಬಾಹ್ಯಾಕಾಶ ಒಪ್ಪಂದದಲ್ಲಿ, ಬಾಹ್ಯಾಕಾಶದಲ್ಲಿ ಏಕಕಾಲದಲ್ಲಿ ಸಾಮೂಹಿಕ ವಿನಾಶದ ಅಸ್ತ್ರಗಳ (ವೆಪನ್ಸ್ ಆಫ್ ಮಾಸ್ ಡಿಸ್ಟ್ರಕ್ಷನ್) ಬಳಕೆಗೆ ನಿಷೇಧವಿದೆ. ಆದರೆ ಉಳಿದ ಅಸ್ತ್ರಗಳ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ. ಹೀಗಾಗಿ, ಇಂದಿನ ತಂತ್ರಜ್ಞಾನದ ಬಳಕೆ ತಂದೊಡ್ಡಿರುವ ಸವಾಲುಗಳ ನಿರ್ವಹಣೆಗೆ ಹೊಸ ಒಪ್ಪಂದಗಳು ಅಥವಾ ಈಗಿರುವ ಒಪ್ಪಂದಗಳನ್ನು ಆಧರಿಸಿದ ಕಾನೂನುಗಳಿಗೆ ತಿದ್ದುಪಡಿಗಳು ಅಗತ್ಯ.

2010 ಮತ್ತು 2019ರ ವಿಶ್ವಸಂಸ್ಥೆಯ ಮಾರ್ಗದರ್ಶಿ ಸೂತ್ರಗಳನ್ನು ಶಕ್ತಿಯುತವಾದ ಕಾನೂನುಗಳನ್ನಾಗಿ ಪರಿವರ್ತಿಸುವ ಪ್ರಯತ್ನಗಳು ನಡೆಯುತ್ತಿದ್ದರೂ ಬಲಿಷ್ಠ ದೇಶಗಳಿಗೆ ಅದರಲ್ಲಿ ಹೆಚ್ಚಿನ ಆಸಕ್ತಿಯಿಲ್ಲ. ಜಾಗತಿಕ ಶಾಂತಿ, ಪರಸ್ಪರ ನಂಬಿಕೆ, ಮಾನವೀಯ ಮೌಲ್ಯಗಳಂಥ ಉದಾರ ತತ್ವಗಳ ಮೇಲೆ ರೂಪುಗೊಂಡಿರುವ ಒಪ್ಪಂದಗಳು ಹಿಂದಿನ ಐದು ದಶಕಗಳಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಯಾವುದೇ ರೀತಿಯ ಅವಘಡಗಳಾಗದಂತೆ ನೋಡಿಕೊಂಡಿರುವುದರಿಂದ ಯಾವ ಹೊಸ ಒಪ್ಪಂದ, ಕಾನೂನುಗಳ ಅಗತ್ಯವೂ ಇಲ್ಲವೆಂಬುದು ಅವುಗಳ ವಾದ. ಆದರೆ ಇದು ಬರೀ ಕಣ್ಣೊರೆಸುವ ತಂತ್ರಗಾರಿಕೆ.

ಬಾಹ್ಯಾಕಾಶ ಕಾಯಗಳು ಅಪಾರ ಸಂಪನ್ಮೂಲಗಳ ಆಗರ. ಅವುಗಳಲ್ಲಿರುವ ವಾಣಿಜ್ಯೋದ್ದೇಶದ ಅವಕಾಶಗಳೂ ಅಪಾರ. 2026ರ ಅಂತ್ಯದ ವೇಳೆಗೆ ಈ ಕಾಯಗಳಲ್ಲಿ ಗಣಿಗಾರಿಕೆ ಪ್ರಾರಂಭವಾಗಲಿದೆ ಎನ್ನುವುದು ಪ್ಲಾನೆಟರಿ ರಿಸೋರ್ಸಸ್ ಸಂಸ್ಥೆಯ ಅಧ್ಯಕ್ಷ ಕ್ರಿಸ್ ಲ್ಯೂವಿಕಿ ಅವರ ನಿರೀಕ್ಷೆ. ಆದರೆ ಈಗಿರುವ ಬಾಹ್ಯಾಕಾಶ ಒಪ್ಪಂದಗಳಿಂದ ಆಕಾಶಕಾಯಗಳಲ್ಲಿನ ಗಣಿಗಾರಿಕೆಯ ಬಗ್ಗೆ ಸ್ಪಷ್ಟ ಕಾನೂನಾತ್ಮಕ ನಿಲುವು ತಳೆಯುವುದು ಅಸಾಧ್ಯವೆಂಬುದು 'ಸ್ಪೇಸ್ ಲಾ' ಪರಿಣತರ ಅಭಿಪ್ರಾಯ. ಆದರೆ ಈ ಕಾನೂನುಗಳು ರೂಪುಗೊಳ್ಳುವವರೆಗೂ ದೇಶಗಳು ಕಾಯುವ ಸ್ಥಿತಿಯಲ್ಲಿ ಇರುವುದು ಅನುಮಾನ. ಭಾರತದ ಪ್ರಜ್ಞಾನ್ ರೋವರ್ ಕಳುಹಿಸಿರುವ ಮಾಹಿತಿಗಳ ವಿಶ್ಲೇಷಣೆ ದಕ್ಷಿಣ ಧ್ರುವದ ನೆಲದಲ್ಲಿ ಸಲ್ಫರ್, ಅಲ್ಯೂಮಿನಿಯಂ, ಕ್ಯಾಲ್ಸಿಯಂ, ಕಬ್ಬಿಣ, ಟೈಟಾನಿಯಂ, ಕ್ರೋಮಿಯಂ ಮತ್ತು ಆಕ್ಸಿಜನ್‌ಗಳು ಇರುವುದನ್ನು ಖಚಿತಪಡಿಸಿದೆ. ಚೀನಾ, ರಷ್ಯಾಗೆ ಚಂದ್ರನ ದಕ್ಷಿಣ ಧ್ರುವದ ಅನ್ವೇಷಣೆ ಅತಿ ಹೆಚ್ಚಿನ ಆದ್ಯತೆಯ ವಿಷಯವಾಗಿದೆ. 2025ರಲ್ಲಿ ಅಮೆರಿಕದ ಗಗನಯಾತ್ರಿಗಳು ದಕ್ಷಿಣ ಧ್ರುವದಲ್ಲಿ ಇಳಿದು, ಮಂಜುಗಡ್ಡೆಗಾಗಿ ಶೋಧ ನಡೆಸಲಿದ್ದಾರೆ.

ಈ ಎಲ್ಲ ಧಾವಂತದ ಚಟುವಟಿಕೆಗಳ ನಡುವೆ, ಆ. 28ರಿಂದ ಸೆ. 1ರವರೆಗೆ ಜಿನೀವಾದಲ್ಲಿ ನಡೆದ ವಿಶ್ವಸಂಸ್ಥೆಯ ಕಾರ್ಯತಂಡದ ನಾಲ್ಕನೆಯ ಹಾಗೂ ಅಂತಿಮ ಸಭೆ, 'ರೂಢಿಗತ ಸಂಪ್ರದಾಯ, ನಿಯಮಗಳು ಮತ್ತು ಜವಾಬ್ದಾರಿಯುತ ನಡವಳಿಕೆ'ಯ ಆಧಾರದ ಮೇಲೆ, ಬಾಹ್ಯಾಕಾಶ ಪೈಪೋಟಿಯಿಂದ ಆಗುವ ಅನಾಹುತಗಳನ್ನು ತಪ್ಪಿಸುವ ಕರಡು ಒಪ್ಪಂದವನ್ನು ಸಿದ್ಧಗೊಳಿಸಿದೆ ಎಂಬ ವರದಿ ಬಂದಿದೆ.

ಚುರುಮುರಿ



ರಾಜಕೀಯದ ಬೇಳೆ

• ಲಿಂಗರಾಜು ಡಿ.ಎಸ್.

'ನಿಮ್ಮ ರಾಜಕೀಯದ ಬೇಳೆ ಬೇಯಿಸಬ್ಯಾಡಿ ಅಂತ ಪರಮಣ್ಣ ಅಂದದಲ್ಲಾ, ಇದ್ಯಾವುದ್ಲಾ ರಾಜಕೀಯದ ಬೇಳೆ' ಅಂತ ಯಂಟಪ್ಪಣ್ಣ ಸೋಜುಗಪಟ್ಟಿತು.

'ರಾಜಕೀಯದ ಬೇಳೆ ಜನಕ್ಕೆ ಉಪಯೋಗಕ್ಕೆ ಬರಲ್ಲ ಕನಣ್ಣೆ. ರಾಜಕೀಯದೋರು ಅವರ ತೆವಲಿಗೋಸ್ಕರ ಈ ಬೇಳೆ ಬೇಯಿಸ್ತರೆ' ಅಂದ್ರು ತುರೇಮಣೆ.

'ಒಂದೆರಡು ಉದಾಹರಣೆ ಹೇಳ್ಲಾ' ಅಂತು ಯಂಟಪ್ಪಣ್ಣ.

'ನೋಡಣ್ಣೆ, ವರ್ಸದ ಹಿಂದೆ ಮೇಕೆದಾಟು ಯೋಜನೆ ಮಾಡಲೇಬೇಕು ಅಂತ ತೊಡೆ ತಟ್ಟಿ ಬೇಳೆ ಬೇಯಿಸ್ಕಂದರು. ಈಗ ಕಾವೇರಿ ಹೆಸರಲ್ಲಿ ಮೂರೂ ಪಕ್ಸಗಳು ತಮ್ಮ ರಾಜಕೀಯದ ಬೇಳೆ ಬೇಯೋಕೆ ಇಟ್ಟವೆ' ತುರೇಮಣೆ ಉದಾಹರಣೆ ಕೊಟ್ಟರು.

'ನಮ್ಮದು ಡಬಲ್ ಎಂಜಿನ್ ಸರ್ಕಾರ ಅಂತ ಕಮಲದವು ಅಂತಿದ್ವಲ್ಲ, ಅದೂವೆ ರಾಜಕೀಯದ ಬೇಳೆ ಅಂತೀರ?' ಅಂದ ಚಂದ್ರು.

'ಹ್ಞೂಂ ಕಯ್ಯಾ, ಜನದ ಮುಂದೆ ಇವರ ಬೇಳೆ ಬೇಯಲಿಲ್ಲ. ಅದುಕ್ಕೇ ಈಗ ಕುಮಾರಣ್ಣನ್ನ ಬೇಳೆ ಬೇಯಿಸಕ್ಕೆ ಬುಟ್ಟವ್ರೆ' ಅಂದರು ತುರೇಮಣೆ.

'ಈಗೇನು ಜಾತಿ ಬೇಳೆ, ಡಿಸಿಎಂ ಬೇಳೆ, ಮೈತ್ರಿ ಬೇಳೆ, ಬಂಡಾಯದ ಬೇಳೆ, ಲಂಚದ ಬೇಳೆ, ಡ್ರಗ್ಸ್ ಬೇಳೆ, ಪರ್ಸೆಂಟೇಜ್ ಬೇಳೆ, ಹಿಂಸಾಚಾರದ ಬೇಳೆ ಅಂತೆಲ್ಲಾ ಸ್ಯಾನೆ ಬ್ರಾಂಡವೆ. ಆದರೆ ಗಾಂಧಿ ಬ್ರಾಂಡ್ ಬೇಳೆ ಮಾತ್ರ ಯಾರಿಗೂ ಬೇಕಾಗಿಲ್ಲ' ಅಂದೆ ನಾನು.

'ರಾಜಕೀಯದ ಬೇಳೆ ಬೀಜ ಎಲ್ಲಿ ಸಿಕ್ತದೋ?' ಯಂಟಪ್ಪಣ್ಣ ಕೇಳಿತು.

'ಅಣ್ಣೆ, ಇದು ಸೀಡ್‌ಲೆಸ್ ಬೇಳೆ! ರಾಜಕೀಯದ ಪಡಸಾಲೇಲಿ ಕೈಯಲ್ಲಿ ನಾಟಿ ಮಾಡಿ, ಕಮಲ ಬ್ರಾಂಡ್ ಗೊಬ್ಬರ ಹಾಕಿ, ತೆನೆ ಕೂದು ಜನದ ಬೆನ್ನ ಮ್ಯಾಲೆ ಕಣ ಮಾಡ್ತರೆ' ತುರೇಮಣೆ ವಿವರಿಸಿದರು.

'ರಾಜಕೀಯದ ಬೇಳೆ ಬೇಯಿಸೋ ಐನ್ ಗಿರಾಕಿ ಯಾರ್‍ಲಾ?' ಯಂಟಪ್ಪಣ್ಣ ಮಿಲಿಯನ್ ಡಾಲರ್ ಪ್ರಶ್ನೆ ಕೇಳಿತು.

'ಲೋಪಸಭೆ ಎಲೆಕ್ಷನ್ ಗೇಮಲ್ಲಿ ರಾಜಕೀಯದ ಬೇಳೆ ಬೇಯ್ಸೋ ಮೇಳ ನಡಿತದಲ್ಲ ಆಗ ನಿಮಗೇ ಅರ್ಥಾತದೆ' ತುರೇಮಣೆ ವಡಪು ಹಾಕಿ ತಲೆಕೆಡಿಸಿದರು.

ಸಂಗತ

ಮೀಸಲಾತಿ: ಉದ್ದೇಶ ಮುಕ್ಕಾಗದಿರಲಿ

ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದ ಜನಪ್ರತಿನಿಧಿಗಳು ಅಸ್ಪೃಶ್ಯತೆ, ಅಪಮಾನ, ತಳ ಸಮುದಾಯದವರ ಮೇಲಿನ ದೌರ್ಜನ್ಯವನ್ನು ಧೈರ್ಯದಿಂದ ತಡೆಯಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ತಾಲ್ಲೂಕು ಮಟ್ಟದ ಗ್ರಾಮೀಣ ಪ್ರೌಢಶಾಲೆಗಳ ಕ್ರೀಡಾಕೂಟವು ಗ್ರಾಮವೊಂದರಲ್ಲಿ ಈಚೆಗೆ ನಡೆಯಿತು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಸಂಜೆ ಹಮ್ಮಿಕೊಳ್ಳಲಾಗಿತ್ತು. ಅದು ಸರ್ಕಾರಿ ಕಾರ್ಯಕ್ರಮವಾಗಿದ್ದರಿಂದ ಶಿಷ್ಟಾಚಾರದ ಪ್ರಕಾರ, ಸ್ಥಳೀಯ ಗ್ರಾಮ ಪಂಚಾಯಿತಿ ಅಧ್ಯಕ್ಷರು ಬಹುಮಾನ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು ಎಂದು ಆಮಂತ್ರಣ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ಪಂಚಾಯಿತಿ ಅಧ್ಯಕ್ಷರು ಸಮಯಕ್ಕೆ ಸರಿಯಾಗಿ ಕಾರ್ಯಕ್ರಮಕ್ಕೆ ಬಂದರು. ಅದೇ ಸಮಯಕ್ಕೆ ಸ್ಥಳೀಯ ಶ್ರೀಮಂತ ಯುವಕರೊಬ್ಬರು ಕಾರಿನಲ್ಲಿ ಬಂದರು. ಸಂಘಟಕರು ಓಡಿಹೋಗಿ ಅವರಿಗೆ ಪುಷ್ಪಗುಚ್ಛ ಕೊಟ್ಟು ಸ್ವಾಗತಿಸಿದರು. ಅವರು ನೇರವಾಗಿ ವೇದಿಕೆ ಏರಿ, ಅಧ್ಯಕ್ಷರ ಕುರ್ಚಿಯ ಮೇಲೆ ವಿರಾಜಮಾನರಾದರು. ಸಭೆಯ ನಿರೂಪಕರು, ಆ ಯುವಕರೇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಬಹುಮಾನ ವಿತರಣೆ ಕೂಡ ಮಾಡುತ್ತಾರೆ ಎಂದು ಪ್ರಕಟಿಸಿದರು. ಪಂಚಾಯಿತಿ ಅಧ್ಯಕ್ಷರು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೆ ಪ್ರೇಕ್ಷಕರ ಸಾಲಿನಲ್ಲಿ ಕುಳಿತಿದ್ದರು. ಕಾರ್ಯಕ್ರಮದ ನಂತರ ಕಲ್ಯಾಣ ಮಂಟಪದಲ್ಲಿ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿಗೆ ಬಂದ ಪಂಚಾಯಿತಿ ಅಧ್ಯಕ್ಷರು ಕಲ್ಯಾಣ ಮಂಟಪದ ಒಳಗೆ ಬರಲಿಲ್ಲ. ಹೊರಗೇ ಕುಳಿತು ಉಪಾಹಾರ ಸೇವಿಸಿದರು.

ಸಂವಿಧಾನಬದ್ಧವಾಗಿ ಅಧ್ಯಕ್ಷನಾಗಿ ಆಯ್ಕೆಯಾದ ವ್ಯಕ್ತಿ ಇಡೀ ಗ್ರಾಮದ ಆತ್ಮಗೌರವದ ಸಂಕೇತವಾಗಿ ನಿಲ್ಲಬೇಕು. ಆದರೆ ಗ್ರಾಮದ ಪ್ರಥಮ ಪ್ರಜೆಯಾದ ಈ ಅಧ್ಯಕ್ಷ ಹೀಗೆ ತೆವಳುತ್ತ ಸಾಗುವುದನ್ನು ಕಂಡು ಬೇಸರವಾಯಿತು. ವಿಚಾರಿಸಿದಾಗ, ಅವರು ಪರಿಶಿಷ್ಟ ಜಾತಿಗೆ ಸೇರಿದವರು, ಬಹಳ ವಿನಯವಂತರು ಎಂದು ಕೆಲವರು ಸಬೂಬು ಹೇಳಿದರು. ಇನ್ನು ಕೆಲವರು, ಈ ಶ್ರೀಮಂತ ಯುವಕ ಪಂಚಾಯಿತಿ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿ ಸೋಲು ಅನುಭವಿಸಿದ್ದಾರೆ, ಅವರಿಗೆ ಕೊಟ್ಟಷ್ಟು ಗೌರವದ ನಯಾ ಪೈಸೆಯಷ್ಟನ್ನೂ ಅಧ್ಯಕ್ಷರಿಗೆ ಕೊಡುತ್ತಿಲ್ಲ ಎಂದು ಅಸಮಾಧಾನ ತೋಡಿಕೊಂಡರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮೀಸಲು ಸ್ಥಾನಗಳ ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರನ್ನು ನಡೆಸಿಕೊಳ್ಳುವ ರೀತಿ ಅನೇಕ ಕಡೆ ಇದೇ ಮಾದರಿಯಲ್ಲಿದೆ. ಈ ಜನಪ್ರತಿನಿಧಿಗಳು ಬಲಿಷ್ಠರ ಪ್ರಭಾವಕ್ಕೆ ಹೆದರಿ ಅವರು ಹೇಳಿದಂತೆ ಕೇಳುತ್ತಾರೆ, ಅವರು ಬೆರಳು ಇಟ್ಟು ತೋರಿಸಿದಲ್ಲಿ ಸಹಿ ಹಾಕುತ್ತಾರೆ ಎಂಬ ಮಾತಿನಲ್ಲಿ ಸತ್ಯಾಂಶ ಇಲ್ಲದಿಲ್ಲ. ಕೆಲವು ಹಳ್ಳಿಗಳ ಹೋಟೆಲ್‌ಗಳಲ್ಲಿ ಪ್ರತ್ಯೇಕ ಆಸನ, ತಾಟು, ಲೋಟ ಇಟ್ಟಿರುವುದನ್ನು ಕಾಣಬಹುದು. ಕೆಲವೆಡೆ ಸಲೂನುಗಳು, ಮಠ ಮಂದಿರಗಳಲ್ಲಿ ದಲಿತರಿಗೆ ಪ್ರವೇಶ ಸಿಗುತ್ತಿಲ್ಲ. ಪರಂಪರೆಯ ನೆಪದಲ್ಲಿ ಅನಿಷ್ಟ ಆಚರಣೆಗಳು ಹಾಗೆಯೇ ಉಳಿದುಕೊಂಡಿವೆ.

ಮೀಸಲು ಕ್ಷೇತ್ರದಿಂದ ಲೋಕಸಭೆ, ವಿಧಾನಸಭೆಗೆ ಆಯ್ಕೆಯಾದ ಕೆಲವು ಸದಸ್ಯರು ಈಗಲೂ ತಮ್ಮ ಮತಕ್ಷೇತ್ರದ ಗ್ರಾಮಗಳ ದೇವಸ್ಥಾನಗಳನ್ನು ಪ್ರವೇಶಿಸುವುದಿಲ್ಲ. ಹೊರಗೆ ಕಟ್ಟೆಯ ಮೇಲೆ ಕುಳಿತು ಬರುತ್ತಾರೆ. ಜನರ ಭಾವನೆಗೆ ಧಕ್ಕೆ ಆಗಬಾರದು ಎಂದು ತಾವು ಹೀಗೆ ನಡೆದುಕೊಳ್ಳುತ್ತಿರುವುದಾಗಿ ಬಹಿರಂಗವಾಗಿ ಹೇಳುತ್ತಾರೆ. ಇದನ್ನು ವಿನಯವಂತಿಕೆ, ಗ್ರಾಮಸ್ಥರ ಧಾರ್ಮಿಕ ಭಾವನೆಗಳಿಗೆ ನೀಡುವ ಗೌರವ ಎಂದೆಲ್ಲ ಅರ್ಥೈಸುವುದು ನೋವಿನ ಸಂಗತಿ.

ತಳ ಸಮುದಾಯಕ್ಕೆ ಸೇರಿದ ಗ್ರಾಮ ಪಂಚಾಯಿತಿಯ ಜನಪ್ರತಿನಿಧಿಗಳು ತಗ್ಗಿಬಗ್ಗಿ ನಡೆಯುವುದಕ್ಕೆ ಅವರ ಬಡತನ ಮುಖ್ಯ ಕಾರಣ. ಅವರಿಗೆ ಆರ್ಥಿಕ ಭದ್ರತೆ ಒದಗಿಸಬೇಕು, ಸೂಕ್ತ ಶಿಕ್ಷಣ ಕೊಡಬೇಕು ಮತ್ತು ಆತ್ಮವಿಶ್ವಾಸ ಹೆಚ್ಚಿಸುವ, ಕೀಳರಿಮೆ ಕಳೆದುಕೊಳ್ಳುವ ರೀತಿಯಲ್ಲಿ ಅವರಿಗೆ ನಿರಂತರವಾಗಿ ತರಬೇತಿ ನೀಡಬೇಕು ಎಂದು ವಕೀಲ ರವೀಂದ್ರ ಹಳಿಂಗಳಿ ತಮ್ಮ 'ಇಂಡಿಯನ್ ವಿಲೇಜಸ್' ಕೃತಿಯಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ.

ಆರ್ಥಿಕವಾಗಿ ದುರ್ಬಲರಾದ ದಲಿತರಿಗೆ ಅಧಿಕಾರಕ್ಕಿಂತ ಬದುಕು ಮುಖ್ಯವಾಗುತ್ತದೆ. ಶ್ರೀಮಂತರ ಬಳಿ ದುಡಿದು ಬದುಕುವ ಅವರಿಗೆ ಶ್ರೀಮಂತ ವ್ಯಕ್ತಿ ಸದಾ ಸಾಹುಕಾರನಾಗಿ ನಿಲ್ಲುತ್ತಾನೆ. ದಲಿತರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಉನ್ನತಿ ಸಾಧಿಸುವ ಕಾರ್ಯಕ್ರಮಗಳನ್ನು ರೂಪಿಸುವುದು ಅವಶ್ಯ ಎಂದು ಬಹಳಷ್ಟು ಸಮೀಕ್ಷೆಗಳು ಹೇಳಿವೆ.



ಸ್ವಾತಂತ್ರ್ಯಪೂರ್ವದಲ್ಲಿ ಸಂಸ್ಥಾನಿಕರ ಆಡಳಿತದಲ್ಲಿಯೂ ಮೀಸಲಾತಿ ಜಾರಿಯಲ್ಲಿತ್ತು. ಜಮಖಂಡಿ ಸಂಸ್ಥಾನದಲ್ಲಿ ಮೀಸಲು ಕ್ಷೇತ್ರದಿಂದ ಕಾಂಬಳೆ ಎಂಬುವರು ಆಯ್ಕೆಯಾಗಿದ್ದರು. ಅವರಿಗೆ ಸಚಿವ ಸ್ಥಾನ ನೀಡಲಾಗಿತ್ತು. ವಿಶೇಷ ಸಂದರ್ಭಗಳಲ್ಲಿ ಅರಮನೆಯಲ್ಲಿ ಏರ್ಪಡಿಸಲಾಗುತ್ತಿದ್ದ ಭೋಜನ ಕೂಟದಲ್ಲಿ ಅವರು ಭಾಗವಹಿಸದಂತೆ ನೋಡಿಕೊಳ್ಳಲು ಅವರನ್ನು ದೂರದೂರಿಗೆ ಪ್ರವಾಸಕ್ಕೆ ಕಳುಹಿಸಲಾಗುತ್ತಿತ್ತು ಎಂಬ ಸಂಗತಿಯನ್ನು ಸಂಸ್ಥಾನದಲ್ಲಿ ಮುಖ್ಯಮಂತ್ರಿಯಾಗಿ, ಮುಂದೆ ರಾಷ್ಟ್ರಪತಿಯಾಗಿದ್ದ ಬಿ.ಡಿ.ಜತ್ತಿ ಅವರು ತಮ್ಮ ಆತ್ಮಕಥೆ 'ಐ ಆ್ಯಮ್ ಮೈ ಓನ್ ಮಾಡೆಲ್' ಕೃತಿಯಲ್ಲಿ ದಾಖಲಿಸಿದ್ದಾರೆ. ಮೀಸಲಾತಿಯ ಘನ ಉದ್ದೇಶವನ್ನು ಅದರ ಆರಂಭಕಾಲದಿಂದಲೂ ಹೊಸಕಿಹಾಕುವ ಪ್ರಯತ್ನಗಳು ನಡೆಯುತ್ತಿವೆ ಎಂಬುದಕ್ಕೆ ಈ ಸಂಗತಿ ನಿದರ್ಶನವಾಗಿದೆ.

ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದ ಜನಪ್ರತಿನಿಧಿಗಳು ಅಸ್ಪೃಶ್ಯತೆ, ಅಪಮಾನ, ತಳ ಸಮುದಾಯದವರ ಮೇಲೆ ನಡೆಯುವ ದೌರ್ಜನ್ಯ ತಡೆಯುವ ಕೆಲಸವನ್ನು ಧೈರ್ಯವಾಗಿ ಮಾಡಬೇಕು. ಹಾಗೆಯೇ ಸಂವಿಧಾನಬದ್ಧವಾಗಿ ತಮಗೆ ದೊರೆತ ಅಧಿಕಾರದ ಅವಕಾಶವನ್ನು ವಿವೇಚನೆ, ಜಾಣ್ಮೆ ಮತ್ತು ಮನುಷ್ಯಪ್ರೀತಿಯಿಂದ ಚಲಾಯಿಸಬೇಕು.

ವಾಚಕರ ವಾಣಿ

ಆದರ್ಶದ ನಡೆ ಒಂದು ದಿನಕ್ಕಲ್ಲ

ಗಾಂಧಿ ಜಯಂತಿ ಬಂತೆಂದರೆ ಸಾಕು ಗಾಂಧಿ ತತ್ವಗಳನ್ನು ಸ್ಮರಿಸಲು ನಮ್ಮಲ್ಲಿ ಪೈಪೋಟಿ ಉಂಟಾಗುತ್ತದೆ. ಆ ದಿನ ಮದ್ಯ ಮಾರಾಟ ಬಂದ್ ಮಾಡಿಸಿ ನಶಾಮುಕ್ತ ಆಂದೋಲನ ನಡೆಸಲಾಗುತ್ತದೆ ಮತ್ತು ಅದನ್ನು ಆ ದಿನಕ್ಕಷ್ಟೇ ಸೀಮಿತ ಮಾಡಲಾಗುತ್ತದೆ. ಇನ್ನು ಗಾಂಧಿ ಜಯಂತಿ ಪ್ರಯುಕ್ತ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಅದರ ಫೋಟೊ ತೆಗೆದುಕೊಂಡು ಜಾಲತಾಣಗಳಲ್ಲಿ ಹರಿಯಬಿಡುವುದು ಸಾಮಾನ್ಯವಾಗಿದೆ. ಆದರೆ ಇಂತಹ ಕಾರ್ಯಗಳಿಂದ ಗಾಂಧೀಜಿ ಕಂಡ ಕನಸು ನನಸಾಗುವುದೇ? ಮಹಾನ್ ವ್ಯಕ್ತಿಗಳ ಜಯಂತಿಯಂದು ಮಾತ್ರ ಅವರ ಗುಣಗಾನ ಮಾಡಿ, ಶ್ರಮದಾನ, ಸ್ವಚ್ಛತೆ, ಮದ್ಯದ ಅಂಗಡಿ ಬಂದ್ ಮಾಡುವುದು, ಮರುದಿನವೇ ಎಲ್ಲಾ ಯಥಾಪ್ರಕಾರ ಪ್ರಾರಂಭವಾಗುವುದು ಇವೆಲ್ಲ ಆ ಮಹಾತ್ಮರಿಗೆ ಮಾಡುವ ಅವಮಾನವೇ ಸರಿ.

ನಮ್ಮ ಸುತ್ತಮುತ್ತಲಿನ ಪರಿಸರವನ್ನು ನಾವು ಸ್ವಚ್ಛವಾಗಿ ಇಟ್ಟುಕೊಂಡರೆ, ಕನಿಷ್ಠ ವಾರಕ್ಕೆ ಒಮ್ಮೆಯಾದರೂ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡರೆ, ಗಾಂಧೀಜಿ ಕಂಡ ಕನಸು ನನಸಾಗುವುದಕ್ಕೆ ಒಂದಿಷ್ಟಾದರೂ ನೆರವಾಗಬಹುದೇನೊ.

ಭೀಮಾಶಂಕರ ಎಸ್. ಝಳಕಿ, ಕಲಬುರಗಿ

ಗೂಗಲ್ ಮ್ಯಾಪ್ ಬಳಕೆ: ಇರಲಿ ವಿವೇಚನೆ

ಕೇರಳದಲ್ಲಿ ಕಾರು ನದಿಗೆ ಉರುಳಿ ಇಬ್ಬರು ಯುವ ವೈದ್ಯರು ಸಾವಿಗೀಡಾಗಿರುವ ಸುದ್ದಿ (ಪ್ರ.ವಾ., ಅ. 2) ತಿಳಿದು ದುಃಖವಾಯಿತು. ಆದರೆ ಗೂಗಲ್ ಮ್ಯಾಪ್ ತೋರಿಸಿದ ದಾರಿಯಲ್ಲಿ ತಿರುವು ತೆಗೆದುಕೊಂಡ ಕಾರಣ ಕಾರು ನದಿಗೆ ಉರುಳಿತು ಎಂದು ಕಾರಿನಲ್ಲಿದ್ದವರು ತಿಳಿಸಿರುವುದು ಅತಿಶಯವೇ ಸರಿ. ಗೂಗಲ್ ಮ್ಯಾಪ್ ದೇಶದ ಅತಿದೊಡ್ಡ ದಾರಿದೀಪವಾಗಿದೆ. ಅದು ಎಂಥವರಿಗೂ ರಸ್ತೆ ತೋರಿಸುವ ಒಂದು ಉತ್ತಮ ಸಾಧನ. ಯಾವುದೇ ಊರಿಗೆ ಹೋದರೂ ರಸ್ತೆಯ ಪರಿಚಯವಿಲ್ಲದಿದ್ದರೂ ಆ ಊರಿನ ನಿಖರವಾದ ಜಾಗಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಆದರೆ ಅದು ತೋರುವ ದಾರಿಯಲ್ಲಿ ನೋಡಿಕೊಂಡು ಸರಿಯಾಗಿ ಚಾಲನೆ ಮಾಡಿದಲ್ಲಿ ನಮ್ಮ ಗುರಿಯನ್ನು ಮುಟ್ಟುವುದು ಸುಲಭ.

ರಸ್ತೆಬದಿಯಲ್ಲಿ ಹೊಳೆ, ಗುಂಡಿ, ಕೊರಕಲು ಇದ್ದಲ್ಲಿ ಅದನ್ನು ಸರಿಯಾಗಿ ನೋಡಿಕೊಂಡು ನಿಧಾನವಾಗಿ ಕಾರು ಚಲಾಯಿಸಿದ್ದರೆ ಆ ಯುವ ವೈದ್ಯರು ಬದುಕುತ್ತಿದ್ದರೇನೊ. ಇಷ್ಟಕ್ಕೂ ಗೂಗಲ್ ಮನುಷ್ಯರು ಮಾಡಿದ ಒಂದು ಸಾಧನವಲ್ಲವೇ? ಅಕಸ್ಮಾತ್ ತಪ್ಪು ನಡೆದಿರಬಹುದು. ಆದರೂ ಕಾರು ಚಲಾಯಿಸುವಾಗ ರಸ್ತೆಯ ಇಕ್ಕೆಲಗಳನ್ನೂ ಪರಿಶೀಲಿಸಿ ಓಡಿಸುವುದು ಚಾಲಕನ ಕರ್ತವ್ಯವಲ್ಲವೇ?

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಹೆಸರು ಬದಲಾವಣೆ ತರವಲ್ಲ

ಬಿಬಿಎಂಪಿ ವಾರ್ಡ್ ಪುನರ್ವಿಂಗಡಣೆಯ ಅಂತಿಮ ಪಟ್ಟಿ ಹಾಗೂ ಅಧಿಸೂಚನೆಯಂತೆ 225 ವಾರ್ಡ್‌ಗಳ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ಕೆಲವು ವಾರ್ಡ್‌ಗಳ ಹೆಸರನ್ನು ಬದಲಾಯಿಸಲಾಗಿದೆ. ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದ ಕೂಡಲೇ ರಸ್ತೆ ಅಥವಾ ಬಡಾವಣೆಯ ಹೆಸರನ್ನು ಬದಲಾಯಿಸುವುದು ಒಂದು ಪ್ರತಿಷ್ಠೆಯ ವಿಚಾರವಾಗಿದೆ. ಆದರೆ ದಶಕಗಳಿಂದ ಜನಮಾನಸದಲ್ಲಿ ಉಳಿದು, ಬೆಳೆದುಬಂದಿರುವ ಹೆಸರುಗಳನ್ನು ಬದಲಾಯಿಸುವುದು ಸರ್ವಥಾ ಸಲ್ಲದು. ಉದಾಹರಣೆಗೆ, ಬೆಂಗಳೂರಿನ ಬಸವನಗುಡಿ ಕ್ಷೇತ್ರದಲ್ಲಿ ಬಸವನಗುಡಿ ವಾರ್ಡನ್ನು ದೊಡ್ಡ ಗಣಪತಿಯೆಂದೂ, ಹನುಮಂತನಗರ ವಾರ್ಡನ್ನು ಗವಿ ಗಂಗಾಧರೇಶ್ವರ, ಗಿರಿನಗರ ವಾರ್ಡನ್ನು ಸ್ವಾಮಿ ವಿವೇಕಾನಂದ ವಾರ್ಡ್ ಎಂಬುದಾಗಿಯೂ ಬದಲಾಯಿಸಲಾಗಿದೆ. ಇದರ ಔಚಿತ್ಯವಾದರೂ ಏನು ಎಂಬುದು ಅರ್ಥವಾಗುವುದಿಲ್ಲ.

ಪ್ರತಿಯೊಂದು ಹೆಸರಿಗೂ ತನ್ನದೇ ಆದ ಇತಿಹಾಸವಿರುತ್ತದೆ ಎಂಬುದನ್ನು ಆಯಾ ಕಾಲಕ್ಕೆ ಅಧಿಕಾರಕ್ಕೆ ಬರುವ ಪಕ್ಷಗಳು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಉತ್ತರಪ್ರದೇಶ ಸರ್ಕಾರವು ಬಿ.ಆರ್.ಅಂಬೇಡ್ಕರ್ ಅವರ ಹೆಸರಿಗೆ ಇತ್ತೀಚೆಗೆ ಸರ್ಕಾರಿ ದಾಖಲೆಗಳಲ್ಲಿ 'ರಾಮ್‌ಜಿ' ಎಂದು ಸೇರಿಸುವ ಮೂಲಕ ವಿವಾದದ ಬಿರುಗಾಳಿ ಎಬ್ಬಿಸಿತ್ತು. ಅದಕ್ಕೆ ಸರ್ಕಾರ ನೀಡಿದ ಕಾರಣ, ಬಿ.ಆರ್.ಅಂಬೇಡ್ಕರ್ ಅವರ ಹೆಸರು 'ಭೀಮರಾವ್ ರಾಮ್‌ಜಿ ಅಂಬೇಡ್ಕರ್' ಎಂದಾಗಿರುವುದರಿಂದ ನಾವು ಅದನ್ನೇ ಸೇರಿಸಿದ್ದೇವೆ ಎಂದಾಗಿತ್ತು. ಇದೀಗ ನಮ್ಮ ರಾಜ್ಯ ಸರ್ಕಾರವೂ ಇದೇ ಹಾದಿ ತುಳಿಯದೆ, ಐತಿಹಾಸಿಕ ಹೆಸರುಗಳನ್ನು ಹಾಗೆಯೇ ಉಳಿಸುವ ಮೂಲಕ ಅವುಗಳ ಘನತೆ ಕಾಪಾಡಬೇಕು.

ಟಿ.ಉಮಾಶಂಕರ್, ಬೆಂಗಳೂರು

ಗಾಂಧಿ ತಾತನಲ್ಲಿ...

ನೋಟುಗಳಲ್ಲಿ ನಗುವ
ನಿಮ್ಮ ಚಿತ್ರ
ಅಂಚೆಚೀಟಿಯಲ್ಲಿನ
ನಿಮ್ಮ ನೋಟ
ಸರ್ಕಾರಿ ಕಚೇರಿಗಳ
ಗೋಡೆಗಳ ಮೇಲಿನ
ಚೌಕಟ್ಟಿನ ಮುಗುಳ್ನಗೆ
ಎಂದಿಗೂ ಮಾಸದಿರಲಿ,
ನಿಮ್ಮೊಳಗಿನ ತತ್ವ
ಕಿಂಚಿತ್ತಾದರೂ
ನಮ್ಮೆದೆಗೆ ಬರಲಿ
ನಮ್ಮ ಮಕ್ಕಳ ಮನಕೂ
ದೇಶಭಕ್ತಿ ತಾಕಲಿ.

ಸಂತೆಬೆನ್ನೂರು ಫೈಜ್ನಟ್ರಾಜ್
ಸಂತೆಬೆನ್ನೂರು

ಶಾಸ್ತ್ರಿ ಸ್ಮರಣೆ ಮರೆತಿದ್ದೇಕೆ?

ಅಹಿಂಸೆಯನ್ನೇ ಪ್ರತಿಪಾದಿಸಿ ನಮಗೆ ಸ್ವಾತಂತ್ರ್ಯ ತಂದುಕೊಡಲು ಶ್ರಮಿಸಿದ ಮಹಾತ್ಮ ಗಾಂಧಿ ಅವರ ಜನ್ಮದಿನವನ್ನು ಹಾಗೂ ಪ್ರಾಮಾಣಿಕತೆಯನ್ನೇ ಆದರ್ಶವಾಗಿ ಇಟ್ಟುಕೊಂಡು ಮಹತ್ವದ ಘಟ್ಟದಲ್ಲಿ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ ಲಾಲ್ ಬಹದ್ದೂರ್ ಶಾಸ್ತ್ರಿ ಅವರ 120ನೇ ಜನ್ಮದಿನವನ್ನು ಆಚರಿಸಿದ್ದೇವೆ. ಆದರೆ ಗಾಂಧಿಯವರ ಜನ್ಮದಿನಾಚರಣೆಗೆ ಕೊಟ್ಟಷ್ಟು ಮಹತ್ವವನ್ನು ಶಾಸ್ತ್ರಿಯವರ ಜನ್ಮದಿನಾಚರಣೆಗೆ ನೀಡದಿರುವುದು ವಿಷಾದನೀಯ.

ಕೇಂದ್ರ ಸರ್ಕಾರ ಕೆಲವು ಪತ್ರಿಕೆಗಳಿಗೆ ನೀಡಿರುವ ಜಾಹೀರಾತಿನಲ್ಲಾದರೂ ಕನಿಷ್ಠಪಕ್ಷ ಶಾಸ್ತ್ರಿಯವರನ್ನು ಕಾಣಿಸಿದೆ. ಆದರೆ ರಾಜ್ಯ ಸರ್ಕಾರ ನೀಡಿರುವ ಪುಟಗಟ್ಟಲೆ ಜಾಹೀರಾತಿನಲ್ಲಿ ಗಾಂಧಿ ಸ್ಮರಣೆಗಿಂತ ತಮ್ಮ ಐದು ಗ್ಯಾರಂಟಿಗಳ ಪ್ರಚಾರಕ್ಕೇ ಹೆಚ್ಚು ಮಹತ್ವ ನೀಡಲಾಗಿದೆ. ಪ್ರಾಮಾಣಿಕತೆಗೆ ಮಾದರಿಯಾದ ಶಾಸ್ತ್ರಿಯವರನ್ನು ನೆನೆಯದೆ ಸರ್ಕಾರ ಮರೆಯಿತೇಕೆ?

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಿರಿಯರಿಗಿಲ್ಲ ಆರ್ಥಿಕ ಭದ್ರತೆ

● ಸುಕೃತ ಎಸ್.

ಒಂದು ಅಥವಾ ಎರಡು ಮಕ್ಕಳಿರುವ ಕುಟುಂಬ. ಕೊನೆಯ ಪಕ್ಷ ಒಂದು ಗಂಡು ಮಗುವಿದ್ದರೆ ಹೇಗೋ ಕೊನೆಗಾಲ ಕಳೆಯುತ್ತದೆ. ಎರಡೂ ಹೆಣ್ಣಾದರೆ ಕೊನೆಗಾಲಕ್ಕೆ ಕಷ್ಟ (ಈ ತಪ್ಪು ಕಲ್ಪನೆಗಳು ಭಾರತೀಯ ಕುಟುಂಬ ವ್ಯವಸ್ಥೆಯ ಸಮಸ್ಯೆ). ಇರುವ ಮಗ ಹೇಗೆ ನೋಡಿಕೊಳ್ಳುತ್ತಾನೋ ತಿಳಿಯದು. ಸೊಸೆ ಹೇಗೋ ಏನೋ. ಮಕ್ಕಳಿಂದ ದೂರ ಇರುವುದು ಭಾವನಾತ್ಮಕವಾಗಿ ಆಗದ ವಿಷಯ. ಒಂದೊಮ್ಮೆ ದೂರ ಇದ್ದರೂ ವೃದ್ಧಾಪ್ಯದ ಕಾರಣದಿಂದ ತಲೆದೋರುವ ಹಲವು ಸಮಸ್ಯೆಗಳು. ಈ ಹಂತದಲ್ಲಿ ಒಂದೊಮ್ಮೆ ಗಂಡನೋ ಹೆಂಡತಿಯೋ ತೀರಿ ಹೋದರೆ ವೃದ್ಧಾಪ್ಯದಲ್ಲಿ ಜೀವನ ಸಾಗಿಸುವುದು ಯುದ್ಧವೇ ಸರಿ. ಹೇಗೋ ಗಂಡ ಜೀವನ ನಡೆಸಿಯಾನು. ಆದರೆ, ಹೆಂಡತಿ ಒಬ್ಬಳೇ ಆದರಂತೂ ಪರಾವಲಂಬನೆಯೇ ದಾರಿ. ಹೀಗೆ ಸಾಲು ಸಾಲು ಆತಂಕಗಳು ವೃದ್ಧರದು. ಈ ಆತಂಕಕ್ಕೆ ಜಾತಿ, ಧರ್ಮದ ಮಿತಿಗಳಿಲ್ಲ. ಇಂತಹ ಕೌಟುಂಬಿಕ ಸಮಸ್ಯೆಗಳ ಮಧ್ಯೆಯೇ ಭಾರತದಲ್ಲಿ 2050ರ ಹೊತ್ತಿಗೆ ವೃದ್ಧರ ಸಂಖ್ಯೆ ಹೆಚ್ಚಾಗಲಿದೆ ಎಂದಿದೆ ವಿಶ್ವಸಂಸ್ಥೆ.

ವೃದ್ಧಾಪ್ಯದ ಬಹುದೊಡ್ಡ ಸಮಸ್ಯೆ ಭಾವನಾತ್ಮಕವಾದುದು. ಈ ಸಮಸ್ಯೆಯಿಂದ ಹೊರಬರುವ ದಾರಿ, ಸ್ವಾವಲಂಬನೆ ಮಾತ್ರ. ಈ ಕಾರಣಕ್ಕಾಗಿಯೇ ಭಾರತ ಸರ್ಕಾರವು ಹಲವು ಯೋಜನೆಗಳನ್ನು ಜಾರಿ ಮಾಡಿದೆ. 60 ವರ್ಷ ಮೇಲ್ಪಟ್ಟವರಿಗಾಗಿಯೇ ವೃದ್ಧಾಪ್ಯ ವೇತನ ನೀಡುವಂಥ ಪಿಂಚಣಿ ಯೋಜನೆಯನ್ನು ಸರ್ಕಾರ ಜಾರಿಯಲ್ಲಿಟ್ಟಿದೆ. 60 ವರ್ಷ ಮೇಲ್ಪಟ್ಟವರಿಗಾಗಿ ಹಲವು ಅನುಕೂಲಗಳನ್ನೂ ಸರ್ಕಾರ ಮಾಡಿಕೊಡುತ್ತದೆ. ಹಲವು ವಿನಾಯಿತಿ, ರಿಯಾಯಿತಿಗಳೂ ಇವೆ. ವೃದ್ಧಾಶ್ರಮ ವ್ಯವಸ್ಥೆಯನ್ನು ಕೂಡ ಸರ್ಕಾರ ಮಾಡುತ್ತಿದೆ. ಭಾರತದಲ್ಲಿ ವೃದ್ಧರಿಗಾಗಿಯೇ ಇರುವ ಪಿಂಚಣಿಯೂ ಸೇರಿದಂತೆ ಹಲವು ಯೋಜನೆಗಳ ಬಗ್ಗೆ, ಹಲವು ಅನುಕೂಲಗಳ ಬಗ್ಗೆ ವಿಶ್ವಸಂಸ್ಥೆಯ ವರದಿಯಲ್ಲಿ ಚರ್ಚಿಸಲಾಗಿದೆ. ಭಾರತದ ಯೋಜನೆಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನೂ ಅದು ಆಡಿದೆ. ಆದರೂ, ಯೋಜನೆಗಳ ರೂಪುರೇಷೆಗಳು ಇನ್ನಷ್ಟು ವಿಸ್ತಾರಗೊಳ್ಳುವ ಹಾಗೂ ಇನ್ನಷ್ಟು ಜನರಿಗೆ, ಮುಖ್ಯವಾಗಿ ಗ್ರಾಮೀಣ ಪ್ರದೇಶದವರಿಗೆ ತಲುಪುವಂತಾಗಬೇಕು ಎಂದೂ ಸಲಹೆ ನೀಡಿದೆ.

ಈ ಹಿನ್ನೆಲೆಯಲ್ಲಿ, 60 ವರ್ಷ ಮೇಲ್ಪಟ್ಟವರು ಸ್ವಾವಲಂಬಿಯಾಗಲು ಅವರಿಗೆ ವೃದ್ಧಾಪ್ಯ ವೇತನ ನೀಡುತ್ತಿರುವ ಕೇಂದ್ರ ಸರ್ಕಾರದ 'ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ' (ಐಜಿಎನ್‌ಒಎಪಿಎಸ್) ಹಾಗೂ ಕರ್ನಾಟಕ ಸರ್ಕಾರದ 'ಸಂಧ್ಯಾ ಸುರಕ್ಷಾ ಯೋಜನೆ'ಗೆ ಇಂದಿನ ಚರ್ಚೆಯನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ಭಾರತದ ವೃದ್ಧರಲ್ಲಿ ಲಿಂಗಾನುಪಾತ

ಪುರುಷರು : ಮಹಿಳೆಯರು	ವರ್ಷ
1000:1033	2011
1000:1061	2021
1000:1078	2031




'ವೃದ್ಧವಿಧವೆಯರ ಸಂಖ್ಯೆ ಏರಲಿದೆ'

ವೃದ್ಧರು ಹೆಚ್ಚಾಗುತ್ತಿದ್ದಾರೆ ಎಂದಾದರೆ, ವೃದ್ಧವಿಧವೆಯರ ಸಂಖ್ಯೆ ಹೆಚ್ಚಾಗುತ್ತಿದೆ ಎಂದೇ ಅರ್ಥ. ಇದಕ್ಕೆ ವೈಜ್ಞಾನಿಕ ಕಾರಣಗಳಿವೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರ ಜೀವಿತಾವಧಿ ನಿರೀಕ್ಷೆಯು ಹೆಚ್ಚಿರುತ್ತದೆ. ಈ ಬಗ್ಗೆ ವಿಶ್ವಸಂಸ್ಥೆಯ ವರದಿಯಲ್ಲೂ ಉಲ್ಲೇಖ ಇದೆ.

ಭಾರತದಂಥ ಕೌಟುಂಬಿಕ ವ್ಯವಸ್ಥೆಯಲ್ಲಿ ವೃದ್ಧವಿಧವೆಯರ ಸವಾಲುಗಳು ಹಲವು. ಗಂಡ ಇಲ್ಲದಿರುವುದು, ಮಕ್ಕಳು ದೂರದ ನಗರಗಳಲ್ಲಿ ಬದುಕು ಕಟ್ಟಿಕೊಂಡಿರುವುದು, ತಾನು ಏಕಾಂಗಿಯಾಗಿ ಗ್ರಾಮೀಣ ಭಾಗಗಳಲ್ಲಿ ಮನೆಯಲ್ಲಿ ಇರುವುದು ವೃದ್ಧವಿಧವೆಯ ಆತಂಕಗಳನ್ನು ಹೆಚ್ಚಿಸುತ್ತವೆ. ಆದ್ದರಿಂದ ಈ ಬಗ್ಗೆ ಸರ್ಕಾರವು ಹೆಚ್ಚಿನ ಗಮನ ಹರಿಸಬೇಕು ಎಂದು ವರದಿಯಲ್ಲಿ ಒತ್ತಿ ಹೇಳಲಾಗಿದೆ. ವೃದ್ಧವಿಧವೆಯರಲ್ಲಿ ಹೆಚ್ಚಿನ ಸಂಖ್ಯೆಯವರು ಅನಕ್ಷರಸ್ಥರೇ ಆಗಿರುತ್ತಾರೆ. ಉದ್ಯೋಗ ಮಾಡಿಲ್ಲದೇ ಇರುವವರೇ ಆಗಿರುತ್ತಾರೆ. ಹೆಚ್ಚಿನವರು ಆಸ್ತಿಯನ್ನೂ ಹೊಂದಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅವರಿಗೆ ಯಾವುದೇ ಆದಾಯ ಇರುವುದಿಲ್ಲ. ಇವರು ಪೂರ್ತಿಯಾಗಿ ಕುಟುಂಬದ ಮೇಲೆ ಅವಲಂಬಿತರಾಗಿರುತ್ತಾರೆ.

32% 2011ರ ಜನಗಣತಿಯ ಪ್ರಕಾರ ಭಾರತದಲ್ಲಿ 60 ವರ್ಷ ಮೇಲ್ಪಟ್ಟವರಲ್ಲಿ ವಿಧವೆಯರ ಪ್ರಮಾಣ

ಏರಲಿದೆ ವೃದ್ಧರ ಸಂಖ್ಯೆ



ಹಲವು ಸಮಸ್ಯೆಗಳು

ಈ ಎರಡೂ ಯೋಜನೆಗಳ ಬಗ್ಗೆ ಕರ್ನಾಟಕ ಸರ್ಕಾರವು 2020ರಲ್ಲಿ 'ಕರ್ನಾಟಕದ ಹಿರಿಯ ನಾಗರಿಕರ ಸ್ಥಿತಿಗತಿ ಅಧ್ಯಯನ' ವರದಿಯೊಂದನ್ನು ಸಿದ್ಧಪಡಿಸಿತ್ತು. ಯೋಜನೆಗಳಲ್ಲಿ ಇರುವ ಅನನುಕೂಲಗಳನ್ನು ವರದಿಯಲ್ಲಿ ಚರ್ಚಿಸಲಾಗಿತ್ತು ಮತ್ತು ಅವುಗಳಿಗೆ ಸೂಕ್ತ ಪರಿಹಾರವನ್ನೂ ಸೂಚಿಸಲಾಗಿತ್ತು.

ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆಯಲ್ಲಿ 60ರಿಂದ 64 ವರ್ಷದ ಒಳಗಿನ ವೃದ್ಧರಿಗೆ ಪ್ರತಿ ತಿಂಗಳು ₹600 ನೀಡಲಾಗುತ್ತದೆ. 65–80 ವರ್ಷಗಳವರಿಗೆ ₹1,000 ನೀಡಲಾಗುತ್ತದೆ. ಈ ಯೋಜನೆಯ ಫಲಾನುಭವಿಗಳು ಬಡತನ ರೇಖೆಗಿಂತ ಕಡಿಮೆ ಇರುವವರು ಆಗಿದ್ದಾರೆ. ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ 65 ವರ್ಷ ಮೇಲ್ಪಟ್ಟವರಿಗೆ ಪ್ರತಿ ತಿಂಗಳಿಗೆ ₹1,200 ನೀಡಲಾಗುತ್ತದೆ. ಯೋಜನೆಯಲ್ಲಿ ಬಿಪಿಎಲ್ ಹಾಗೂ ಎಪಿಎಲ್ ಚೀಟಿ ಹೊಂದಿರುವವರೂ ಸೇರಿದ್ದಾರೆ.

- ಎರಡೂ ಯೋಜನೆಗಳಲ್ಲಿ ನೀಡಲಾಗುವ ವೇತನದ ಮೊತ್ತ ತೀರಾ ಕಡಿಮೆ ಎನ್ನುವುದು ಹಲವು ಫಲಾನುಭವಿಗಳ ಅಸಮಾಧಾನ. ಇಂದಿನ ಜೀವನಮಟ್ಟಕ್ಕೆ ಹೋಲಿಸಿಕೊಂಡರೆ ಈ ಮೊತ್ತವು ತೀರಾ ಕಡಿಮೆಯಾಗಿದೆ. ವೃದ್ಧಾಪ್ಯದಲ್ಲಿ ಸಹಜವಾಗಿ ಬರುವ ಕಾಯಿಲೆಗಳಿಗೆ, ಅಗತ್ಯವಿರುವ ಔಷಧಗಳಿಗೂ ಈ ಮೊತ್ತ ಸಾಕಾಗುವುದಿಲ್ಲ. ಜೊತೆಗೆ ಅರ್ಜಿಯ ಜೊತೆಯಲ್ಲಿ ಕೆಲವು ಶುಲ್ಕಗಳನ್ನೂ ಪಾವತಿಸಬೇಕಾಗಿದೆ. ಇದು ಕೂಡ ಹೊರೆಯೇ ಆಗಿದೆ
- ಅರ್ಜಿ ಸಲ್ಲಿಸುವುದಕ್ಕೆ ವೃದ್ಧರು ತಾಲ್ಲೂಕು ಕಚೇರಿಗೆ ಬರಬೇಕಾಗುತ್ತದೆ. ವರದಿಯಲ್ಲಿ ಅಂದಾಜಿಸಿರುವ ಪ್ರಕಾರ ವೃದ್ಧರು ತಾಲ್ಲೂಕು ಕಚೇರಿಗೆ ತಲುಪಲು ಸುಮಾರು 6 ಕಿ.ಮೀ ದೂರ (ಸರಾಸರಿ) ಪ್ರಯಾಣಿಸಬೇಕಾಗುತ್ತದೆ. ಪದೇ ಪದೇ ಇಷ್ಟು ದೂರ ಪ್ರಯಾಣಿಸುವುದು ಅವರಿಗೆ ತ್ರಾಸದಾಯಕವಾಗಿದೆ
- ಈ ಯೋಜನೆಗಳ ಹೆಚ್ಚಿನ ಫಲಾನುಭವಿಗಳು ಅನಕ್ಷರಸ್ಥರು ಮತ್ತು ಗ್ರಾಮೀಣರು. ಜೊತೆಗೆ, ಈ ಯೋಜನೆಗಳ ಅರ್ಜಿಗಳು ಉದ್ದುದ್ದ ಇರುತ್ತವೆ. ಇದನ್ನು ಭರ್ತಿ ಮಾಡುವಲ್ಲಿ ವೃದ್ಧರು ಕಷ್ಟ ಎದುರಿಸುತ್ತಿದ್ದಾರೆ. ಅರ್ಜಿಯಲ್ಲಿ ನಮೂದಿಸಲೇಬೇಕಾಗಿರುವ ತಮ್ಮ ಹುಟ್ಟಿನ ದಿನಾಂಕವು ಹಲವು ವೃದ್ಧರಿಗೆ ನೆನಪಿನಲ್ಲಿ ಇರುವುದಿಲ್ಲ. ಇದು ಕೂಡ ಬಹುದೊಡ್ಡ ಸಮಸ್ಯೆಯಾಗಿದೆ
- ವೃದ್ಧರು ಒಬ್ಬೊಬ್ಬರೇ ಜೀವಿಸುತ್ತಿದ್ದರೆ ಅವರ ಸಂಕಷ್ಟಗಳ ಸಾಲು ಹೆಚ್ಚು ಬೆಳೆಯುತ್ತದೆ. ಒಂಟಿಯಾಗಿ ಅರ್ಜಿ ಸಲ್ಲಿಸಲು ಹೋಗಬೇಕಾಗುತ್ತದೆ. ನಿಗದಿತ ದಿನಾಂಕದ ಒಳಗೆ ಅವರಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ, ಈ ಎಲ್ಲ ಹಂತದಲ್ಲಿ ಮೊಬೈಲ್ ಸಂಖ್ಯೆಯನ್ನು ನಮೂದಿಸಬೇಕಾಗುತ್ತದೆ. ಮೊಬೈಲ್ ಇಲ್ಲದ ವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ
- ಈ ಯೋಜನೆಗಳು ಇರುವ ಬಗ್ಗೆ ಗ್ರಾಮೀಣ ಭಾಗದವರಲ್ಲಿ ಅರಿವಿನ ಕೊರತೆ ಇದೆ. ಟಿ.ವಿ., ರೇಡಿಯೊ ಸೇರಿದಂತೆ ಸಮೂಹ ಮಾಧ್ಯಮಗಳಲ್ಲಿ ಈ ಬಗ್ಗೆ ಹೆಚ್ಚಿನ ಪ್ರಚಾರ ನೀಡದಿರುವುದು ತೊಡಕಾಗಿದೆ. ಒಂದೊಮ್ಮೆ ಹಣ ಪಡೆದುಕೊಳ್ಳುತ್ತಿದ್ದರೂ ಈ ವೇತನ ಯಾಕಾಗಿ ಬರುತ್ತಿದೆ, ಯಾರು ನೀಡುತ್ತಿದ್ದಾರೆ ಎನ್ನುವ ಮಾಹಿತಿಯೂ ಹಲವರಿಗೆ ಇಲ್ಲ
- ವೃದ್ಧಾಪ್ಯ ವೇತನವು ಅರ್ಜಿ ಸಲ್ಲಿಸಿದ ಕೂಡಲೇ ಎಲ್ಲಾ ಫಲಾನುಭವಿಗಳಿಗೂ ದೊರೆಯುತ್ತಿಲ್ಲ. ಕೆಲವರಿಗೆ ಮುಂದಿನ ತಿಂಗಳೇ ಬರುತ್ತದೆ. ಕೆಲವರಿಗೆ ಎರಡು ತಿಂಗಳ ನಂತರ ಬರುತ್ತದೆ, ಇನ್ನೂ ಕೆಲವರಿಗೆ ಮೂರು ತಿಂಗಳ ನಂತರ ಬರುತ್ತದೆ. ಹಣವು ನೇರ ಬ್ಯಾಂಕ್ ಖಾತೆಗೆ ಬರುತ್ತದೆ. 80 ವರ್ಷ ಮೇಲ್ಪಟ್ಟವರಿಗೆ ಬ್ಯಾಂಕ್‌ಗಳಿಗೆ ತೆರಳಲು ಕಷ್ಟವಾಗುತ್ತಿದೆ. ಜೊತೆಗೆ, ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಕಾರ್ಡ್ ಜೋಡಿಸಬೇಕಾಗಿದೆ. ಈ ಹಂತದಲ್ಲಿಯೇ ಹಲವು ಸಮಸ್ಯೆಗಳು ಎದುರಾಗುತ್ತಿವೆ

ಶಿಫಾರಸುಗಳು

- ಸೇವಾ ಸಿಂಧು ಸೇವೆಯನ್ನು ಉಚಿತ ಮಾಡಬೇಕು. ಜೊತೆಗೆ, ಅರ್ಜಿಗಳನ್ನು ಗ್ರಾಮ ಪಂಚಾಯಿತಿಗಳಲ್ಲೂ ನೀಡುವಂತಾಗಬೇಕು. ಈ ಯೋಜನೆಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕು. ಹೀಗೆ ಮಾಡುವುದರಿಂದ ಯೋಜನೆಗಳಲ್ಲಿ ಇರುವ ಹಲವು ಸಮಸ್ಯೆಗಳು ನಿವಾರಣೆಯಾಗುತ್ತವೆ
- ಅರ್ಜಿಯ ನಮೂನೆಗಳು ಸರಳವಾಗಿರಬೇಕು. ವೃದ್ಧಾಪ್ಯ ವೇತನವು ಮನೆ ಬಾಗಿಲಿಗೆ ತಲುಪುವಂತಾಗಬೇಕು
- ಯೋಜನೆಗಳ ಬಗ್ಗೆ ಅಥವಾ ಯೋಜನೆಯ ಜಾರಿಯ ಬಗ್ಗೆ ದೂರುಗಳಿದ್ದರೆ ಅದನ್ನು ನೀಡಲು ಸೂಕ್ತ ವ್ಯವಸ್ಥೆ ರೂಪಿಸಬೇಕು. ಹಿರಿಯ ನಾಗರಿಕರ ಸಂಖ್ಯೆ ಬಗ್ಗೆ ನಿಖರ ಮಾಹಿತಿ ದೊರೆಯುವಂತಾಗಬೇಕು. ಇದು ನೀತಿ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ
- ವೃದ್ಧಾಪ್ಯ ವೇತನದ ಹಣವನ್ನು ಕನಿಷ್ಠ ₹2,000ಕ್ಕೆ ಹೆಚ್ಚಿಸಬೇಕು ಮತ್ತು ಈ ಹಣವನ್ನು ಮೂರು ನಾಲ್ಕು ವರ್ಷಗಳಿಗೊಮ್ಮೆ ಏರಿಸಬೇಕು

ಸಿನಿ ಬಿಟ್ಸ್


ಬೆಳ್ಳಿತೆರೆಗೆ ತಾಂಡವ್ ರಾಮ್



ಭರತ್

ಕಿರುತೆರೆಯಲ್ಲಿ 'ಜೋಡಿಹಕ್ಕಿ' ಧಾರಾವಾಹಿ ಮೂಲಕ ಮಿಂಚಿದ ನಟ ತಾಂಡವ್ ರಾಮ್ ಇದೀಗ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. 'ಮುಗಿಲ್‌ಪೇಟೆ' ಸಿನಿಮಾದ ನಿರ್ದೇಶಕ ಭರತ್ ಎಸ್. ನಾವುಂದ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಅಡಚಣೆಗಾಗಿ ಕ್ಷಮಿಸಿ' ಎಂಬ ಸಿನಿಮಾ ಮೂಲಕ ನಿರ್ದೇಶಕನಾಗಿ ಚಂದನವನಕ್ಕೆ ಕಾಲಿಟ್ಟ ಭರತ್ ಅವರು ಬಳಿಕ ಮನೋರಂಜನ್ ರವಿಚಂದ್ರನ್ ನಟನೆಯ 'ಮುಗಿಲ್‌ಪೇಟೆ' ಸಿನಿಮಾ ಮಾಡಿದ್ದರು. ಕೌಟುಂಬಿಕ ಕಥಾಹಂದರದ ಈ ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ದೊರಕಿತ್ತು. ಇದೀಗ ಭರತ್ ತಮ್ಮ ಮೂರನೇ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. 'ಜೋಡಿಹಕ್ಕಿ' ಮೂಲಕ ಗುರುತಿಸಿಕೊಂಡಿರುವ ತಾಂಡವ್ ರಾಮ್ ಈ ಸಿನಿಮಾದಲ್ಲಿ ನಾಯಕನಾಗಿ ನಟಿಸಲಿದ್ದು, ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಬಹುತಾರಾಗಣದ ಈ ಸಿನಿಮಾ ನಿರ್ಮಾಣವಾಗಲಿದೆ. ಎ ಕ್ಯೂಬ್ ಫಿಲ್ಮ್ಸ್ ಸಂಸ್ಥೆಯ ಅಡಿಯಲ್ಲಿ ಅದ್ದೂರಿಯಾಗಿ ಸಿನಿಮಾ ನಿರ್ಮಾಣವಾಗಲಿದೆ ಎಂದಿದೆ ಚಿತ್ರತಂಡ.



ತಾಂಡವ್ ರಾಮ್

ಗರ್ಭಿಣಿಯ ಕಥೆ ಹೊತ್ತ ತಾರಿಣಿ



ಸಿದ್ದು ಪೂರ್ಣಚಂದ್ರ

'ದಾರಿ ಯಾವುದಯ್ಯಾ ವೈಕುಂಠಕೆ', 'ಬ್ರಹ್ಮ ಕಮಲ' ಸಿನಿಮಾಗಳ ನಿರ್ದೇಶಕ ಸಿದ್ದು ಪೂರ್ಣಚಂದ್ರ ಅವರ ಹೊಸ ಪ್ರಾಜೆಕ್ಟ್ 'ತಾರಿಣಿ' ಬಿಡುಗಡೆಗೆ ಸಜ್ಜಾಗುತ್ತಿದೆ. ಚಿತ್ರದ ಫಸ್ಟ್ ಲುಕ್ ಇತ್ತೀಚೆಗೆ ಬಿಡುಗಡೆಯಾಯಿತು.

ಗರ್ಭಿಣಿಯೋರ್ವಳ ಕಥೆ ಹೊತ್ತ ಈ ಸಿನಿಮಾದಲ್ಲಿ ಮಮತ ರಾಹುತ್ ನಾಯಕಿಯಾಗಿ ನಟಿಸಿದ್ದು, ಮಮತ ಅವರು ಗರ್ಭಿಣಿಯಾಗಿರುವಾಗಲೇ ಚಿತ್ರದ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದು ವಿಶೇಷ. ಹೆಣ್ಣು ಭ್ರೂಣ ಹತ್ಯೆ ಮಾಡಬೇಡಿ ಎಂಬ ಸಂದೇಶವಿರುವ ಈ ಚಿತ್ರವನ್ನು ಮಮತ ಅವರ ಪತಿ ಸುರೇಶ್ ಕೊಟ್ಯಾನ್ ಚಿತ್ರಾಪು ಅವರು ಶ್ರೀಗಜನಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಿಸಿದ್ದಾರೆ.

'ನಾನು ಏಳು ತಿಂಗಳ ಗರ್ಭಿಣಿ ಇದ್ದಾಗ ಈ ಚಿತ್ರದ ಚಿತ್ರೀಕರಣದಲ್ಲಿ ಪಾಲ್ಗೊಂಡೆ. ಕೆಲವು ದಿನಗಳ ಚಿತ್ರೀಕರಣ ನಂತರ ನನಗೆ ಅವಧಿಗೂ ಕೆಲವು ದಿನಗಳ ಮುಂಚೆಯೇ ಹೆರಿಗೆ ಆಯಿತು. ಅನಂತರ ಕೂಡ ನಾನು ಚಿತ್ರೀಕರಣದಲ್ಲಿ ಭಾಗಿಯಾದೆ. ನಮ್ಮ ನಿರ್ಮಾಣದ ಮೊದಲ ಚಿತ್ರವಾಗಿರುವುದರಿಂದ ಹೆಚ್ಚಿನ ಜವಾಬ್ದಾರಿ ನನ್ನ ಮೇಲಿತ್ತು' ಎನ್ನುತ್ತಾರೆ ಮಮತಾ. 'ತಾರಿಣಿ'ಯಾಗಿ ಮಮತ ನಟಿಸಿದ್ದು, ನಾಯಕನಾಗಿ ರೋಹಿತ್ ಅಭಿನಯಿಸಿದ್ದಾರೆ. ಭವಾನಿ ಪ್ರಕಾಶ್, ಸುಧಾ ಪ್ರಸನ್ನ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.




ಮಮತ ರಾಹುತ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'**ಮಣಿಪುರದ** ಕುಕಿ ಬುಡಕಟ್ಟು ಸಮುದಾಯದ ಜನರ ಸಂಘಟನೆಯಾದ ಐಟಿಎಲ್‌ಎಫ್ ಈಚೆಗೆ ಒಂದು ಪ್ರಕಟಣೆ ಹೊರಡಿಸಿದೆ. ಅದರಲ್ಲಿ, 'ನಾವು ಸೆಪ್ಟೆಂಬರ್ 30ರಿಂದ ಅಕ್ಟೋಬರ್ 2ರವರೆಗೆ ಅಫೀಮು ಹೂವಿನ ಮಾರಾಟ ಮೇಳವನ್ನು ಆಯೋಜಿಸುತ್ತಿದ್ದೇವೆ. ಎಲ್ಲಾ ಕುಕಿ ಜನರೂ ಬಂದು ಮೇಳದಲ್ಲಿ ಭಾಗವಹಿಸಬೇಕು. ಹೂವು, ಹೂಗುಚ್ಛ, ಹೂದಾನಿಗಳನ್ನು ಖರೀದಿಸುವ ಮೂಲಕ ನಮ್ಮ ಆರ್ಥಿಕತೆಯನ್ನು ಉತ್ತೇಜಿಸಬೇಕು. ಈ ಸಂಕಷ್ಟ ಕಾಲದಲ್ಲಿ ನಮ್ಮ ಹೋರಾಟಕ್ಕೆ ನೆರವಾಗಬೇಕು' ಎಂದು ಆ ಪ್ರಕಟಣೆಯಲ್ಲಿ ಕರೆ ನೀಡಲಾಗಿದೆ. ಕುಕಿ ಜನರು ಬಹಿರಂಗವಾಗಿಯೇ ಅಫೀಮು ಮಾರಾಟ ಮಾಡುತ್ತಿದ್ದಾರೆ' ಎಂಬ ವಿವರಣೆ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಇದು ಸುಳ್ಳು ಸುದ್ದಿ.


Indigenous Tribal Leaders' Forum (ITLF)
Conglomerate of Recognized Tribes in Lamka, Outer Manipur

File No: ITLF-PR-202355 — Tuesday, 26 September, 2023

PRESS RELEASE

It is hereby informed to the general public in Lamka that, a "Mega Poppy Flower Sale" will be organised by the Indigenous Tribal Leaders' Forum (ITLF) in Peace Ground, Tuibuang, Lamka. In the said event, bouquet, saplings, dried preserved poppy flowers etc., will be available including flower vases of various designs.

The said event will be organised from 30th of September to 2nd of October, 2023. Hence, everyone is requested to come and participate in the said event to boost our economy of selling poppy flowers. In these hard times, we hope that this event will also serve as a source of income for giving out support and assistance to the inmates in the relief camps of Kuki Zo community.

For further details, kindly contact on: 8826532299 or visit the office of Indigenous Tribal Leaders' Forum (ITLF), Lamka, Outer Manipur.

'**ಇಂತಹ** ಪ್ರಕಟಣೆ ಬಗ್ಗೆ ಐಟಿಎಲ್‌ಎಫ್ ಪದಾಧಿಕಾರಿಗಳನ್ನು ವಿಚಾರಿಸಲಾಯಿತು. ತಾವು ಅಂತಹ ಯಾವುದೇ ಪ್ರಕಟಣೆ ಹೊರಡಿಸಿಲ್ಲ ಎಂಬುದನ್ನು ಐಟಿಎಲ್‌ಎಫ್ ದೃಢಪಡಿಸಿತು. ಜತೆಗೆ ಐಟಿಎಲ್‌ಎಫ್‌ನ ಜಾಲತಾಣವನ್ನು ಪರಿಶೀಲಿಸಲಾಯಿತು. ಅಲ್ಲಿ ಅಂತಹ ಯಾವುದೇ ಪ್ರಕಟಣೆ ಇರಲಿಲ್ಲ. ಐಟಿಎಲ್‌ಎಫ್‌ನ ಜಾಲತಾಣದಲ್ಲಿ ಇದ್ದ ಇತ್ತೀಚಿನ ಪ್ರಕಟಣೆ ಅಂದರೆ ಸೆಪ್ಟೆಂಬರ್ 25ರದ್ದು. ಆದರೆ ಪೋಸ್ಟ್‌ಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ಪ್ರಕಟಣೆಯಲ್ಲಿ ಇರುವ ದಿನಾಂಕ ಸೆಪ್ಟೆಂಬರ್ 26. ಐಟಿಎಲ್‌ಎಫ್‌ನ ಎಲ್ಲಾ ಅಧಿಕೃತ ಪ್ರಕಟಣೆಗಳಲ್ಲಿ ಅದರ ಲೋಗೊವಿನ ವಾಟರ್‌ಮಾರ್ಕ್ ಇದೆ. ಆದರೆ, ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ಪ್ರಕಟಣೆಯ ಪತ್ರದಲ್ಲಿ ಅಂತಹ ವಾಟರ್‌ಮಾರ್ಕ್ ಇಲ್ಲ. ಹೀಗಾಗಿ ಇದು ನಕಲಿ ಪ್ರಕಟಣೆ' ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಅಕ್ಟೋಬರ್ 3, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಚತುರ್ಥಿ ಗಂ. 06-12 ನಂತರ ಪಂಚಮಿ ಗಂ. 29-33 ನಕ್ಷತ್ರ: ಕೃತ್ತಿಕಾ ಗಂ. 18-04 ಯೋಗ: ವಜ್ರ ಗಂ. 08-17 ಕರಣ: ಬಾಲವ ಗಂ. 06-12, ಕನ್ಯಾ ಮಾಸದ 16 ನೇ ದಿನ, ಮಳೆನಕ್ಷತ್ರ: ಹಸ್ತ 2. ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-23 ಸೂರ್ಯಾಸ್ತ : 06-16, ಮುಸ್ಲಿಂ ದಿನಾಂಕ : 17 ರಬಿಉಲ್ಲಾವಲ್
ದಿನ ವಿಶೇಷ : ಈದ್-ಇ-ಮೌಲಾದ್ (ಮುಸ್ಲಿಂ)
ಅದೃಷ್ಟ ಸಂಖ್ಯೆ : 6, 5

ಮೇಷ: ಜನಗಳ ಕೆಟ್ಟ ದೃಷ್ಟಿಯ ಫಲವಾಗಿ ಜತೆಯಲ್ಲಿ ಸೋಮಾರಿತನ ಸೇರಿಕೊಂಡು ಉದ್ಯೋಗ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ಎದುರಾಗಬಹುದು. ವ್ಯಾಪಾರದಲ್ಲಿ ಉಂಟಾಗುವ ಪೈಪೋಟಿಯನ್ನು ಸಮರ್ಥವಾಗಿ ಎದುರಿಸುವಿರಿ.

ವೃಷಭ: ಲಾಭ ನಿರೀಕ್ಷೆಯಿಲ್ಲದೆ ಮಾಡಿದ ಕೆಲಸದಲ್ಲೂ ಅನಿರೀಕ್ಷಿತ ಲಾಭವಾಗಿರುವುದರಿಂದ ಸಂತೋಷ ಆಗುವುದು. ಶಿಕ್ಷಕ ವೃತ್ತಿಯಲ್ಲಿ ಸಾಧನೆ ತೋರಿ ಪ್ರಶಸ್ತಿ ಪಡೆಯುವಂತಾಗಲಿದೆ. ಸುಗಂಧ ದ್ರವ್ಯದ ಮಾರಾಟದಲ್ಲಿ ಲಾಭ ಸಿಗಲಿದೆ.

ಮಿಥುನ: ವಿದ್ಯಾರ್ಥಿಗಳು ತಮ್ಮ ವಿಶೇಷ ಅಧ್ಯಯನ ಕ್ಷೇತ್ರಗಳಲ್ಲಿ ಮುಂದುವರಿಯಲು ಬಹಳಷ್ಟು ಅವಕಾಶಗಳು ಸೃಷ್ಟಿಯಾಗುತ್ತವೆ. ಮನಸ್ಸಿನಲ್ಲಿ ಹಲವು ದಿನಗಳಿಂದ ಕಾಡುತ್ತಿರುವ ಸಮಸ್ಯೆಗಳಿಗೆ ಇಂದು ಉತ್ತರ ಸಿಗುವುದು.

ಕರ್ಕಾಟಕ: ಸೇವಕ ವರ್ಗದವರಲ್ಲಿ ಪ್ರೀತಿ ವಿಶ್ವಾಸದಿಂದ ವ್ಯವಹರಿಸಿ. ಸೇವಕ ವರ್ಗದ ಜನರ ಮೇಲಿನ ದೃಷ್ಟಿಕೋನ ಬದಲಾಯಿಸುವುದರಿಂದ ಹೆಚ್ಚಿನ ಅನುಕೂಲ. ಸ್ಟೇಷನರಿ ವ್ಯಾಪಾರ ಕೈಗೊಳ್ಳುವ ಬಗ್ಗೆ ಮಾತುಕತೆ ನಡೆಸುವಿರಿ.

ಸಿಂಹ: ಕೈಗಾರಿಕೋದ್ಯಮಿಗಳು ಲಾಭದಾಯಕ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ಬುದ್ಧಿವಂತಿಕೆಯನ್ನು ಉಪಯೋಗಿಸುವುದು ಉತ್ತಮ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳಿಂದ ಸಮಾಧಾನವಾಗುವುದು.

ಕನ್ಯಾ: ಕಾರ್ಮಿಕರು ಸಹನಶೀಲರಾಗಿ ಕೆಲಸದ ಬಗ್ಗೆ ಸರಿಯಾಗಿ ಗಮನವಹಿಸುವುದರಿಂದ ಯಶಸ್ಸು ಪಡೆಯಬಹುದು. ಗೃಹೋಪಕರಣಗಳ ಖರೀದಿ ಅಥವಾ ನೂತನ ವಸ್ತ್ರವನ್ನು ಖರೀದಿ ಮಾಡುವ ಯೋಗವಿದೆ.

ತುಲಾ: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ವಿಶೇಷ ರೀತಿಯ ಉತ್ತಮ ಅವಕಾಶಗಳ ಜೊತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಯೋಚನೆ ಹಾಗೂ ಅದಕ್ಕೆ ಬೇಕಾದ ಆರ್ಥಿಕ ಸಹಾಯದ ಜತೆಯಲ್ಲಿ ಜನಬಲ ಸಿಗಲಿದೆ.

ವೃಶ್ಚಿಕ: ಕೈಗಾರಿಕೋದ್ಯಮಿಗಳು ತಮ್ಮ ಕಂಪನಿಯ ತಯಾರಿಕಾ ಘಟಕದ ಅಭಿವೃದ್ಧಿಯನ್ನು ಮಾಡುವ ಬಗ್ಗೆ ಗಮನಹರಿಸಬಹುದು. ದ್ರವರೂಪದ ವಸ್ತುವಿನ ಅದರಲ್ಲೂ ತೈಲಗಳ ಮಾರಾಟದಲ್ಲಿ ಅಧಿಕ ಲಾಭವಿರುವುದು.

ಧನು: ಕಬ್ಬಿಣ ಹಾಗೂ ಸಿಮೆಂಟ್ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರದೊಂದಿಗೆ ಲಾಭ ಸಿಗಬಹುದು. ಮೆಚ್ಚಿದವರ ಜತೆಗೆ ಮದುವೆಯಾಗಲು ಮನೆಯ ಹಿರಿಯರಿಂದ ಒಪ್ಪಿಗೆ ಸಿಗಲಿದೆ. ಫೈನಾನ್ಸ್‌ನವರಿಗೆ ಆದಾಯ ವೃದ್ಧಿಯಾಗುತ್ತದೆ.

ಮಕರ: ಸಿದ್ಧ ಉಡುಪುಗಳ ಮಾರಾಟಗಾರರಿಗೆ ತಮ್ಮ ರಫ್ತು ವ್ಯಾಪಾರಗಳಿಂದ ಹೆಚ್ಚಿನ ಲಾಭ ಪಡೆಯಬಹುದು. ಅನವಶ್ಯಕ ತಿರುಗಾಟವಿದ್ದರೂ ರಿಯಲ್ ಎಸ್ಟೇಟ್ ಏಜೆಂಟರಿಗೆ ಉತ್ತಮವಾದ ಆದಾಯ ಬರುವುದು.


ಕುಂಭ: ಸರ್ಕಾರಿ ಅಧಿಕಾರಿಗಳಲ್ಲಿ ವಿನಯ ಪೂರ್ವಕವಾಗಿ ನಡೆದುಕೊಳ್ಳುವುದರಿಂದ ಕೆಲಸ ಸರಾಗವಾಗಿ ನಡೆಯುವುದು. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯವಾಗುತ್ತದೆ.

ಮೀನ: ಸಂಘ ಸಂಸ್ಥೆಗಳ ಜವಾಬ್ದಾರಿ ನೋಡುವವರಿಗೆ ನಾಲ್ಕಾರು ಮಾತು ಕೇಳಬೇಕಾಗುವುದು. ಅತೀವ ಪ್ರಯತ್ನದ ಫಲವಾಗಿ ಹೊರ ದೇಶದಲ್ಲಿ ಉದ್ಯೋಗ ದೊರಕಿಸಿಕೊಳ್ಳುವಿರಿ. ಅವಿವಾಹಿತರಿಗೆ ವಿವಾಹ ಯೋಗವಿದೆ.

ಧ್ಯಾನದ ಮಹತ್ವ

ನುಡಿ ಬೆಳಗು





ಪಿ. ಚಂದ್ರಿಕಾ

ಗುರುವೊಬ್ಬ ಶಿಷ್ಯನಿಗೆ ಧ್ಯಾನದ ಬಗ್ಗೆ ಹೇಳುತ್ತಿದ್ದ. ಶಿಷ್ಯ ಅಸಡ್ಡೆಯಿಂದ, 'ಧ್ಯಾನದಿಂದ ಊಟ, ಬಟ್ಟೆ ಏನು ಸಿಗುತ್ತೆ ಹೇಳಿ?' ಎಂದ. ಗುರು ನಕ್ಕ. 'ನೀನು ಏನನ್ನು ಧ್ಯಾನಿಸುತ್ತಿಯೋ ಅದು ಸಿಗುತ್ತೆ. ಆದರೆ ಅದಕ್ಕೆ ಕಪ್ಪೆಗಿರುವಂಥಾ ದೊಡ್ಡ ನಿಷ್ಠೆ, ನಂಬಿಕೆ ಬೇಕು' ಎಂದ. ಶಿಷ್ಯ, 'ನಾನು ಮನುಷ್ಯ. ಯಕಶ್ಚಿತ್ ಕಪ್ಪೆಯ ನಿಷ್ಠೆ ನನಗೆ ಬರಬೇಕಾ?' ಎಂದು ಶಿಷ್ಯ ಅಸಮಾಧಾನಗೊಂಡ. ಅದಕ್ಕೆ ಗುರು, 'ಆಯ್ತಪ್ಪಾ ಕಪ್ಪೆ ಯಕಶ್ಚಿತ್, ನೀನು ಅದಕ್ಕಿಂತ ದೊಡ್ಡವನು. ಈಗ ಹೇಳು ನಾಳೆ ಮಳೆ ಬರುತ್ತದಾ' ಎಂದು ಕೇಳಿದ.

ಅದಕ್ಕೆ ಶಿಷ್ಯ, 'ಅದನ್ನು ಹೇಗೆ ಹೇಳಲಿ? ಬಂದರೂ ಬರಬಹುದು, ಇಲ್ಲದಿದ್ದರೆ ಇಲ್ಲ' ಎಂದ ಶಿಷ್ಯನ ಮಾತಿಗೆ, 'ಸರಿ ಹಾಗಿದ್ದರೆ ಮಳೆಗಾಗಿ ನೀನು ಧ್ಯಾನಿಸು ಮಳೆ ಬರುತ್ತದೆ' ಎಂದ ಗುರು. 'ಇದೆಂಥಾ ತಮಾಶೆ. ಮಳೆ ಬಾ ಎಂದರೆ ಬಂದುಬಿಡುತ್ತದಾ? ಅದೆಲ್ಲಾ ಆಗದ ಕೆಲಸ' ಎಂದ ಶಿಷ್ಯ. 'ನಿನ್ನಲ್ಲಿ ಅನುಮಾನವಿದೆ, ನಂಬಿಕೆಯಿಲ್ಲ. ಅದೇ ಕಪ್ಪೆಗಳನ್ನು ನೋಡು ಒಂದೇ ಮನಸ್ಸಿನಿಂದ ಮಳೆಗಾಗಿ ಧ್ಯಾನಿಸುತ್ತವೆ' ಎಂದ ಗುರು.

ಶಿಷ್ಯನಿಗೆ ಇದು ಸೋಜಿಗ ಅನ್ನಿಸಿತು. 'ಮಳೆ ಬಂದಾಗ ಕಪ್ಪೆಗಳು ಕೂಗುತ್ತಾ ಬರುವುದು ಸಹಜ. ಅದಕ್ಕೆ ನೀವು ಕಥೆ ಕಟ್ಟುತ್ತಿದ್ದೀರಲ್ಲಾ' ಎಂದ ಬೇಸರದಿಂದ. ಗುರುವೆಂದ, 'ಕಥೆಯಲ್ಲ, ಸುಮ್ಮನೆ ಯೋಚನೆ ಮಾಡು ಒಂದು ಮಳೆ ಬರುವವರೆಗೂ ಅವು ಎಲ್ಲಿದ್ದವು? ಮಳೆ ನೆಲಕ್ಕೆ ಬಿದ್ದ ಗಳಿಗೆಯೇ ಅವು ಹೇಗೆ ಖುಷಿಯಿಂದ ಹೊರಗೆ ಬಂದವು ಅಂತ?'

ಶಿಷ್ಯನಲ್ಲಿ ಅದಕ್ಕೂ ಉತ್ತರವಿಲ್ಲ. ಹೌದಲ್ಲಾ! ಈ ಸೋಜಿಗ ತನಗೆ ಯಾಕೆ ಗೊತ್ತಿಲ್ಲ? ಅವನು ಮೃದುವಾಗುತ್ತಾ ಆ ಕಪ್ಪೆಗಳು ಎಲ್ಲಿದ್ದವು ಹೇಳಿ ಗುರುಗಳೇ ಎಂದು ಕೇಳಿದ. ಗುರು ನಗುತ್ತಾ ಹೇಳಿದ, 'ವರ್ಷ ಪೂರ್ತಿ ಮಳೆಗಾಗಿ ಧ್ಯಾನಿಸುತ್ತಾ, ಬಂದೇ ಬರುತ್ತೆ ಎನ್ನುವ ನಂಬಿಕೆಯಿಂದ ಭೂಮಿಯೊಳಗೆ ಕೋಶಾವಸ್ಥೆಯಲ್ಲಿದ್ದು ಕಾಯುತ್ತಿದ್ದವು. ಒಂದೇ ಮಳೆ ಅವುಗಳ ನಿರೀಕ್ಷೆಯನ್ನು ನಿಜಗೊಳಿಸಿಬಿಡುತ್ತದೆ. ಇದು ಪ್ರಕೃತಿ. ಇದೇ ಧ್ಯಾನ. ಯಾವುದನ್ನೇ ಆಗಲಿ ನಮಗೆ ದಕ್ಕುವವರೆಗೂ ಅತ್ಯಂತ ತಾಳ್ಮೆಯಿಂದ, ನಂಬಿಕೆಯಿಂದ ಕಾಯಬೇಕು. ಹೀಗೆ ಕಾಯುವುದೇ ಧ್ಯಾನ' ಎಂದು ಗುರು ಧ್ಯಾನದ ಮಹತ್ವ ಹೇಳಿದ.

ಪದಬಂಧ 5459


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಪಾಯದಿಂದ ಹಾಕಿದ ಬುನಾದಿ (4)
3.ಆದಾಯ ಮತ್ತು ಖರ್ಚು (4)
5.ಬಿಡದಿ ಹತ್ತಿರವಿರುವ ಹೆಂಡತಿ (3)
6.ಮರಳ ಬಳಿ ಹುಚ್ಚನಿದ್ದಾನಲ್ಲಾ! (3)
7.ಗಮನವಿಟ್ಟಾಗ ಗಂಭೀರವಾದುದು ಕಂಡಿದೆ (3)
9.ತನಯ ಹೀಗೆ ಮಗ್ನ! (3)
11.ರಾಮನಿಗೆ ಸಿಕ್ಕಿರುವ ಬಿಡುವು (3)
12.ಕನ್ನಡಿಗ ಹಿಡಿದಿರುವ ಲೆನ್ಸು (3)
14.ಈತ ಮೃತ್ಯುದೇವತೆಯ ಮಗ (4)
15.ಗಣಪತಿಯ ಇನ್ನೊಂದು ಹೆಸರು (4)

ಮೇಲಿಂದ ಕೆಳಕ್ಕೆ

1.ಒಪ್ಪವಾಗಿ ಹಾಡಿನ ಧಾಟಿಯಿಂದ ಮೂಡಿರುವ ಪ್ರೀತಿ (4)
2.ಮಯನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ! (2)
3.ಆದಿವಾಸಿಯಲ್ಲಿನ ಮೂಲ! (2)
4.ಯಮನ ಹತ್ತಿರವಿರುವ ಜೋಡಿ (3)
6.ಈತ ಕಟ್ಟಾ ಸಂಪ್ರದಾಯವಂತ (4)
8.ಹೊಸ ಹೂವಿದು (4)
10.ಬಲು ರುಚಿಯಾದ ಅಡುಗೆ (4)
11.ದಾಯಾದಿಯ ಬೀಳ್ಕೊಡುವಿಕೆ! (3)
12.ತಮ್ಮ ನೀಡಿರುವ ಓಟು (2)
13.ವಿರಮಿಸುತ್ತಿದ್ದಾಗ ಮೂಡಿರುವ ಸೂರ್ಯ (2)



5458ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಭಾಷಾಂತರ 6.ಮಲಯಜ 7.ನಿಯಮ 10.ಜವಾನ 11.ಹಯವದನ 12.ಕಡಲು 13.ಕರಗ 15.ಕನ್ನಡಕ 17 ಕೆಂಗುಲಾಬಿ

ಮೇಲಿಂದ ಕೆಳಕ್ಕೆ:
1.ಅಭಾಗಿನಿ 2.ಸ್ತರ 3.ಸುಮ 4.ಯಜಮಾನ 8.ಮಹಲು 9.ಕವಳ 10.ಜನಕ 12.ಕನಿಕರ 14.ಗಡಿಬಿಡಿ 16.ಕತ್ತೆ 17.ಕೆಂಡ

ಸುಡೊಕು 5845

		7					5	
	6		4		9	8		7
5		8					6	
		6	5			7		9
7				6	1		4	
	5		8			3		6
			3			4		2
	9							
6		4		9	5	1		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5844 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ರಾಜಸ್ಥಾನದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಯಾವುದೇ ಯೋಜನೆ ನಿಲ್ಲಿಸುವುದಿಲ್ಲ: ಪ್ರಧಾನಿ ಭರವಸೆ

ಸೋಲು ಒಪ್ಪಿಕೊಂಡ ಕಾಂಗ್ರೆಸ್: ಮೋದಿ

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಕಾಂಗ್ರೆಸ್ ಆರಂಭಿಸಿರುವ ಯೋಜನೆಗಳನ್ನು ನಿಲ್ಲಿಸಬಹುದೆಂದು ಮನವಿ ಮಾಡುವ ಮೂಲಕ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಈಗಾಗಲೇ ಸೋಲನ್ನು ಒಪ್ಪಿಕೊಂಡಿದ್ದಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ವ್ಯಂಗ್ಯವಾಡಿದ್ದಾರೆ.

ರಾಜಸ್ಥಾನದ ಚಿತ್ತೋಡಗಢದಲ್ಲಿ ಸೋಮವಾರ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿ, ಬಿಜೆಪಿ ಯಾವುದೇ ಯೋಜನೆಯನ್ನು ನಿಲ್ಲಿಸುವುದಿಲ್ಲ. ಆದರೆ, ಅದನ್ನು ಸುಧಾರಿಸಲು ಪ್ರಯತ್ನಿಸುತ್ತದೆ ಎಂದು ಭರವಸೆ ನೀಡಿದರು.

ಚುನಾವಣೆ ನಡೆಯಲಿರುವ ರಾಜ್ಯದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಬಿಂಬಿಸುವುದಿಲ್ಲ ಎಂಬ ಸ್ಪಷ್ಟ ಸೂಚನೆ ನೀಡಿದ ಅವರು, ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 'ಕಮಲ' ಚಿಹ್ನೆ ಮೇಲೆ ಸ್ಪರ್ಧಿಸಲಿದೆ ಎಂದರು.

ವಸುಂಧರಾ ರಾಜೇ ಅವರನ್ನು ರಾಜಸ್ಥಾನದಲ್ಲಿ ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಲಾಗುತ್ತದೆ ಎಂಬ ಊಹಾಪೋಹಗಳು ಹೆಚ್ಚಾಗಿದೆ.

ಬಿಜೆಪಿ ಅಧಿಕಾರಕ್ಕೆ ಬಂದರೆ ಕಾಂಗ್ರೆಸ್ ಆರಂಭಿಸಿರುವ ಯಾವುದೇ ಯೋಜನೆಯನ್ನು ನಿಲ್ಲಿಸಬಾರದು ಎಂದು ಮೋದಿ ಅವರಿಗೆ ಪತ್ರ ನೀಡಬೇಕೆಂದು ಗೆಹಲೋತ್ ಬೇಡಿಕೆ ಬಗ್ಗೆ ಪ್ರತಿಕ್ರಿಯಿಸಿದ ಮೋದಿ, 'ಕಾಂಗ್ರೆಸ್ ಸರ್ಕಾರದ ಕ್ಷಣಗಣನೆ ಆರಂಭವಾಗಿದೆ ಎಂಬುದು ಗೆಹಲೋತ್‌ಗೆ ತಿಳಿದಿದೆ. ಯೋಜನೆಗಳನ್ನು ನಿಲ್ಲಿಸಬಾರದೆಂದು ಸಾರ್ವಜನಿಕವಾಗಿ ಮನವಿ ಮಾಡುವ ಮೂಲಕ ಬಿಜೆಪಿಯನ್ನು ಅಭಿನಂದಿಸಿದ್ದಾರೆ. ಸಾರ್ವಜನಿಕ ಹಿತಾಸಕ್ತಿಯ ಯಾವುದೇ ಯೋಜನೆಯನ್ನು ಬಿಜೆಪಿ ನಿಲ್ಲಿಸುವುದಿಲ್ಲ. ಆದರೆ, ಅದನ್ನು ಸುಧಾರಿಸಲು ಪ್ರಯತ್ನಿಸುತ್ತದೆ ಎಂಬ ಭರವಸೆ ನೀಡುತ್ತೇನೆ. ಇದು ಮೋದಿ ಅವರ ಗ್ಯಾರಂಟಿ' ಎಂದು ಹೇಳಿದ್ದಾರೆ.

ಭ್ರಷ್ಟಾಚಾರ ಮತ್ತು ಮಹಿಳೆಯರ ಸುರಕ್ಷತೆ ವಿಷಯದ ಬಗ್ಗೆ ಗೆಹಲೋತ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ, ದೇಶದ ಯಾವುದೇ ಭಾಗದಲ್ಲಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆದಾಗ ತಮಗೆ ನೋವಾಗುತ್ತದೆ. 'ಉದಯಪುರದಲ್ಲಿ ಏನಾಯಿತು ಎಂದು ನೀವು ಊಹಿಸಿದ್ದೀರಾ? ಬಟ್ಟೆ ಹೊಲಿಸಿಕೊಳ್ಳುವ ನೆಪದಲ್ಲಿ ಜನರು ಬರುತ್ತಾರೆ. ಯಾವುದೇ ಭಯವಿಲ್ಲದೆ ದರ್ಜಿಯ ಕತ್ತು ಸೀಳಿ ವಿಡಿಯೊ ಮಾಡಿ ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಡುತ್ತಾರೆ. ಆದರೆ ಕಾಂಗ್ರೆಸ್‌ಗೆ ಮಾತ್ರ ಮತಬ್ಯಾಂಕ್ ಚಿಂತೆ' ಎಂದರು.

ಕಾಂಗ್ರೆಸ್ ಸೃಷ್ಟಿಸಿದ ಅಭಿವೃದ್ಧಿ ವಿರೋಧಿ ವಾತಾವರಣದಿಂದಾಗಿ ರಾಜಸ್ಥಾನದಲ್ಲಿ ಯಾವುದೇ ಹಬ್ಬವನ್ನು ಶಾಂತಿಯುತವಾಗಿ ಆಚರಿಸಲು ಸಾಧ್ಯವಿಲ್ಲ. ಮಹಿಳೆಯರ ಸುರಕ್ಷತೆ ಖಾತರಿಪಡಿಸುವುದರ ಜೊತೆಗೆ ರಾಜ್ಯದಲ್ಲಿ ಉದ್ಯೋಗ ಒದಗಿಸುವುದು ಮತ್ತು ಅಭಿವೃದ್ಧಿಗೆ ಬಿಜೆಪಿ ಆದ್ಯತೆ ನೀಡಲಿದೆ ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಿ.ಪಿ.ಜೋಶಿ, ವಿರೋಧ ಪಕ್ಷದ ನಾಯಕ ರಾಜೇಂದ್ರ ರಾಥೋರ್, ಕೇಂದ್ರ ಸಚಿವ ಅರ್ಜುನ್ ಮೇಘವಾಲ್ ಸೇರಿದಂತೆ ಪ್ರಮುಖ ರಾಜಕೀಯ ನಾಯಕರು ರ‍್ಯಾಲಿಯಲ್ಲಿ ಇದ್ದರು.



ರಾಜಸ್ಥಾನದ ಚಿತ್ತೋಡಗಢದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ವಸುಂಧರಾ ರಾಜೇ, ಅರ್ಜುನ್ ಮೇಘವಾಲ್, ಸಿ.ಪಿ.ಜೋಶಿ ಇದ್ದಾರೆ –ಪಿಟಿಐ ಚಿತ್ರ

'ಉಜ್ಜಯಿನಿ ಪ್ರಕರಣದ ಪ್ರಸ್ತಾಪವೇ ಇಲ್ಲ'

ನವದೆಹಲಿ (ಪಿಟಿಐ): ಮಹಿಳೆಯರ ಮೇಲಿನ ದೌರ್ಜನ್ಯದ ಬಗ್ಗೆ ಬಿಜೆಪಿ ಎಂದಿಗೂ ವಿಷಾದಿಸಿಲ್ಲ. 'ಅಂತಹ ಪ್ರಕರಣಗಳಲ್ಲಿ ಬಿಜೆಪಿ ಆಡಳಿತ ಹೊಣೆಗಾರಿಕೆ ಪ್ರದರ್ಶಿಸಿಲ್ಲ' ಎಂದು ಪ್ರಧಾನಿ ಮೋದಿ ಅವರಿಗೆ ಕಾಂಗ್ರೆಸ್ ತಿರುಗೇಟು ನೀಡಿದೆ.

ರ‍್ಯಾಲಿಯಲ್ಲಿ ಮೋದಿ ಅವರು, ರಾಜ್ಯದ ಮಹಿಳೆಯರ ಸುರಕ್ಷತೆ ಮತ್ತು ಭ್ರಷ್ಟಾಚಾರ ಕುರಿತಂತೆ ರಾಜಸ್ಥಾನ ಸರ್ಕಾರವನ್ನು ಟೀಕಿಸಿದರು.

ಈ ಆರೋಪಗಳಿಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಪ್ರಧಾನಿ ಅವರು ಮಣಿಪುರದ ಬಗ್ಗೆ ಒಂದು ಮಾತನ್ನೂ ಆಡಲಿಲ್ಲ. ಅವರು ಉಜ್ಜಯಿನಿ ಪ್ರಕರಣದ ಬಗ್ಗೆಯೂ ಪ್ರಸ್ತಾಪಿಸಲಿಲ್ಲ. ಮಹಿಳಾ ಕುಸ್ತಿಪಟುಗಳ ಮೇಲೆ ನಡೆಸಿದ ದೌರ್ಜನ್ಯಕ್ಕಾಗಿ ಅವರ ಪಕ್ಷದ ಸಂಸದರ ವಿರುದ್ಧ ಕ್ರಮ ಕೈಗೊಳ್ಳುವುದು ಅಥವಾ ರ‍್ಯಾಲಿಯ ಚಾಂಪಿಯನ್‌ನನ್ನು ದೆಹಲಿ ಪೊಲೀಸರು ಅವಮಾನಿಸುವಾಗ ಮಧ್ಯಪ್ರವೇಶಿಸುವುದನ್ನೂ ಖಂಡಿಸಲಿಲ್ಲ. ಆದರೆ, ಚುನಾವಣಾ ಪ್ರಚಾರದ ವೇಳೆ ಬಂದಾಗ ಸುಳ್ಳನ್ನು ಹೇಳುತ್ತಾರೆ' ಎಂದು 'ಎಕ್ಸ್' ವೇದಿಕೆಯಲ್ಲಿ ಕುಟುಕಿದ್ದಾರೆ.

> ಗಾಂಧಿಜಯಂತಿಯ ದಿನವಾದರೂ ಪ್ರಧಾನಿ, ತಮ್ಮ ಸುಳ್ಳುಗಾರಿಕೆ, ತಿರುಚಿದ ಹೇಳಿಕೆ ನೀಡುವುದನ್ನು ವಿರಮಿಸುತ್ತಾರೆ ಎಂದು ನಾವು ನಿರೀಕ್ಷಿಸುತ್ತೇವೆ
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಅಧಿಕಾರಕ್ಕೆ ಬಂದರೆ ಗೆಹಲೋತ್ ಸರ್ಕಾರದ ಯೋಜನೆ ಮುಂದುವರಿಸುವುದಾಗಿ ಪ್ರಧಾನಿ ಹೇಳಿದ್ದಾರೆ. ನಮ್ಮ ಯೋಜನೆಗಳು ಉತ್ತಮವಾಗಿದ್ದಾಗ ನಿಮಗೆ ಯಾರು ಮತ ನೀಡುತ್ತಾರೆ?
> **ಪವನ್ ಖೇರಾ,** ಕಾಂಗ್ರೆಸ್ ನಾಯಕ

₹7 ಸಾವಿರ ಕೋಟಿ ಮೊತ್ತದ ಯೋಜನೆ ಉದ್ಘಾಟನೆ

ಜೈಪುರ: ರಾಜಸ್ಥಾನದ ಅಭಿವೃದ್ಧಿ ತಮ್ಮ ಸರ್ಕಾರದ ಆದ್ಯತೆಯಾಗಿದ್ದು, ಅತ್ಯಾಧುನಿಕ ಮೂಲಸೌಕರ್ಯ ಕಲ್ಪಿಸಲು ಗಮನ ಹರಿಸಲಾಗಿದೆ ಎಂದು ಪ್ರಧಾನಿ ಹೇಳಿದರು.

ಚಿತ್ತೋಡಗಢದಲ್ಲಿ ₹7,000 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದ ಬಳಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಯೋಜನೆಗಳು ಜನರ ಜೀವನವನ್ನು ಸುಗಮಗೊಳಿಸುತ್ತವೆ ಮತ್ತು ಉದ್ಯೋಗಾವಕಾಶ ಒದಗಿಸುತ್ತವೆ ಎಂದು ಹೇಳಿದರು.

ರಾಜಸ್ಥಾನವು ಹಿಂದಿನ ಪರಂಪರೆ, ಈಗಿನ ಸಾಮರ್ಥ್ಯ–ಶಕ್ತಿ ಮತ್ತು ಭವಿಷ್ಯದ ಸಾಧ್ಯತೆಗಳನ್ನು ಹೊಂದಿದ್ದು 'ತ್ರಿಶಕ್ತಿ'ಯಂತೆ ಇದೆ ಎಂದು ಬಣ್ಣಿಸಿದರು. ರಾಜಸ್ಥಾನದ ಈ ತ್ರಿಶಕ್ತಿಯು ದೇಶದ ಬಲವನ್ನು ಹೆಚ್ಚಿಸಲಿದೆ ಎಂದರು.

ಸ್ವದೇಶ ದರ್ಶನ ಯೋಜನೆಯಡಿ ನಾಥದ್ವಾರದಲ್ಲಿ ಪ್ರವಾಸಿ ಸೌಲಭ್ಯ, ನಾಥದ್ವಾರದಲ್ಲಿ 'ಟೂರಿಸ್ಟ್ ಇಂಟರ್‌ಪ್ರಿಟೇಷನ್ ಮತ್ತು ಕಲ್ಚರಲ್ ಸೆಂಟರ್', ಕೋಟಾದಲ್ಲಿ ಐಐಐಟಿ ಕ್ಯಾಂಪಸ್ ಸೇರಿದಂತೆ ಹಲವು ಯೋಜನೆಗಳನ್ನು ಪ್ರಧಾನಿ ಉದ್ಘಾಟಿಸಿದರು.

'ಜಾತಿ ಆಧಾರದ ಮೇಲೆ ಸಮಾಜ ವಿಭಜನೆ'

ಗ್ವಾಲಿಯರ್ (ಪಿಟಿಐ): 'ವಿರೋಧ ಪಕ್ಷವು ಆರು ದಶಕಗಳಿಂದ ಬಡವರ ಭಾವನೆಗಳೊಂದಿಗೆ ಆಟವಾಡಿದೆ ಮತ್ತು ದೇಶವನ್ನು ಜಾತಿ ಆಧಾರದ ಮೇಲೆ ವಿಭಜಿಸಿದೆ. ಈಗ ಅದು ಮಾಡುತ್ತಿರುವುದು ಕೂಡ ಪಾಪವೇ ಆಗಿದೆ' ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ಸೋಮವಾರ ಪರೋಕ್ಷ ವಾಗ್ದಾಳಿ ನಡೆಸಿದರು.

ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಸೋಮವಾರ ₹19,000 ಕೋಟಿಯ ಅಧಿಕ ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಬಳಿಕ ಮಾತನಾಡಿದರು.

ಬಿಹಾರ ಸರ್ಕಾರ ಜಾತಿ ಗಣತಿ ವರದಿ ಬಿಡುಗಡೆ ಮಾಡಿರುವುದನ್ನು ಪ್ರಸ್ತಾಪಿಸದೇ, ಅವರು ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

'ಒಂದೇ ದಿನದಲ್ಲಿ ₹19,000 ಕೋಟಿಗೂ ಹೆಚ್ಚಿನ ಈ ಯೋಜನೆಗಳು ಡಬಲ್ ಎಂಜಿನ್ ಸರ್ಕಾರದ ಫಲಿತಾಂಶವಾಗಿದೆ. ಡಬಲ್ ಎಂಜಿನ್ ಸರ್ಕಾರಕ್ಕಾಗಿ ಜನರ ಒಂದು ಮತವು ಮಧ್ಯಪ್ರದೇಶ ಮತ್ತು ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಧ್ಯಪ್ರದೇಶವನ್ನು ಒಕ್ಕಲೆಬ್ಬಿಸಿ ಮಾಡಿದ್ದರು. ಅವರಿಗೆ ಅಭಿವೃದ್ಧಿಯ ದೃಷ್ಟಿಕೋನ ಮತ್ತು ಮಾರ್ಗಸೂಚಿ ಇಲ್ಲ' ಎಂದರು.

ಅಭಿವೃದ್ಧಿ ವಿರೋಧಿಗಳು 6 ದಶಕ ಕೇಂದ್ರದಲ್ಲಿ ಆಡಳಿತ ನಡೆಸಲು ಅಧಿಕಾರ ಸಿಕ್ಕಿತು. ಆದರೆ, ಒಂಬತ್ತು ವರ್ಷಗಳಲ್ಲಿ (ಕೇಂದ್ರದಲ್ಲಿ ಬಿಜೆಪಿ ಆಡಳಿತ) ಆಗಾಧ ಅಭಿವೃದ್ಧಿ ನಡೆದಿದೆ. ಕೇವಲ ಒಂಬತ್ತು ವರ್ಷಗಳಲ್ಲಿ ಇಷ್ಟೊಂದು ಕೆಲಸಗಳು ನಡೆಯಬಹುದಾದರೆ, ಆ ಎಲ್ಲಾ ವರ್ಷಗಳಲ್ಲಿ ಅದು ಏಕೆ ನಡೆಯಲಿಲ್ಲ? ಎಂದು ಕಾಂಗ್ರೆಸ್ ಹೆಸರನ್ನು ಉಲ್ಲೇಖಿಸದೆ ಮೋದಿ ಪ್ರಶ್ನಿಸಿದರು.

ಜಾಗತಿಕ ಆರ್ಥಿಕತೆಗಳ ಪಟ್ಟಿಯಲ್ಲಿ ದೇಶ ಈಗ ಐದನೇ ಸ್ಥಾನ ಕ್ಕೇರಿದೆ. ಮುಂದಿನ ಅವಧಿಯಲ್ಲಿ ಅದನ್ನು 3ನೇ ಸ್ಥಾನಕ್ಕೆ ಕೊಂಡೊಯ್ಯಲು ಬಯಸುತ್ತೇವೆ ಎಂದರು.

ಆದರೆ, ಕಾಂಗ್ರೆಸ್ ಇಲ್ಲಿ ಇದನ್ನೇ ಸಂಪ್ರದಾಯ ಮಾಡಿಕೊಂಡಿದೆ ಎಂದು ಆರೋಪಿಸಿದರು.

ಕಳೆದ ವರ್ಷ ಉದಯಪುರದಲ್ಲಿ ನಡೆದ ಟೇಲರ್ ಕನ್ಹಯ್ಯ ಲಾಲ್ ಅವರ ಬರ್ಬರ ಹತ್ಯೆಯನ್ನು ಉಲ್ಲೇಖಿಸಿದ ಅವರು, ಇದಕ್ಕಾಗಿ ರಾಜ್ಯದ ಜನರು ಕಾಂಗ್ರೆಸ್ ಗೆ ಮತ ಹಾಕಿದ್ದಾರೆಯೇ ಎಂದು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ಪ್ರತೀಕಾರ: ಕುಟುಂಬದ ಐವರ ಹತ್ಯೆ

ಲಖನೌ: ಉತ್ತರ ಪ್ರದೇಶದ ದೇವರೀಯಾ ಜಿಲ್ಲೆಯಲ್ಲಿ ಜಮೀನು ವಿವಾದ ಸಂಬಂಧ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯನ ಕೊಲೆಗೆ ಪ್ರತೀಕಾರವಾಗಿ ಮೃತನ ಕುಟುಂಬದವರು ಮತ್ತು ಉದ್ರಿಕ್ತರ ಗುಂಪೊಂದು ಮಹಿಳೆ ಸೇರಿ ಒಂದೇ ಕುಟುಂಬದ ಐವರನ್ನು ಹತ್ಯೆ ಮಾಡಿರುವ ಭೀಕರ ಘಟನೆ ಸೋಮವಾರ ನಡೆದಿದೆ.

ಮೃತರ ಕುಟುಂಬದಲ್ಲಿ ಒಬ್ಬಾತ ಗುಂಪು ದಾಳಿಯಲ್ಲಿ ಗಂಭೀರ ಗಾಯಗೊಂಡಿದ್ದು, ಆತನನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಕರಣ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳಿಗಾಗಿ ತೀವ್ರ ಶೋಧ ನಡೆಯುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣದ ಹಿನ್ನೆಲೆ: ಜಿಲ್ಲೆಯ ಫತೇಪುರ ಗ್ರಾಮದ ನಿವಾಸಿಗಳಾದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪ್ರೇಮ್ ಯಾದವ್ ಮತ್ತು ಸತ್ಯ ಪ್ರಕಾಶ್ ದುಬೆ ಅವರ ಮಧ್ಯೆ ಜಮೀನಿನ ಸಂಬಂಧ ವಿವಾದವಿತ್ತು. ಕೆಲವು ದಿನಗಳ ಹಿಂದೆ ಸತ್ಯ ಪ್ರಕಾಶ್ ದುಬೆ ಅವರ ಸಹೋದರ ಸಾಧು ದುಬೆ ಕುಟುಂಬದ ಆಸ್ತಿಯಲ್ಲಿನ ತಮ್ಮ ಪಾಲಿನ ಭೂಮಿಯನ್ನು ಪ್ರೇಮ್ ಯಾದವ್ ಅವರಿಗೆ ಮಾರಾಟ ಮಾಡಿದ್ದರು. ಸೋಮವಾರ ಈ ವಿಚಾರವಾಗಿ ಯಾದವ್ ಮತ್ತು ಸತ್ಯ ಪ್ರಕಾಶ್ ದುಬೆ ನಡುವೆ ವಾಗ್ವಾದ ನಡೆದಿತ್ತು.

ಕೇಂದ್ರದ ವಿರುದ್ಧ ಟಿಎಂಸಿ ಧರಣಿ



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳಕ್ಕೆ ಅನುದಾನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಮತ್ತು ಪಕ್ಷದ ಕಾರ್ಯಕರ್ತರು ರಾಜ್‌ಘಾಟ್‌ನಲ್ಲಿ ಸೋಮವಾರ ಧರಣಿ ನಡೆಸಿದರು.

ಪಕ್ಷದ ಶಾಸಕರು, ಸಂಸದರು ಸೇರಿದಂತೆ ನೂರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಅವರ ಸ್ಮಾರಕಕ್ಕೆ ನಮನ ಸಲ್ಲಿಸಿದರು.

ಅಭಿಷೇಕ್ ಬ್ಯಾನರ್ಜಿ 'ಬಂಗಾಳಕ್ಕೆ ಅನುದಾನ ಬಿಡುಗಡೆ ಮಾಡಿ' ಎಂಬ ಫಲಕಗಳನ್ನು ಹಿಡಿದಿದ್ದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ಮನರೇಗಾ) ರಾಜ್ಯಕ್ಕೆ ನೀಡಬೇಕಾದ ₹15,000 ಕೋಟಿಯನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಿಡುಗಡೆ ಮಾಡಿಲ್ಲ ಎಂದು ಟಿಎಂಸಿ ಆರೋಪಿಸಿದೆ.



'ಸಸ್ಯಮೂಲ ಚರ್ಮ' ಅಭಿವೃದ್ಧಿ

ಸಿಎಸ್‌ಐಆರ್ ವಿಜ್ಞಾನಿಗಳ ಪ್ರಯೋಗ ಯಶಸ್ವಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ತಿರುವನಂತಪುರದಲ್ಲಿರುವ ಎನ್‌ಐಐಎಸ್‌ಟಿಯಲ್ಲಿ ಯಶಸ್ವಿ ಪ್ರಯೋಗ
- ಬೌದ್ಧಿಕ ಹಕ್ಕು ಸ್ವಾಮ್ಯ ಪಡೆಯಲು ಅರ್ಜಿ ಸಲ್ಲಿಕೆ

ನವದೆಹಲಿ: ಗಿಡಗಳಿಂದ ತಯಾರಿಸಿದ ಲ್ಯಾಪ್‌ಟಾಪ್ ಬ್ಯಾಗ್‌ಗಳು, ವಾಲೆಟ್‌ಗಳು, ಕೈಚೀಲಗಳು ಮತ್ತು ಚಪ್ಪಲಿಗಳು ಚರ್ಮದ ಉತ್ಪನ್ನಗಳನ್ನಂತೆ ಮಿರಿ–ಮಿರಿ ಮಿಂಚುತ್ತವೆಯೇ? ನಿಜವಾದ ಚರ್ಮ ಮತ್ತು ಸಿಂಥೆಟಿಕ್ ಚರ್ಮವನ್ನೇ ಹೋಲುವ ಹಾಗೂ ಅಂತಹ ಅನುಭವವನ್ನೇ ನೀಡುವ 'ಸಸ್ಯಮೂಲ ಚರ್ಮ'ವನ್ನು ಸಿಎಸ್‌ಐಆರ್ ಅಭಿವೃದ್ಧಿಪಡಿಸಿದೆ. ಸಿಎಸ್‌ಐಆರ್‌ನ ತಿರುವನಂತಪುರದ ಪ್ರಯೋಗಾಲಯದಲ್ಲಿ ಅಂತಹ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಲಾಗಿದೆ.

ತಿರುವನಂತಪುರದ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಇಂಟರ್‌ಡಿಸಿಪ್ಲಿನರಿ ಸೈನ್ಸ್ ಆ್ಯಂಡ್ ಟೆಕ್ನಾಲಜಿ–ಎನ್‌ಐಐಎಸ್‌ಟಿ' 'ಸಸ್ಯಮೂಲ ಚರ್ಮ'ದ ತಂತ್ರಜ್ಞಾನವನ್ನು ಪುಣೆ ಮೂಲದ ಕಂಪನಿಯೊಂದಕ್ಕೆ ವರ್ಗಾವಣೆ ಮಾಡಿದೆ. ಜತೆಗೆ ಈ ಸಂಬಂಧ ಬೌದ್ಧಿಕ ಹಕ್ಕುಸ್ವಾಮ್ಯ ಪಡೆಯಲು ಎರಡು ಅರ್ಜಿಗಳನ್ನು ಸಲ್ಲಿಸಿದೆ. 'ಸಸ್ಯಮೂಲ ಚರ್ಮ'ವನ್ನು ದೆಹಲಿಯ ಭಾರತ ಮಂಟಪದಲ್ಲಿ ನಡೆದಿದ್ದ ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಲಾಗಿತ್ತು.

ಕೃಷಿ ತ್ಯಾಜ್ಯ, ಮಾವು, ಪಪ್ಪಾಯ, ಕಳ್ಳಿ, ಕಾಫಿ, ಸೇಬು, ಅನನಾಸು, ಲಾವಂಚಾ, ಭತ್ತದ ಹುಲ್ಲು ಮತ್ತು ಕೆಲವು ಜೊಂಡು ಸಸ್ಯಗಳಿಂದ ನಾರನ್ನು ತೆಗೆದು ಸಂಸ್ಕರಿಸಬಹುದು. ಆ ನಾರನ್ನು ಪರಸ್ಪರ ಜೋಡಿಸುವ ಮೂಲಕ ನಾರಿನ ಹಾಳೆಗಳನ್ನು ತಯಾರಿಸಲಾಗುತ್ತದೆ. ಆ ಹಾಳೆಗಳನ್ನು ಅತಿ–ಉಷ್ಣತೆಯಲ್ಲಿ ಬಿಸಿ ಮಾಡಿದಾಗ 'ಸಸ್ಯಮೂಲ ಚರ್ಮ' ಸಿದ್ಧವಾಗುತ್ತದೆ. ನಾರನ್ನು ಪರಸ್ಪರ ಜೋಡಿಸುವ ವಿಧಾನ ಮತ್ತು ಅದಕ್ಕೆ ಬಳಸುವ ವಸ್ತುಗಳ ಸಂಬಂಧ ಒಂದು ಬೌದ್ಧಿಕ ಹಕ್ಕುಸ್ವಾಮ್ಯ ಅರ್ಜಿಯನ್ನು ಸಲ್ಲಿಸಲಾಗಿದೆ. ನಾರಿನ ಹಾಳೆಗಳನ್ನು ಬಿಸಿಮಾಡುವ ಉಷ್ಣ ಸಾಧನಕ್ಕೆ ಮತ್ತೊಂದು ಬೌದ್ಧಿಕ ಹಕ್ಕು ಸ್ವಾಮ್ಯ ಅರ್ಜಿಯನ್ನು ಸಲ್ಲಿಸಲಾಗಿದೆ.

ಸಸ್ಯಮೂಲ ಚರ್ಮವು ಹಿಗ್ಗುವ ಗುಣ ಹೊಂದಿದೆ. ಜತೆಗೆ ಇದು ನೀರು, ಅತಿಉಷ್ಣತೆಯನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ. ಚರ್ಮ ಮತ್ತು ಸಿಂಥೆಟಿಕ್ ಚರ್ಮದಂತೆಯೇ ಕಾಣುತ್ತದೆ ಎಂದು ಎನ್‌ಐಐಎಸ್‌ಟಿ ನಿರ್ದೇಶಕ ಸಿ.ರಾಮಕೃಷ್ಣನ್ ಹೇಳಿದ್ದಾರೆ.

ಇದು ಚರ್ಮ ಮತ್ತು ಸಿಂಥೆಟಿಕ್ ಚರ್ಮಕ್ಕಿಂತ ಶೇ 50ರಷ್ಟು ಅಗ್ಗದ ಬೆಲೆಯಲ್ಲಿ ದೊರೆಯುತ್ತದೆ. ಸಸ್ಯಮೂಲವಾದ್ದರಿಂದ ಪರಿಸರಕ್ಕೆ ಹೆಚ್ಚಿನ ಹಾನಿಯಾಗುವುದಿಲ್ಲ. ಚರ್ಮ ಮತ್ತು ಸಿಂಥೆಟಿಕ್ ಚರ್ಮದ ಸಂಸ್ಕರಣೆ ಮತ್ತು ತಯಾರಿಕೆಯಲ್ಲಿ ರಾಸಾಯನಿಕ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತದೆ. ಚರ್ಮವನ್ನು ಹದ ಮಾಡುವಲ್ಲಿ ನೀರನ್ನು ಯಥೇಚ್ಛವಾಗಿ ಬಳಸಲಾಗುತ್ತದೆ. ಸಸ್ಯಮೂಲ ಚರ್ಮವು ಇವೆಲ್ಲವನ್ನೂ ತಪ್ಪಿಸುತ್ತದೆ ಎಂದು ಎನ್‌ಐಐಎಸ್‌ಟಿ ಹೇಳಿದೆ.

ಲೋಕಲ್ ಸರ್ಕಲ್ಸ್ ಸಮೀಕ್ಷೆಯಲ್ಲಿ ಬಹಿರಂಗ

ಸಾರ್ವಜನಿಕ ಶೌಚಾಲಯ: ಶೋಚನೀಯ

ಮುಖ್ಯಾಂಶಗಳು
- 341 – ಸಮೀಕ್ಷೆ ನಡೆಸಿದ ಜಿಲ್ಲೆಗಳು
- 39,000–ಜನರಿಂದ ಪ್ರತಿಕ್ರಿಯೆ
- ಶೇ 69ರಷ್ಟು ಸಮೀಕ್ಷೆಯಲ್ಲಿ ಭಾಗಿಯಾದ ಪುರುಷರು
- ಶೇ 31ರಷ್ಟು ಸಮೀಕ್ಷೆಯಲ್ಲಿ ಭಾಗಿಯಾದ ಮಹಿಳೆಯರು



ನವದೆಹಲಿ (ಪಿಟಿಐ): ದೇಶದಲ್ಲಿ 'ಸ್ವಚ್ಛ ಭಾರತ ಯೋಜನೆ' ಜಾರಿಯಾಗಿ ಒಂಬತ್ತು ವರ್ಷಗಳು ಪೂರ್ಣಗೊಂಡಿವೆ. ಆದರೆ, ದೇಶದಾದ್ಯಂತ ಸಾರ್ವಜನಿಕ ಶೌಚಾಲಯಗಳ ಸ್ಥಿತಿ ಸುಧಾರಿಸಿಲ್ಲ ಎಂಬುದು ಬಹುತೇಕ ಭಾರತೀಯ ಅಭಿಪ್ರಾಯವಾಗಿದೆ ಎಂದು 'ಲೋಕಲ್ ಸರ್ಕಲ್ಸ್' ಸಮೀಕ್ಷೆ ಹೇಳಿದೆ.

ಮುಂಬೈ, ದೆಹಲಿ ಅಥವಾ ಬೆಂಗಳೂರಿನಂಥ ನಗರಗಳಲ್ಲಿ 'ಸುಲಭ್ ಇಂಟರ್‌ನ್ಯಾಷನಲ್'ನಂತಹ ಪ್ರತಿಷ್ಠಿತ ಸಂಸ್ಥೆಗಳು ಶೌಚಾಲಯಗಳ ನಿರ್ವಹಣೆ ಜವಾಬ್ದಾರಿ ಹೊತ್ತಿದ್ದರೆ ಅಥವಾ ಹಣ ಕೊಟ್ಟು ಬಳಕೆ ಮಾಡುವಂತಿದ್ದರೆ ಮಾತ್ರ ಅವುಗಳನ್ನು ಬಳಕೆ ಮಾಡಬಹುದು. ಇಲ್ಲದಿದ್ದರೆ ದುಃಸ್ವಪ್ನವೇ ಕಂಡಂತಾಗುತ್ತದೆ ಎಂದು ಸಮೀಕ್ಷೆ ವೇಳೆ ಜನರು ಹೇಳಿದ್ದಾರೆ.

ಅಲ್ಲದೆ ಹೊರಗೆ ಹೋದ ಸಂದರ್ಭದಲ್ಲಿ ಸಾರ್ವಜನಿಕ ಶೌಚಾಲಯಗಳಿಗೆ ಬದಲಾಗಿ ವಾಣಿಜ್ಯ ಸಂಸ್ಥೆಗಳ ಶೌಚಾಲಯಗಳನ್ನೇ ಹೆಚ್ಚಾಗಿ ಬಳಸುವುದಾಗಿಯೂ ತಿಳಿಸಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ.

ದೇಶದ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಕುರಿತು 341 ಜಿಲ್ಲೆಗಳಲ್ಲಿ, 39,000 ಜನರ ಪ್ರತಿಕ್ರಿಯೆ ಪಡೆದು ಸಮೀಕ್ಷೆ ನಡೆಸಲಾಗಿದೆ.

ನಗರಗಳ ಶೇ 42ರಷ್ಟು ಮಂದಿ ತಮ್ಮ ಜಿಲ್ಲೆ ಅಥವಾ ನಗರದಲ್ಲಿ ಸಾರ್ವಜನಿಕ ಶೌಚಾಲಯಗಳ ಸಂಖ್ಯೆಯಲ್ಲಿ ಸುಧಾರಣೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಶೇ 52ರಷ್ಟು ಮಂದಿ ಸಾರ್ವಜನಿಕ ಶೌಚಾಲಯಗಳ ಸ್ಥಿತಿ ಸುಧಾರಿಸಿಯೇ ಇಲ್ಲ ಎಂದಿದ್ದಾರೆ.

ಶೇ 37ರಷ್ಟು ಜನರು ಸಾರ್ವಜನಿಕ ಶೌಚಾಲಯಗಳು 'ಬಳಕೆ ಮಾಡಬಹುದಾದ ಸ್ಥಿತಿ'ಯಲ್ಲಿವೆ ಎಂದು ತಿಳಿಸಿದ್ದರೆ, ಶೇ 25ರಷ್ಟು ಜನರು 'ಬಳಕೆ ಮಾಡುವ ಸ್ಥಿತಿಯಲ್ಲಿ ಇಲ್ಲ' ಎಂದು ಹೇಳಿದ್ದಾರೆ. ಶೇ 16ರಷ್ಟು ಮಂದಿ ಕೆಟ್ಟ ಸ್ಥಿತಿಯಲ್ಲಿವೆ ಎಂದೂ, ಶೇ 12ರಷ್ಟು ಜನರು 'ತುಂಬಾ ಕೆಟ್ಟದಾಗಿವೆ. ಒಳಗೆ ಹೋಗಿ ಬಳಕೆ ಮಾಡದೆ ಹಾಗೆ ಬರುತ್ತೇವೆ' ಎಂದು ಅಭಿಪ್ರಾಯಪಟ್ಟಿರುವುದಾಗಿ ಸಮೀಕ್ಷೆ ಹೇಳಿದೆ.

ಇನ್ನು ಸಾರ್ವಜನಿಕ ಶೌಚಾಲಯಗಳಲ್ಲಿನ ನೈರ್ಮಲ್ಯ, ಸ್ವಚ್ಛತೆ ಮತ್ತು ನಿರ್ವಹಣೆ ಕುರಿತ ಪ್ರಶ್ನೆಗೆ ಶೇ 10ರಷ್ಟು ಮಂದಿ ಮಾತ್ರ ತಮ್ಮ ನಗರ ಅಥವಾ ಜಿಲ್ಲೆಯ ಶೌಚಾಲಯಗಳ ನಿರ್ವಹಣೆ ಉತ್ತಮವಾಗಿದೆ ಎಂದು ಹೇಳಿದ್ದಾರೆ. ಬಹುಸಂಖ್ಯಾತ ಶೇ 53ರಷ್ಟು ಜನರು ಅತ್ಯಂತ ಕಳಪೆ ಮತ್ತು ಬಳಸಲಾಗದ ಸ್ಥಿತಿಯಲ್ಲಿವೆ ಎಂದು ಹೇಳಿದ್ದಾರೆ. ಇನ್ನು ಶೇ 37ರಷ್ಟು ಜನರು ಸಾರ್ವಜನಿಕ ಶೌಚಾಲಯಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ನಿರ್ವಹಣೆ ಚೆನ್ನಾಗಿಲ್ಲ ಎಂದು ತಿಳಿಸಿರುವುದಾಗಿ ಸಮೀಕ್ಷೆಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರವಾಸ ಆರಂಭಿಸಲಿರುವ ಚಂದ್ರಬಾಬು ನಾಯ್ಡು ಪತ್ನಿ

ಹೈದರಾಬಾದ್: ತೆಲುಗು ದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರ ಪರ ಜನಾಭಿಪ್ರಾಯ ರೂಪಿಸುವ ಸಲುವಾಗಿ ರಾಜ್ಯದಾದ್ಯಂತ ಪ್ರವಾಸ ಕೈಗೊಳ್ಳಲು ಅವರ ಕುಟುಂಬದ ಮಹಿಳಾ ಸದಸ್ಯರು ತಯಾರಿ ನಡೆಸಿದ್ದಾರೆ.

ಕೌಶಲ ಅಭಿವೃದ್ಧಿ ನಿಗಮದ ಹಣ ದುರುಪಯೋಗಪಡಿಸಿರುವ ಪ್ರಕರಣಕ್ಕೆ ಸಂಬಂಧಿಸಿ ಆಂಧ್ರಪ್ರದೇಶ ಸಿಐಡಿ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ನಾಯ್ಡು ಅವರು ಸಲ್ಲಿಸಿದ ಅರ್ಜಿ ವಿಚಾರಣೆಯನ್ನು ಸುಪ್ರೀಂ ಮಂಗಳವಾರಕ್ಕೆ ನಿಗದಿಪಡಿಸಿದೆ.

ನಾಯ್ಡು ಪತ್ನಿ ನಾರಾ ಭುವನೇಶ್ವರಿ ಅವರು ಯಾತ್ರೆ ಕೈಗೊಳ್ಳುವುದು ಸುಪ್ರೀಂ ಕೋರ್ಟ್‌ನ ತೀರ್ಪು ಆಧರಿಸಿದೆ. ಬಸ್ ಮೂಲಕ ನಡೆಸುವ ಯಾತ್ರೆ ಇದಾಗಿದ್ದು, ಆಂಧ್ರಪ್ರದೇಶದ ಪ್ರತಿ ಜಿಲ್ಲೆಗಳಿಗೆ ತೆರಳಿ ಅವರು ಜನಾಭಿಪ್ರಾಯ ರೂಪಿಸಲಿದ್ದಾರೆ. ತಮ್ಮ ಪತಿಯ ಬಂಧನದ ಹಿಂದೆ ರಾಜಕೀಯ ದುರುದ್ದೇಶವಿದೆ ಎಂದು ಅವರು ಜನರಿಗೆ ವಿವರಿಸಲಿದ್ದಾರೆ ಎನ್ನಲಾಗಿದೆ.

ನಾಯ್ಡು ಅವರ ವಿಧಾನಸಭಾ ಕ್ಷೇತ್ರವಾದ ಚಿತ್ತೂರಿನ ಕುಪ್ಪಂನಿಂದಲೇ ಯಾತ್ರೆ ಆರಂಭಿಸುವ ಸಾಧ್ಯತೆ ಇದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ರಾಜ್ಯ ಪ್ರವಾಸಕ್ಕೆ ಸಿದ್ಧತೆಗಳು ನಡೆದಿವೆ. ಪ್ರವಾಸದ ನಕ್ಷೆಯನ್ನು ಅಂತಿಮಗೊಳಿಸಲಾಗಿದೆ. ನಾಯ್ಡು ಪರವಾಗಿ ಸುಪ್ರೀಂ ಕೋರ್ಟ್ ಆದೇಶ ನೀಡಿದರೆ ಪ್ರವಾಸ ಕೈಬಿಡಲಾಗುವುದು. ನಾಯ್ಡು ವಿರುದ್ಧವಾಗಿ ಆದೇಶ ಹೊರಬಿದ್ದರೆ ಭುವನೇಶ್ವರಿ ಅವರು ಅ.5ರಿಂದ ಪ್ರವಾಸ ಆರಂಭಿಸುವರು' ಎಂದು ಮೂಲಗಳು ತಿಳಿಸಿವೆ.

ಮೂವರು ಉಗ್ರರ ಸೆರೆ: ಐಎಸ್ ಜೊತೆ ನಂಟು ಶಂಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಹುಡುಕಾಡುತ್ತಿದ್ದ ಉಗ್ರ ಶಾನವಾಜ್ ಹಾಗೂ ಆತನ ಇಬ್ಬರು ಸಹಚರರನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ಈತನಿಗೆ ಭಯೋತ್ಪಾದನಾ ಸಂಘಟನೆ ಐಎಸ್ ಜೊತೆಗೆ ನಂಟು ಇರಬಹುದು ಎಂಬ ಶಂಕೆ ಇದೆ ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ಹೇಳಿದ್ದಾರೆ.

ಪುಣೆ ಪೊಲೀಸರ ವಶದಲ್ಲಿದ್ದ ಶಾನವಾಜ್, ಅಲ್ಲಿಂದ ತಪ್ಪಿಸಿಕೊಂಡು ದೆಹಲಿಯಲ್ಲಿ ವಾಸವಾಗಿದ್ದ. ಆತನನ್ನು ಹಿಡಿದು ಕೊಟ್ಟವರಿಗೆ ₹3 ಲಕ್ಷ ಬಹುಮಾನ ಕೊಡುವುದಾಗಿ ಘೋಷಿಸಲಾಗಿತ್ತು.

ಶಾನವಾಜ್‌ನನ್ನು ಆಗ್ನೇಯ ದೆಹಲಿಯಲ್ಲಿ ಭಾನುವಾರ ರಾತ್ರಿ ಬಂಧಿಸಲಾಗಿದೆ. ಆತನ ಸಹಚರರಾದ ಮಹಮ್ಮದ್ ರಿಜ್ವಾನ್ ಅಶ್ರಫ್ ಮತ್ತು ಮಹಮ್ಮದ್ ಅರ್ಶದ್ ವಾರ್ಸಿಯನ್ನು ಉತ್ತರ ಪ್ರದೇಶದ ಲಖನೌ ಮತ್ತು ಮೊರದಾಬಾದ್‌ನಲ್ಲಿ ಬಂಧಿಸಲಾಗಿದ್ದು, ಮೂವರನ್ನು ಒಂದು ವಾರ ಕಾಲ ಪೊಲೀಸ್ ವಶಕ್ಕೆ ಪಡೆಯಲಾಗಿದೆ.

ಮೂವರು ಬಂಧಿತರು ಎಂಜಿನಿಯರಿಂಗ್ ಪದವೀಧರರಾಗಿದ್ದು, ಪಶ್ಚಿಮ ಮತ್ತು ದಕ್ಷಿಣ ಭಾರತದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ಆ ಸ್ಥಳಗಳ ಮಾಹಿತಿ ಸಂಗ್ರಹಿಸಿದ್ದರು. ಅವರು ತಮ್ಮ ನೆಲೆಯನ್ನು ಪಶ್ಚಿಮ ಘಟ್ಟಗಳಲ್ಲಿ ಸ್ಥಾಪಿಸಲು ಯೋಜಿಸಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಶಾನವಾಜ್‌ನಲ್ಲಿದ್ದ ಕೆಲವು ರಾಸಾನಿಯಕಗಳು ಮತ್ತು ನಾಡಬಾಂಬ್ ತಯಾರಿಕೆಗೆ ಬಳಸಬಹುದಾದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಂಧಿತರ ಬಿಡುಗಡೆಗೆ ವಿದ್ಯಾರ್ಥಿ ಸಂಘಟನೆಗಳ ಆಗ್ರಹ

ಚುರಾಚಾಂದಪುರ ಬಂದ್: ಜೀವನ ಅಸ್ತವ್ಯಸ್ತ

ಇಂಫಾಲ್ (ಪಿಟಿಐ): ಮಣಿಪುರದ ಬುಡಕಟ್ಟು ಜನಾಂಗದ ಪ್ರಾಬಲ್ಯವಿರುವ ಚುರಾಚಾಂದಪುರ ಜಿಲ್ಲೆಯಲ್ಲಿ ವಿವಿಧ ಸಂಘಟನೆಗಳು ಸೋಮವಾರ ಬಂದ್‌ಗೆ ಕರೆ ನೀಡಿದ್ದರಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿತ್ತು.

ಎನ್‌ಐಎ ಮತ್ತು ಸಿಬಿಐ ತನಿಖಾ ಸಂಸ್ಥೆಗಳು, ಅಪ್ರಾಪ್ತ ವಯಸ್ಸಿನ ಇಬ್ಬರು ಸೇರಿ ಏಳು ಮಂದಿಯನ್ನು ಬಂಧಿಸಿರುವುದನ್ನು ಖಂಡಿಸಿ ಕುಕಿ ಸಮುದಾಯದ ಸಂಘಟನೆಗಳು ಬಂದ್‌ಗೆ ಕರೆ ನೀಡಿದ್ದವು.

ಬಂದ್ ಪರಿಣಾಮ ಸಾರ್ವಜನಿಕ ವಾಹನಗಳು ರಸ್ತೆಗೆ ಇಳಿಯಲಿಲ್ಲ. ಚುರಾಚಾಂದಪುರ ಜಿಲ್ಲೆಯಲ್ಲಿ ಮಾರುಕಟ್ಟೆಗಳು ಮತ್ತು ಅಂಗಡಿಗಳನ್ನು ಮುಚ್ಚಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಚುರಾಚಾಂದಪುರದ ಜಂಟಿ ವಿದ್ಯಾರ್ಥಿ ಸಂಘಟನೆ (ಜೆಎಸ್‌ಬಿ) ಜಿಲ್ಲೆಯಲ್ಲಿ ಸೋಮವಾರ ಬೆಳಿಗ್ಗೆ 6 ಗಂಟೆಯಿಂದ 12 ತಾಸು ಕಾಲ ಬಂದ್‌ಗೆ ಕರೆ ನೀಡಿತ್ತು. ಅಲ್ಲದೆ, ಮಣಿಪುರದ ಮಾನ್ಯತೆ ಪಡೆದ ಆದಿವಾಸಿಗಳ ಒಕ್ಕೂಟವಾದ ಐಟಿಎಲ್‌ಎಫ್, ಬಂಧನ ವಿರೋಧಿಸಿ ಸೋಮವಾರ ಬೆಳಿಗ್ಗೆ 10ರಿಂದ ಜಿಲ್ಲೆಯಲ್ಲಿ ಅನಿರ್ದಿಷ್ಟಾವಧಿ ಬಂದ್‌ಗೆ ಕರೆ ನೀಡಿದ್ದು, ಬಂಧಿತರನ್ನು 48 ಗಂಟೆಗಳ ಒಳಗೆ ಬಿಡುಗಡೆ ಮಾಡಬೇಕೆಂದು ಗಡುವು ನೀಡಿದೆ.

'ಸಾಕ್ಷ್ಯ ಆಧರಿಸಿಯೇ ಬಂಧನ'

ಇಂಫಾಲ್ (ಪಿಟಿಐ): ಮಣಿಪುರದಲ್ಲಿನ ಘಟನೆಗಳಲ್ಲಿ ಎನ್‌ಐಎ ಮತ್ತು ಸಿಬಿಐ ಕೈವಾಡವಿದೆ ಎಂದು ಬುಡಕಟ್ಟು ಗುಂಪುಗಳು ಮಾಡುತ್ತಿರುವ ಆರೋಪಗಳನ್ನು ಕೇಂದ್ರೀಯ ತನಿಖಾ ಏಜೆನ್ಸಿಗಳು ಅಲ್ಲಗಳೆದಿದ್ದು ಹಿಂಸಾಚಾರಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಆಧರಿಸಿಯೇ ಹಲವರನ್ನು ಬಂಧಿಸಲಾಗಿದೆ ಎಂದು ಸ್ಪಷ್ಟಪಡಿಸಿವೆ.

ಮಣಿಪುರ ಬೆಟ್ಟಗಳ ಕುಕಿ–ಜೋ ಸಮುದಾಯ ಪ್ರತಿನಿಧಿಸುವ ಸ್ಥಳೀಯ ಬುಡಕಟ್ಟು ನಾಯಕರ ಫ್ರಂಟ್ (ಐಟಿಎಲ್‌ಎಫ್) ಮಾಡಿರುವ ಆರೋಪಗಳನ್ನು ತಳ್ಳಿಹಾಕಿದ ಎರಡೂ ಸಂಸ್ಥೆಗಳ ಅಧಿಕಾರಿಗಳು, ಯಾವುದೇ ಸಮುದಾಯ, ಧರ್ಮ ಅಥವಾ ಪಂಗಡದ ವಿರುದ್ಧ ಪಕ್ಷಪಾತ ತೋರಿಸಿಲ್ಲ. ಕಾನೂನು ಪ್ರಕಾರವೇ ಕರ್ತವ್ಯ ಪಾಲಿಸಲಾಗಿದೆ. ಆದರೆ, ತನಿಖೆಯ ಹಳಿತಪ್ಪಿಸಲು ಆಧಾರ ರಹಿತ ಆರೋಪ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ.

ಏಷ್ಯನ್ ಗೇಮ್ಸ್ ಹಾಕಿ: ಹರ್ಮನ್‌ಪ್ರೀತ್, ಮನದೀಪ್ ಸಿಂಗ್ ಹ್ಯಾಟ್ರಿಕ್

ನಾಲ್ಕರ ಘಟ್ಟಕ್ಕೆ ಭಾರತ ಲಗ್ಗೆ


ಗೋಲು ಗಳಿಸಿದ ಸಂತಸದಲ್ಲಿ ಭಾರತ ಪುರುಷರ ಹಾಕಿ ತಂಡದ ಆಟಗಾರರು –ಪಿಟಿಐ ಚಿತ್ರ

ಹಾಂಗ್‌ಝೌ (ಪಿಟಿಐ): ಹ್ಯಾಟ್ರಿಕ್ ಸಾಧನೆ ಮಾಡಿದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಮನದೀಪ್ ಸಿಂಗ್ ಅವರ ಆಟದಿಂದ ಭಾರತ ತಂಡವು ಹಾಕಿ ಸ್ಪರ್ಧೆಯ ಸೆಮಿಫೈನಲ್ ಪ್ರವೇಶಿಸಿತು.

ಸೋಮವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 12–0 ಯಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿತು. ಹರ್ಮನ್‌ಪ್ರೀತ್ (2ನೇ ನಿ, 4ನಿ, 32ನಿ) ಅವರು ಮೂರು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸಿದರು. ಮನದೀಪ್ (18ನಿ, 24ನಿ ಹಾಗೂ 46ನಿ) ಕೂಡ ಹ್ಯಾಟ್ರಿಕ್ ದಾಖಲಿಸಿದರು.

ಲಲಿತ್ ಕುಮಾರ್ ಉಪಾಧ್ಯಾಯ (23ನಿ), ಅಮಿತ್ ರೋಹಿದಾಸ್ (28ನಿ), ಅಭಿಷೇಕ್ (41ನಿ, 57ನಿ), ನೀಲಕಂಠ ಶರ್ಮಾ (47ನಿ) ಮತ್ತು ಗುರ್ಜಂತ್ ಸಿಂಗ್(56ನಿ) ತಲಾ ಒಂದು ಗೋಲು ಹೊಡೆದರು. ಆದರೆ ಬಾಂಗ್ಲಾದ ಆಟಗಾರರಿಗೆ ಒಂದು ಗೋಲು ಹೊಡೆಯಲೂ ಭಾರತದ ರಕ್ಷಣಾ ಪಡೆ ಆಸ್ಪದ ನೀಡಲಿಲ್ಲ.

ಹರ್ಮನ್ ಬಳಗವು ಒಟ್ಟು ಏಳು ಫೀಲ್ಡ್ ಗೋಲುಗಳನ್ನು ದಾಖಲಿಸಿತು. ತಂಡವು ಲಭಿಸಿದ 11 ಪೆನಾಲ್ಟಿ ಕಾರ್ನರ್‌ಗಳಲ್ಲಿ ಐದು ಗೋಲು ಗಳಿಸುವಲ್ಲಿ ಯಶಸ್ವಿಯಾಯಿತು. ಪ್ರಥಮಾರ್ಧದಲ್ಲಿ ಆರು ಮತ್ತು ನಂತರದ ಅವಧಿಯಲ್ಲಿ ಆರು ಗೋಲುಗಳನ್ನು ಗಳಿಸಿತು.

ಯುವ ಆಟಗಾರ ಅಭಿಷೇಕ್ ಮತ್ತು ಮನದೀಪ್ ಸಿಂಗ್ ಅವರು ಪಾದರಸದಷ್ಟೇ ಚುರುಕಾಗಿ ಆಡಿದರು. ನಿಖರವಾದ ಪಾಸ್‌ಗಳನ್ನು ನೀಡಿದರು. ಚೆಂಡಿನ ಮೇಲೆ ಹಿಡಿತ ಸಾಧಿಸಿದರು.

ಬಿ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿರುವ ತಂಡದ ಎದುರು ಬುಧವಾರ ನಡೆಯಲಿರುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತ ತಂಡವು ಆಡಲಿದೆ.

19th Asian Games
Hangzhou 2022

ಬ್ಯಾಸ್ಕೆಟ್‌ಬಾಲ್: ಮಹಿಳಾ ತಂಡಕ್ಕೆ ಸೋಲು

ಹಾಂಗ್‌ಝೌ (ಪಿಟಿಐ): ಭಾರತ ಮಹಿಳಾ ತಂಡದವರು ಏಷ್ಯನ್ ಕ್ರೀಡಾಕೂಟದ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ 57–96 ರಿಂದ ಉತ್ತರ ಕೊರಿಯಾ ತಂಡದ ಕೈಯಲ್ಲಿ ಪರಾಭವಗೊಂಡರು.

ಶಾವೊಕ್ಸಿಂಗ್ ಒಲಿಂಪಿಕ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು ಪ್ರಬಲ ಎದುರಾಳಿಗಳಿಗೆ ತಕ್ಕ ಪೈಪೋಟಿ ನೀಡಲು ವಿಫಲರಾದರು. ಕೊರಿಯಾ ತಂಡ ನಾಲ್ಕು ಕ್ವಾರ್ಟರ್‌ಗಳಲ್ಲೂ (26–20, 26–6, 22–17, 22–14) ಮೇಲುಗೈ ಸಾಧಿಸಿತು. ಮೊದಲ ಕ್ವಾರ್ಟರ್‌ನಲ್ಲಿ ಅಲ್ಪ ಪ್ರತಿರೋಧ ಒಡ್ಡಿದ ಭಾರತ ತಂಡ, ಆ ಬಳಿಕ ನಿರಾಸೆ ಅನುಭವಿಸಿತು.

‘ಎ’ ಗುಂಪಿನಲ್ಲಿದ್ದ ಭಾರತ, ಲೀಗ್ ಹಂತದಲ್ಲಿ ಇಂಡೊನೇಷ್ಯಾ (66–46) ಮತ್ತು ಮಂಗೋಲಿಯ (68–62) ತಂಡಗಳನ್ನು ಮಣಿಸಿದ್ದರೆ, ಹಾಲಿ ಚಾಂಪಿಯನ್ ಚೀನಾ ಎದುರು (53–111) ಸೋತಿತ್ತು.

ಉತ್ತರ ಕೊರಿಯಾ ತಂಡ ಮಂಗಳವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಚೀನಾ ವಿರುದ್ಧ ಪೈಪೋಟಿ ನಡೆಸಲಿದೆ.

ಜ್ಯೋಶ್ನಾ ಚಿಣ್ಣಪ್ಪಗೆ ಆಘಾತಕಾರಿ ಸೋಲು

ಹಾಂಗ್‌ಝೌ (ಪಿಟಿಐ): ಸ್ಕ್ವಾಷ್‌ನಲ್ಲಿ ಪದಕ ಗೆಲ್ಲುವ ನೆಚ್ಚಿನ ಆಟಗಾರ್ತಿಯಾಗಿದ್ದ ಭಾರತದ ಜ್ಯೋಶ್ನಾ ಚಿಣ್ಣಪ್ಪ, ಏಷ್ಯನ್ ಗೇಮ್ಸ್ ಮಹಿಳೆಯರ ಸಿಂಗಲ್ಸ್‌ನಿಂದ ಹೊರಬಿದ್ದರು. ಸೋಮವಾರ ನಡೆದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಅವರು ತುಂಬಾ ಕೆಳಕ್ರಮಾಂಕದ ದಕ್ಷಿಣ ಕೊರಿಯಾದ ಆಟಗಾರ್ತಿ ಹಿಯೊ ಮಿಂಗ್‌ಇಯೊಂಗ್ ಎದುರು 1–3 ರಿಂದ ಆಘಾತಕಾರಿ ಸೋಲು ಅನುಭವಿಸಿದರು.

ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದ ಜ್ಯೋಶ್ನಾ 4–11, 12–10, 9–11, 8–11 ರಿಂದ ಹಿಯೊ ಎದುರು ಸೋಲನುಭವಿಸಿದರು. ಕೊರಿಯಾ ಆಟಗಾರ್ತಿ ವಿಶ್ವ ಕ್ರಮಾಂಕದಲ್ಲಿ 158ನೇ ಸ್ಥಾನದಲ್ಲಿದ್ದಾರೆ. 37 ನಿಮಿಷಗಳಲ್ಲಿ ಗೆದ್ದ ಅವರು ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

2018ರ ಜಕಾರ್ತಾ ಕ್ರೀಡೆಗಳ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದ 37 ವರ್ಷದ ಚೆನ್ನೈ ಆಟಗಾರ್ತಿ ಇಲ್ಲೂ ಪದಕಕ್ಕೆ ಫೆವರೀಟ್ ಆಗಿದ್ದರು.

ಕಣದಲ್ಲಿರುವ ಭಾರತದ ಇನ್ನೊಬ್ಬ ಆಟಗಾರ್ತಿ ತನ್ವಿ ಖನ್ನಾ ಸುಲಭ ಗೆಲುವಿನೊಡನೆ ಎಂಟರ ಘಟ್ಟ ತಲುಪಿದರು. ಅವರು 11–1, 11–3, 11–2 ರಿಂದ ಥಾಯ್ಲೆಂಡ್‌ನ ಅರಿಚಯಾ ಚುಜಿತ್ ಅವರನ್ನು ಮಣಿಸಿದರು.

ಬ್ಯಾಡ್ಮಿಂಟನ್: ಶ್ರೀಕಾಂತ್ ಮುನ್ನಡೆ


ಭಾರತದ ಚಿರಾಗ್ ಶೆಟ್ಟಿ– ಸಾತ್ವಿಕ್‌ರಾಜ್ ರಣಕಿರೆಡ್ಡಿ

ಹಾಂಗ್‌ಝೌ (ಪಿಟಿಐ): ಭಾರತದ ಅನುಭವಿ ಬ್ಯಾಡ್ಮಿಂಟನ್ ಆಟಗಾರ ಕಿದಂಬಿ ಶ್ರೀಕಾಂತ್ ಸೋಮವಾರ ಏಷ್ಯನ್ ಕ್ರೀಡಾಕೂಟದ ಪುರುಷರ ಸಿಂಗಲ್ಸ್‌ನಲ್ಲಿ ವಿಯೆಟ್ನಾಂನ ಫಟ್ ಲೆ ಡಕ್ ವಿರುದ್ಧ ನೇರ ಗೇಮ್‌ಗಳ ಮೂಲಕ ಗೆಲುವು ಸಾಧಿಸಿ ಎರಡನೇ ಸುತ್ತಿಗೆ ಮುನ್ನಡೆದರು.

2021ರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಭಾರತದ ಆಟಗಾರ 21–10, 21–10 ರಿಂದ ಎದುರಾಳಿ ಆಟಗಾರನನ್ನು ಹಿಮ್ಮೆಟ್ಟಿಸಿದರು. ಮೊದಲ ಪಂದ್ಯವನ್ನು ಕೇವಲ 29 ನಿಮಿಷದಲ್ಲಿ ಮುಗಿಸಿದ ಶ್ರೀಕಾಂತ್ ಅವರು, ಮುಂದಿನ ಸುತ್ತಿನಲ್ಲಿ ಕೊರಿಯಾದ ಲೀ ಯುನ್ ಗ್ಯು ಅವರನ್ನು ಎದುರಿಸುವರು.

ಭಾರತದ ಜೋಡಿ ಸಾತ್ವಿಕ್‌ರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು 21-11, 21-16 ರಿಂದ ಹಾಂಗ್‌ಕಾಂಗ್‌ನ ಚೌ ಹಿನ್ ಲಾಂಗ್ ಮತ್ತು ಲುಯಿ ಚುನ್ ವೈ ವಿರುದ್ಧ ಗೆಲುವು ಸಾಧಿಸಿ, ಪುರುಷರ ಡಬಲ್ಸ್‌ನಲ್ಲಿ ಪ್ರೀ ಕ್ವಾರ್ಟರ್‌ಫೈನಲ್‌ಗೆ ಸಾಗಿದರು. ವಿಶ್ವದ ಮೂರನೇ ಕ್ರಮಾಂಕದ ಈ ಜೋಡಿ ಇಂಡೊನೇಷ್ಯಾದ ಲಿಯೊ ರೋಲಿ ಕಾರ್ನಾಂಡೊ ಮತ್ತು ಡೇನಿಯಲ್ ಮಾರ್ಥಿನ್ ಅವರ ಸವಾಲನ್ನು ಎದುರಿಸಲಿದೆ.

ಮಿಕ್ಸೆಡ್ ಡಬಲ್ಸ್‌ನಲ್ಲಿ ಸಾಯಿ ಪ್ರತೀಕ್– ತನೀಶಾ ಕ್ರಾಸ್ಟೊ ಜೋಡಿಯು 21-18, 21-14 ರಿಂದ ಮಕಾವ್‌ನ ಲಿಯಾಂಗ್ ಐಯೊಕ್ ಚೊಂಗ್ ಮತ್ತು ವೆಂಗ್ ಚಿ ಎನ್‌ಜಿ ಅವರನ್ನು ಸೋಲಿಸಿತು. ಅವರು ಪ್ರೀ ಕ್ವಾರ್ಟರ್ ಫೈನಲ್ ಸುತ್ತಿನಲ್ಲಿ ಮಲೇಷ್ಯಾದ ಚೆನ್ ಟ್ಯಾಂಗ್ ಜೀ ಮತ್ತು ತೋ ಈ ವೀ ವಿರುದ್ಧ ಸೆಣಸಲಿದ್ದಾರೆ.


ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್ ಮತ್ತು ಧ್ರುವ ಕಪಿಲಾ ಜೋಡಿಯು ಜಪಾನ್ ಆಟಗಾರರ ವಿರುದ್ಧ 3-13 ರಿಂದ ಹಿನ್ನಡೆಯಲ್ಲಿರುವಾಗ ಪಂದ್ಯದಿಂದ ಹಿಂದೆ ಸರಿಯಿತು. ಮತ್ತೊಂದೆಡೆ ಮಿಶ್ರ ಡಬಲ್ಸ್‌ನಲ್ಲಿ ಸಿಕ್ಕಿ ರೆಡ್ಡಿ ಮತ್ತು ರೋಹನ್ ಕಪೂರ್ ಜೋಡಿಯು ಪಂದ್ಯ ಆರಂಭವಾದ ಎರಡೇ ನಿಮಿಷದಲ್ಲಿ ಮಲೇಷ್ಯಾದ ಆಟಗಾರರಿಗೆ ಬಿಟ್ಟುಕೊಟ್ಟಿತು. ಅರ್ಜುನ್ ಬೆನ್ನು ನೋವಿನಿಂದ ಹಾಗೂ ರೋಹನ್ ಕಪೂರ್ ಜ್ವರದಿಂದ ಬಳಲುತ್ತಿದ್ದಾರೆ.

ಟೆನಿಸ್: ಚಂದನ್‌ಗೆ ಗೆಲುವು

ನವದೆಹಲಿ (ಪಿಟಿಐ): ಕರ್ನಾಟಕದ ಆಟಗಾರ, ಅಗ್ರ ಶ್ರೇಯಾಂಕದ ಚಂದನ್ ಶಿವರಾಜ್, ಇಲ್ಲಿನ ಡಿಎಲ್‌ಟಿಎ ಸಂಕೀರ್ಣದಲ್ಲಿ ಸೋಮವಾರ ಆರಂಭವಾದ ಫೆನೆಸ್ತಾ ಓಪನ್ ರಾಷ್ಟ್ರೀಯ ಟೆನಿಸ್ ಚಾಂಪಿಯನ್‌ಷಿಪ್‌ನ 18 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ತಮಿಳುನಾಡಿನ ಕೆವಿನ್ ಕಾರ್ತಿಕ್ ಅವರನ್ನು 6–1, 6–3 ರಿಂದ ಸೋಲಿಸಿದರು.

ಪುರುಷರ ವಿಭಾಗದ ಪಂದ್ಯದಲ್ಲಿ ಕರ್ನಾಟಕದ ಮನೀಷ್ ಜಿ 6–4, 6–4 ರಿಂದ ತಮಿಳುನಾಡಿನ ಸಿದ್ಧಾರ್ಥ ಆರ್ಯ ಅವರನ್ನು ಮಣಿಸಿದರೆ, ಮಹಿಳೆಯರ ವಿಭಾಗದಲ್ಲಿ ಶರ್ಮದಾ ಬಾಲು 6–2, 4–6, 6–1 ರಿಂದ ತೆಲಂಗಾಣದ ಪಾವನಿ ಪಾಠಕ್ ವಿರುದ್ಧ ಗೆದ್ದರು.

ಇರಾನಿ ಕಪ್: ಭಾರತ ಇತರೆ ತಂಡದ ಮೇಲುಗೈ


ವಿದ್ವತ್ ಕಾವೇರಪ್ಪ

ರಾಜಕೋಟ್: ಕರ್ನಾಟಕದ ಮಧ್ಯಮ ವೇಗದ ಬೌಲರ್ ವಿದ್ವತ್ ಕಾವೇರಪ್ಪ (28ಕ್ಕೆ3) ಮತ್ತು ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ (64ಕ್ಕೆ3) ಅವರ ಪರಿಣಾಮಕಾರಿ ದಾಳಿಯ ನೆರವಿನಿಂದ ಭಾರತ ಇತರೆ ತಂಡವು, ಇರಾನಿ ಕಪ್ ಕ್ರಿಕೆಟ್ ಪಂದ್ಯದ ಎರಡನೇ ದಿನವಾದ ಸೋಮವಾರ ಮೇಲುಗೈ ಸಾಧಿಸಿತು.

ದಿನದಾಟ ಮುಗಿದಾಗ ಸೌರಾಷ್ಟ್ರ ತಂಡ ಮೊದಲ ಇನಿಂಗ್ಸ್‌ನಲ್ಲಿ 9 ವಿಕೆಟ್‌ಗೆ 212 ರನ್ ಗಳಿಸಿದೆ. ಇನ್ನೂ 96 ರನ್‌ಗಳ ಹಿನ್ನಡೆಯಲ್ಲಿದ್ದು ಒಂದು ವಿಕೆಟ್ ಮಾತ್ರ ಉಳಿದಿವೆ.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಮೊದಲ ದಿನದ ಕೊನೆಗೆ 8 ವಿಕೆಟ್‌ಗೆ 298 ರನ್ ಗಳಿಸಿದ್ದ ಇತರರ ತಂಡ ಸೋಮವಾರ 4.2 ಓವರುಗಳ ಆಟದಲ್ಲಿ 308 ರನ್‌ಗಳಿಗೆ ಆಲೌಟ್ ಆಯಿತು. ಎಡಗೈ ಸ್ಪಿನ್ನರ್ ಪಾರ್ಥ ಭುತ್ 94 ರನ್ನಿಗೆ 5 ವಿಕೆಟ್ ಗೊಂಚಲು ಪೂರೈಸಿದರು.

ಈ ಋತುವಿನಲ್ಲಿ ದೇಶಿಯ ಕ್ರಿಕೆಟ್‌ನಲ್ಲಿ ಗಮನ ಸೆಳೆಯುವಂಥ ಪ್ರದರ್ಶನ ನೀಡುತ್ತಿರುವ ವಿದ್ವತ್, ಸೌರಾಷ್ಟ್ರದ ಆರಂಭ ಆಟಗಾರರಾದ ಹರ್ವಿಕ್ ದೇಸಾಯಿ (0) ಮತ್ತು ಚಿರಾಗ್ ಜಾನಿ (2) ಅವರ ವಿಕೆಟ್‌ಗಳನ್ನು ಬೇಗನೇ ಪಡೆದು ಒತ್ತಡ ಹೇರಿದರು. ನಾಲ್ಕು ರನ್ನಿಗೆ 2 ವಿಕೆಟ್ ಕಳೆದುಕೊಂಡ ಸೌರಾಷ್ಟ್ರಕ್ಕೆ ಅನುಭವಿ ಚೇತೇಶ್ವರ ಪೂಜಾರ ಮತ್ತು ಸಮರ್ಥ ವ್ಯಾಸ್ 47 ರನ್ ಸೇರಿಸಿ ಚೇತರಿಕೆ ನೀಡಿದರು. ಆದರೆ ನಂತರ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು.

ಮಧ್ಯಮ ಕ್ರಮಾಂಕದಲ್ಲಿ ಅರ್ಪಿತ್ ವಾಸವದಾ (54, 127 ಎಸೆತ, 2x4) ಅವರೊಬ್ಬರೇ ಪ್ರತಿರೋಧ ತೋರಿಸಿ ಅರ್ಧ ಶತಕ ದಾಖಲಿಸಿದರು.

ಸಂಕ್ಷಿಪ್ತ ಸ್ಕೋರು: 1ನೇ ಇನಿಂಗ್ಸ್: ಭಾರತ ಇತರರ ತಂಡ: 94.2 ಓವರುಗಳಲ್ಲಿ 308 (ಸೌರಭ್ ಕುಮಾರ್ 39; ಪಾರ್ಥ ಭುತ್ 94ಕ್ಕೆ5); ಸೌರಾಷ್ಟ್ರ: 80 ಓವರುಗಳಲ್ಲಿ 9 ವಿಕೆಟ್‌ಗೆ 212 (ಸಮರ್ಥ್ ವ್ಯಾಸ್ 29, ಚೇತೇಶ್ವರ ಪೂಜಾರ 29, ಅರ್ಪಿತ್ ವಾಸವದಾ 54, ಪ್ರೇರಕ್ ಮಂಕಡ್ 29, ಜೈದೇವ್ ಉನದ್ಕತ್ ಔಟಾಗದೇ 17; ವಿದ್ವತ್ ಕಾವೇರಪ್ಪ 28ಕ್ಕೆ3, ಸೌರಭ್ ಕುಮಾರ್ 64ಕ್ಕೆ3, ಶಮ್ಸ್ ಮುಲಾನಿ 46 ಕ್ಕೆ2)

ಕ್ರಿಕೆಟ್: ಭಾರತ– ನೇಪಾಳ ಹಣಾಹಣಿ ಇಂದು


ಋತುರಾಜ್ ಗಾಯಕವಾಡ್

ಹಾಂಗ್‌ಝೌ (ಪಿಟಿಐ): ಋತುರಾಜ್ ಗಾಯಕವಾಡ್ ನಾಯಕತ್ವದ ಭಾರತ ತಂಡವು ಏಷ್ಯನ್ ಕ್ರೀಡಾಕೂಟದ ಟಿ20 ಕ್ರಿಕೆಟ್ ನಲ್ಲಿ ಮಂಗಳವಾರ ಕಣಕ್ಕಿಳಿಯಲಿದೆ.


ಭಾರತ ತಂಡವು ಇಲ್ಲಿ ನಡೆಯಲಿರುವ ಕ್ವಾರ್ಟರ್‌ಫೈನಲ್‌ನಲ್ಲಿ ನೇಪಾಳ ತಂಡವನ್ನು ಎದುರಿಸಲಿದೆ. ಋತುರಾಜ್ ಹೋದ ವಾರ ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಆಡಿದ್ದರು. ಇದೀಗ ತಮ್ಮ ವೃತ್ತಿಜೀವನದ ಚೊಚ್ಚಲ ಏಷ್ಯನ್ ಗೇಮ್ಸ್‌ನಲ್ಲಿ ಆಡಲಿದ್ದಾರೆ.

ಈಚೆಗೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪದಾರ್ಪಣೆ ಮಾಡಿದ್ದ ತಿಲಕ್ ವರ್ಮಾ, ಯಶಸ್ವಿ ಜೈಸ್ವಾಲ್, ಬೌಲರ್ ಅರ್ಷದೀಪ್ ಸಿಂಗ್, ಆವೇಶ್ ಖಾನ್, ಆಲ್‌ರೌಂಡರ್ ಶಿವಂ ದುಬೆ, ವಾಷಿಂಗ್ಟನ್ ಸುಂದರ್, ಐಪಿಎಲ್‌ನಲ್ಲಿ ಮಿಂಚಿದ್ದ ರಿಂಕು ಸಿಂಗ್ ಮತ್ತು ರಾಹುಲ್ ತ್ರಿಪಾಠಿ ಅವರು ತಂಡದಲ್ಲಿದ್ದಾರೆ. ಆದ್ದರಿಂದ ಚಿನ್ನದ ಪದಕ ಗೆಲ್ಲುವ ನೆಚ್ಚಿನ ತಂಡವೂ ಆಗಿದೆ.

ಎದುರಾಳಿ ನೇಪಾಳ ತಂಡವು ಅರ್ಹತಾ ಗುಂಪಿನ ಪಂದ್ಯದಲ್ಲಿ ಭರ್ಜರಿಯಾಗಿ ಆಡಿತ್ತು. ಮಂಗೋಲಿಯಾ ಎದುರು ಟಿ20 ಕ್ರಿಕೆಟ್ ಮಾದರಿಯ ಹಲವು ವಿಶ್ವದಾಖಲೆಗಳನ್ನು ನಿರ್ಮಿಸಿತ್ತು. ಆದರೂ ಭಾರತದ ಆಟಗಾರರಿಗೆ ಇರುವ ಅನುಭವ ನೇಪಾಳದ ಆಟಗಾರರಿಗೆ ಇಲ್ಲ. ಆದರೆ ಕಳೆದ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತಕ್ಕೆ ಮುಖಾಮುಖಿಯಾಗಿದ್ದಾಗ ನೇಪಾಳ ಚೆನ್ನಾಗಿ ಆಡಿತ್ತು. ಇಲ್ಲಿಯೂ ಅದೇ ರೀತಿಯಲ್ಲಿ ಪೈಪೋಟಿಯೊಡ್ಡುವ ಉತ್ಸಾಹದಲ್ಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 6.30

ಅಭ್ಯಾಸ ಬಿಟ್ಟು ಮುಂಬೈನತ್ತ ಕೊಹ್ಲಿ


ವಿರಾಟ್ ಕೊಹ್ಲಿ

ತಿರುವನಂತಪುರ (ಪಿಟಿಐ): ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಸೋಮವಾರ ವೈಯಕ್ತಿಕ ಕಾರಣಗಳಿಂದಾಗಿ ನೆಟ್ಸ್ ಅಭ್ಯಾಸಕ್ಕೆ ಹಾಜರಾಗಲಿಲ್ಲ. ಆದರೆ ಮಂಗಳವಾರ ಇಲ್ಲಿ ನಡೆಯಲಿರುವ ನೆದರ್ಲೆಂಡ್ಸ್ ವಿರುದ್ಧದ ಅಭ್ಯಾಸ ಪಂದ್ಯದಲ್ಲಿ ಆಡುವ ನಿರೀಕ್ಷೆ ಇದೆ.

ಸೆ.30ರಂದು ಗುವಾಹಟಿಯಲ್ಲಿ ಆಯೋಜಿಸಲಾಗಿದ್ದ ಇಂಗ್ಲೆಂಡ್ ಎದುರಿನ ಅಭ್ಯಾಸ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಆಗ ಅವರು ಅಲ್ಲಿಂದಲೇ ನೇರವಾಗಿ ಮುಂಬೈಗೆ ತೆರಳಿದ್ದರು. ತುರ್ತು ಕಾರಣಗಳಿಗಾಗಿ ಅವರು ಕುಟುಂಬದೊಂದಿಗೆ ಇರಲು ತೆರಳಿದ್ದಾರೆನ್ನಲಾಗಿದೆ.

‘ಇವತ್ತಿನದು ಐಚ್ಛಿಕ ಅಭ್ಯಾಸವಾಗಿತ್ತು. ಕಡ್ಡಾಯವಾಗಿರಲಿಲ್ಲ. ಕೊಹ್ಲಿ ಅವರು ಶೀಘ್ರದಲ್ಲಿಯೇ ತಂಡವನ್ನು ಸೇರಿಕೊಳ್ಳುವ ನಿರೀಕ್ಷೆ ಇದೆ. ಅವರು ಅಭ್ಯಾಸ ಪಂದ್ಯದಲ್ಲಿ ಆಡುವ ಸಾಧ್ಯತೆಯೂ ಇದೆ‘ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ನಾಯಕ ರೋಹಿತ್ ಶರ್ಮಾ, ಶ್ರೇಯಸ್ ಅಯ್ಯರ್ ಮತ್ತು ಬೌಲರ್ ಮೊಹಮ್ಮದ್ ಶಮಿ ಕೂಡ ನೆಟ್ಸ್‌ನಲ್ಲಿ ಅಭ್ಯಾಸಕ್ಕೆ ಹಾಜರಾಗಲಿಲ್ಲ.

ಆದರೆ, ಕೆ.ಎಲ್. ರಾಹುಲ್, ಶುಭಮನ್ ಗಿಲ್ ಮತ್ತು ಸೂರ್ಯಕುಮಾರ್ ಯಾದವ್ ಅವರು ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಮೊಹಮ್ಮದ್ ಸಿರಾಜ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ಬೌಲಿಂಗ್ ಎದುರು ಬ್ಯಾಟರ್‌ಗಳು ಆಡಿದರು. ಸ್ಪಿನ್ ಜೋಡಿ ಅಶ್ವಿನ್ ಮತ್ತು ರವೀಂದ್ರ ಜಡೇಜ ಕೂಡ ಅಭ್ಯಾಸ ಮಾಡಿದರು.

ವಿಶ್ವಕಪ್ ಟೂರ್ನಿ ಆರಂಭಕ್ಕೂ ಮುನ್ನ ಭಾರತಕ್ಕೆ ಇದು ಕೊನೆಯ ಅಭ್ಯಾಸ ಪಂದ್ಯವಾಗಿದೆ. ಚೆನ್ನೈನಲ್ಲಿ ಇದೇ 8ರಂದು ರೋಹಿತ್ ಬಳಗವು ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಆಡಲಿದೆ.

ಫುಟ್‌ಬಾಲ್: ಬಿಎಫ್‌ಸಿಗೆ ಜಯ

ಬೆಂಗಳೂರು: ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–0 ಯಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ವಿರುದ್ಧ ಜಯಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ ಪರವಾಗಿ ಸತ್ಯೇಂದ್ರ ಸಿಂಗ್ (8ನೇ), ಸಿ.ಕೆ. ರಶೀದ್ (17ನೇ) ಮತ್ತು ಅಮಯ್ ಮೊರಾಜ್ಕರ್ (90 + 5ನೇ) ತಲಾ ಒಂದು ಗೋಲು ಗಳಿಸಿದರು.

ಕೊಡಗು ಎಫ್‌ಸಿ – ರೆಬೆಲ್ಸ್ ಎಫ್‌ಸಿ ತಂಡಗಳ ನಡುವಣ ಪಂದ್ಯ ಗೋಲುರಹಿತವಾಗಿ ಡ್ರಾ ಆಯಿತು.

ಇಂದಿನ ಪಂದ್ಯಗಳು: ರಿಯಲ್ ಚಿಕ್ಕಮಗಳೂರು ಎಫ್‌ಸಿ– ಸೌತ್ ಯುನೈಟೆಡ್ ಎಫ್‌ಸಿ (ಮಧ್ಯಾಹ್ನ 1.30)

ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ– ಕಿಕ್‌ಸ್ಟಾರ್ಟ್ ಎಫ್‌ಸಿ (ಮಧ್ಯಾಹ್ನ 3.30)

ಲಾವಾ: ₹600 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಲಾವಾ ಇಂಟರ್‌ನ್ಯಾಷನಲ್ ಕಂಪನಿಯು ಭಾರತದಲ್ಲಿ ಎರಡು ವರ್ಷಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪಿಸಲು ₹600 ಕೋಟಿ ಹೂಡಿಕೆ ಮಾಡುವುದಾಗಿ ಹೇಳಿದೆ. ಈ ಹೂಡಿಕೆಯ ಮೂಲಕ ₹30 ಸಾವಿರದೊಳಗಿನ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಶೇ 10ರಷ್ಟು ಷೇರುಪಾಲು ಹೊಂದುವ ನಿರೀಕ್ಷೆ ಇಟ್ಟುಕೊಂಡಿರುವುದಾಗಿ ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

02-10-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1750 (-)
ಒಂದು ವಾರದ ಡೆಲಿವರಿ	1745 (-)
ಸೋಯಾ ಕಚ್ಚಾ	835 (-)
ಪಾಮ್ ವಾರದ ಡೆಲಿವರಿ	814(-)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,900 (-)
ಬೆಳ್ಳಿ ಕೆ.ಜಿ 68,500 (-)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1740 (-)
ಸೋಯಾ (ರಿಫೈನ್ಡ್)	₹870 (-)
ಸೂರ್ಯಕಾಂತಿ (ರಿಫೈನ್ಡ್)	₹865 (-)
ಪಾಮೋಲಿನ್	₹816 (-)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹125

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹535
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹537

ಮುದ್ರೆಮನೆ ಕಾಫಿ

(50 ಕೆಜಿಗೆ)



ಎಪಿ	₹11000
ಎಸಿ	₹6300
ಆರ್‌ಪಿ	₹9900
ಆರ್‌ಸಿ	₹5830

2027ರ ವೇಳೆಗೆ 10 ಗಿಗಾವಾಟ್: ಮೂಲಗಳ ಮಾಹಿತಿ

ಅದಾನಿ: ಸೌರ ವಿದ್ಯುತ್ ಉತ್ಪಾದನೆ ಹೆಚ್ಚಳ?



ಮುಖ್ಯಾಂಶಗಳು
- ಗುಜರಾತ್‌ನ ಮುಂದ್ರಾದಲ್ಲಿ ಘಟಕ
- ಸೌರ ವಿದ್ಯುತ್ ಉತ್ಪಾದನೆಗೆ ₹3,270 ಕೋಟಿ ಬಂಡವಾಳ ಸಂಗ್ರಹ

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ಒಡೆತನದ ಅದಾನಿ ಸಮೂಹವು 2027ರ ವೇಳೆಗೆ 10 ಗಿಗಾವಾಟ್ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಲು ಯೋಜಿಸಿರುವುದಾಗಿ ಮೂಲಗಳು ತಿಳಿಸಿವೆ.

ಭಾರತದಲ್ಲಿ ನವೀಕರಿಸಬಲ್ಲ ಇಂಧನ ವಹಿವಾಟಿನಲ್ಲಿ ಹೆಚ್ಚಿನ ಪಾಲು ಹೊಂದುವ ಆಲೋಚನೆಯನ್ನು ಕಂಪನಿ ಹೊಂದಿದೆ ಎಂದು ಹೇಳಿವೆ. ಭಾರತದಲ್ಲಿ ಸೌರ ವಿದ್ಯುತ್ ಉತ್ಪಾದನೆಯು 2014ರ ಮಾರ್ಚ್‌ನಲ್ಲಿ 2.63 ಗಿಗಾವಾಟ್‌ನಷ್ಟು ಇದ್ದಿದ್ದು, 2023ರ ಜುಲೈ ವೇಳೆಗೆ 71.10 ಗಿಗಾವಾಟ್‌ಗೆ ಏರಿಕೆ ಆಗಿದೆ.

ಅದಾನಿ ಸಮೂಹವು ಸದ್ಯ 4 ಗಿಗಾ ವಾಟ್ ಸೌರ ವಿದ್ಯುತ್ ಉತ್ಪಾದನೆ ಮಾಡುತ್ತಿದೆ. ಗುಜರಾತ್‌ನ ಮುಂದ್ರಾದಲ್ಲಿ 10 ಗಿಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕವನ್ನುಕಂಪನಿಯುನಿರ್ಮಿಸುತ್ತಿದೆ. ಕಂಪನಿಯ ಅತಿದೊಡ್ಡ ತಯಾರಿಕಾ ಘಟಕ ಇದಾಗಲಿದ್ದು, 13 ಸಾವಿರಕ್ಕೂ ಅಧಿಕ ಉದ್ಯೋಗ ಸೃಷ್ಟಿಸಲಿದೆ ಎಂದು ಮೂಲಗಳು ತಿಳಿಸಿವೆ.

ಅದಾನಿ ಸೋಲಾರ್ ಕಂಪನಿಯು 15 ತಿಂಗಳಿನಲ್ಲಿ 3 ಸಾವಿರ ಮೆಗಾವಾಟ್ ರಫ್ತು ಮಾಡುವ ಒಪ್ಪಂದ ಮಾಡಿಕೊಂಡಿದೆ ಎಂದು ತಿಳಿಸಿವೆ. ಸೌರ ವಿದ್ಯುತ್ ತಯಾರಿಕೆಗಾಗಿ ಬರ್ಕ್‌ಲೇಸ್ ಪಿಎಲ್‌ಸಿ ಮತ್ತು ಡಾಯಿಷ್ ಬ್ಯಾಂಕ್ ಎಜಿಯಿಂದ ಕಂಪನಿಯು ಈಚೆಗಷ್ಟೇ ₹3,270 ಕೋಟಿ ಬಂಡವಾಳ ಸಂಗ್ರಹಿಸಿದೆ ಎಂದೂ ಹೇಳಿವೆ.

ಅದಾನಿ ಸೋಲಾರ್ ಕಂಪನಿಯು 2016ರಲ್ಲಿ ತಯಾರಿಕೆ ಆರಂಭಿಸಿತು. ಆಗ 1.2 ಗಿಗಾವಾಟ್ ಸೌರ ಕೋಶ ಮತ್ತು ಸೌರ ಫಲಕ ತಯಾರಿಕಾ ಸಾಮರ್ಥ್ಯವನ್ನು ಅದು ಹೊಂದಿತ್ತು. ಆರು ತಿಂಗಳ ಒಳಗಾಗಿ ತಯಾರಿಕಾ ಸಾಮರ್ಥ್ಯವು ಮೂರುಪಟ್ಟಿಗೂ ಅಧಿಕ ಏರಿಕೆ ಕಂಡಿದ್ದು, 4ಗಿಗಾವಾಟ್ ಸೌರ ಫಲಕ ಮತ್ತು 4ಗಿಗಾವಾಟ್ ಸೌರ ಕೋಶ ತಯಾರಿಕಾ ಸಾಮರ್ಥ್ಯವನ್ನು ಕಂಪನಿಯು ಸದ್ಯ ಹೊಂದಿದೆ.

ಭಾರತವು 2022–23ರಲ್ಲಿ ₹8,840 ಕೋಟಿ ಮೌಲ್ಯದ ಸೌರ ಫಲಕ ಮತ್ತು ಸೌರ ಕೋಶ ರಫ್ತು ಮಾಡಿದೆ. 2021–22ರಲ್ಲಿ ₹1,810 ಕೋಟಿ ಮೌಲ್ಯದ ರಫ್ತು ಮಾಡಲಾಗಿತ್ತು. ಇದಕ್ಕೆ ಹೋಲಿಸಿದರೆ ಶೇ 364ರಷ್ಟು ಏರಿಕೆ ಕಂಡುಬಂದಿದೆ ಎಂದು ರೇಟಿಂಗ್ ಏಜೆನ್ಸಿ ಇಕ್ರಾ ಹೇಳಿದೆ.

ಜೆಎಸ್‌ಡಬ್ಲ್ಯು ಇನ್ಫ್ರಾ ಷೇರು ಇಂದಿನಿಂದ ವಹಿವಾಟು



ನವದೆಹಲಿ (ಪಿಟಿಐ): ಜೆಎಸ್‌ಡಬ್ಲ್ಯು ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ ಷೇರು ಗಳು ದೇಶದ ಷೇರುಪೇಟೆಗಳಲ್ಲಿ ಮಂಗಳವಾರದಿಂದ ವಹಿವಾಟು ಆರಂಭಿಸಲಿವೆ.

ಸಾಲಪತ್ರಗಳ ‘ಬಿ’ ಸಮೂಹದಲ್ಲಿ ಕಂಪನಿಯ ಷೇರುಗಳು ವಹಿವಾಟು ನಡೆಸಲಿವೆ ಎಂದು ಮುಂಬೈ ಷೇರು ವಿನಿಮಯ ಕೇಂದ್ರವು (ಬಿಎಸ್‌ಇ) ಸೆಪ್ಟೆಂಬರ್ 29ರಂದು ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಕಂಪನಿಯು ₹2,800 ಕೋಟಿ ಮೊತ್ತದ ಐಪಿಒ ಕಳೆದ ವಾರ ಮುಕ್ತಾಯವಾಗಿದೆ. ಆ ಬಳಿಕ ಷೇರುಪೇಟೆ ವಹಿವಾಟು ಆರಂಭ ಆದ ಎರಡು ದಿನಗಳಲ್ಲೇ ಷೇರುಗಳು ಖರೀದಿಗೆ ಲಭ್ಯವಾಗುತ್ತಿವೆ.

ಐಪಿಒ ಮೂಲಕ ಸಂಗ್ರಹ ಆಗುವ ಒಟ್ಟು ಮೊತ್ತದಲ್ಲಿ ಸಾಲ ಮರುಪಾವತಿಸಲು ₹880 ಕೋಟಿ, ಎಲ್‌ಪಿಜಿ ಟರ್ಮಿನಲ್ ಯೋಜನೆಗಾಗಿ ₹865.75 ಕೋಟಿ ಮತ್ತು ಎಲೆಕ್ಟ್ರಿಕ್ ಸಬ್ ಸ್ಟೇಷನ್ ನಿರ್ಮಾಣ ಮಾಡಲು ₹59.4 ಕೋಟಿ ಹಾಗೂ ಮಂಗಳೂರು ಕಂಟೈನರ್ ಟರ್ಮಿನಲ್ ವಿಸ್ತರಣೆಗಾಗಿ ₹151 ಕೋಟಿ ಬಳಸಲು ಉದ್ದೇಶಿಸಲಾಗಿದೆ ಎಂದು ಕಂಪನಿಯು ತಿಳಿಸಿದೆ.

ಆರಂಭಿಕ ಸಾರ್ವಜನಿಕ ಹೂಡಿಕೆ (ಐಪಿಒ) ಪ್ರಕ್ರಿಯೆ ಪೂರ್ಣಗೊಂಡ ಬಳಿಕ ನಿರ್ದಿಷ್ಟ ಕಂಪನಿಯ ಷೇರು, ಮಾರುಕಟ್ಟೆಯಲ್ಲಿ ಸ್ಥಾನ ಪಡೆದುಕೊಳ್ಳಲು (ಲಿಸ್ಟಿಂಗ್) ಇದ್ದ ಆರು ದಿನಗಳ ಕಾಲಮಿತಿಯನ್ನು ಮೂರು ದಿನಗಳಿಗೆ ತಗ್ಗಿಸಲಾಗಿದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಆಗಸ್ಟ್‌ನಲ್ಲಿ ಈ ಬದಲಾವಣೆ ತಂದಿದೆ. ಸೆ. 1 ಅಥವಾ ಆ ಬಳಿಕ ಐಪಿಒಗೆ ಬರುವ ಕಂಪನಿಗಳಿಗೆ ಈ ಲಿಸ್ಟಿಂಗ್ ನಿಯಮವು ಐಚ್ಛಿಕ ಆಗಿರುತ್ತದೆ. ಡಿ. 1ರ ನಂತರ ಐಪಿಒಗೆ ಬರುವ ಕಂಪನಿಗಳಿಗೆ ಕಡ್ಡಾಯ ಆಗಿರಲಿದೆ ಎಂದು ಸೆಬಿ ತಿಳಿಸಿದೆ.

ಡನ್ಜೊದಿಂದ ಸಹ ಸ್ಥಾಪಕ ದಲ್ವೀರ್ ಹೊರಕ್ಕೆ?

ಬೆಂಗಳೂರು (ರಾಯಿಟರ್ಸ್): ಡನ್ಜೊ ಕಂಪನಿಯಲ್ಲಿ ಒಟ್ಟು ನಾಲ್ವರು ಸಹ ಸ್ಥಾಪಕರಿದ್ದು, ಅವರಲ್ಲಿ ದಲ್ವೀರ್ ಸೂರಿ ಕಂಪನಿ ತೊರೆಯಲಿದ್ದಾರೆ ಎಂದು ಸೋಮವಾರ ಹೇಳಿದೆ.

ಅವರು ಯಾವಾಗ ಹೊರಹೋಗಲಿದ್ದಾರೆ ಮತ್ತು ಅವರ ಸ್ಥಾನಕ್ಕೆ ಯಾರು ಬರಲಿದ್ದಾರೆ ಎನ್ನುವ ಬಗ್ಗೆ ಕಂಪನಿ ಮಾಹಿತಿ ನೀಡಿಲ್ಲ.

ಆರ್ಥಿಕ ನಷ್ಟದಲ್ಲಿ ಇರುವ ಕಂಪನಿಯನ್ನು ಪುನರ್‌ರಚನೆ ಮಾಡುವುದಾಗಿ ರಿಲಯನ್ಸ್ ಇಂಡಸ್ಟ್ರಿಸ್ ಬೆಂಬಲಿತ ಡನ್ಜೊ ಹೇಳಿದೆ. ಈ ಕುರಿತು ಕಂಪನಿ ಪ್ರತಿಕ್ರಿಯೆ ನೀಡಿಲ್ಲ.

ಬಂಡವಾಳ ಸಂಗ್ರಹಿಸಲು ಕಷ್ಟಪಡುತ್ತಿರುವ ಕಂಪನಿಯು ಮೂರು ಹಂತಗಳಲ್ಲಿ ಸಿಬ್ಬಂದಿ ವಜಾ ಮಾಡುವುದಾಗಿ ಅಥವಾ ಕೆಲವು ಸಿಬ್ಬಂದಿಯ ವೇತನವನ್ನು ಕಡಿತ ಮಾಡುವುದಾಗಿ ಈಚೆಗಷ್ಟೇ ಪ್ರಕಟಿಸಿತ್ತು.

ದೇಶದಲ್ಲಿ ಕ್ರೋಮ್‌ಬುಕ್ ತಯಾರಿಕೆ ಶುರು

ನವದೆಹಲಿ (ಪಿಟಿಐ): ಗೂಗಲ್ ಮತ್ತು ಎಚ್‌ಪಿ ಕಂಪನಿಯ ಪಾಲುದಾರಿಕೆಯೊಂದಿಗೆ ಭಾರತದಲ್ಲಿ ಕ್ರೋಮ್‌ಬುಕ್ ತಯಾರಿಕೆ ಆರಂಭವಾಗಿದೆ ಎಂದು ಎಚ್‌ಪಿ ಕಂಪನಿಯ ವಕ್ತಾರರೊಬ್ಬರು ಸೋಮವಾರ ತಿಳಿಸಿದ್ದಾರೆ.

ಹೊಸ ಕ್ರೋಮ್‌ಬುಕ್ ಬೆಲೆಯು ₹15,990ರಿಂದ ಆರಂಭ ಆಗಲಿದೆ ಎಂದು ಅವರು ಹೇಳಿದ್ದಾರೆ. ಚೆನ್ನೈ ಬಳಿ ಇರುವ ಫ್ಲೆಕ್ಸ್ ಘಟಕದಲ್ಲಿ ಕ್ರೋಮ್‌ಬುಕ್ ತಯಾರಿಸಲಾಗುತ್ತಿದೆ ಎಂದು ಕಂಪನಿಯು ಹೇಳಿದೆ. ಇದರಿಂದಾಗಿ ಎಚ್‌ಪಿಯು ಭಾರತದಲ್ಲಿ ತಯಾರಿಸುತ್ತಿರುವ ಪಿಸಿ ವಿಭಾಗವು ಇನ್ನಷ್ಟು ವಿಸ್ತರಣೆ ಆಗಲಿದೆ.

ಭಾರತದಲ್ಲಿ ತಯಾರಿಕೆ ಆರಂಭಿಸಿರುವುದರಿಂದ ವಿದ್ಯಾರ್ಥಿಗಳಿಗೆ ಕಡಿಮೆ ಬೆಲೆಗೆ ಸುರಕ್ಷಿತವಾದ ಸಾಧನವು ಸುಲಭವಾಗಿ ಸಿಗಲಿದೆ ಎಂದು ಗೂಗಲ್ ಸಿಇಒ ಸುಂದರ್ ಪಿಚೈ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಟ್ರಂಪ್ ಸಾಮ್ರಾಜ್ಯಕ್ಕೆ ಕುತ್ತು?

ಆಸ್ತಿ ಮೌಲ್ಯ ಹೆಚ್ಚಿಸಿಕೊಂಡ ಆರೋಪ: ವಿಚಾರಣೆ ಆರಂಭ



ನ್ಯೂಯಾರ್ಕ್ (ರಾಯಟರ್ಸ್): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಅವರ ಕುಟುಂಬವು ಅನುಕೂಲಕರ ಸಾಲ ಮತ್ತು ವಿಮಾ ಸೌಲಭ್ಯ ಪಡೆಯಲು ತಮ್ಮ ಆಸ್ತಿಗಳ ಮೌಲ್ಯವನ್ನು ಹೆಚ್ಚಿಸಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ಸೋಮವಾರ ನ್ಯೂಯಾರ್ಕ್‌ನ ಮ್ಯಾನ್‌ಹಟನ್ ಕೋರ್ಟ್‌ನಲ್ಲಿ ವಿಚಾರಣೆ ಆರಂಭವಾಗಿದೆ.

ಡೆಮಾಕ್ರಟಿಕ್ ನ್ಯೂಯಾರ್ಕ್ ಅಟಾರ್ನಿ ಜನರಲ್ ಲೆಟಿಟಿಯಾ ಜೇಮ್ಸ್ ಅವರು, ಟ್ರಂಪ್ ಮತ್ತು ಅವರ ಕುಟುಂಬದ ವಿರುದ್ಧ ಈ ವಂಚನೆ ಆರೋಪಕ್ಕೆ ಸಂಬಂಧಿಸಿ ಸಿವಿಲ್ ಮೊಕದ್ದಮೆ ಹೂಡಿದ್ದಾರೆ.

2024ರಲ್ಲಿ ನಡೆಯಲಿರುವ ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ರಿಪಬ್ಲಿಕನ್ ಪಕ್ಷದಿಂದ ಮತ್ತೆ ಸ್ಪರ್ಧಿಸಲು ತಯಾರಿ ನಡೆಸುತ್ತಿರುವ ಟ್ರಂಪ್ ಅವರಿಗೆ ಈ ಪ್ರಕರಣವು ಹೊಸ ತಲೆನೋವು ತಂದಿದೆ. ಅಲ್ಲದೇ, ಅವರ ರಿಯಲ್ ಎಸ್ಟೇಟ್ ಸಾಮ್ರಾಜ್ಯಕ್ಕೂ ಉರುಳಾಗಿ ಪರಿಣಮಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಟ್ರಂಪ್‌ಗೆ ₹ 2,075 ಕೋಟಿ ದಂಡ ವಿಧಿಸಬೇಕು. ನ್ಯೂಯಾರ್ಕ್‌ನಲ್ಲಿ ಟ್ರಂಪ್ ಹಾಗೂ ಅವರ ಪುತ್ರರಾದ ಡೊನಾಲ್ಡ್ ಜೂನಿಯರ್ ಹಾಗೂ ಎರಿಕ್ ಅವರು ವ್ಯಾಪಾರ ನಡೆಸದಂತೆ ನಿರ್ಬಂಧ ಹೇರಬೇಕು. ಅವರ ಒಡೆತನದ ಕಂಪನಿಯು ರಿಯಲ್ ಎಸ್ಟೇಟ್ ಚಟುವಟಿಕೆ ನಡೆಸದಂತೆಯೂ ಐದು ವರ್ಷಗಳ ಕಾಲ ನಿರ್ಬಂಧ ವಿಧಿಸಬೇಕು ಎಂದು ಅಟಾರ್ನಿ ಜನರಲ್ ಜೇಮ್ಸ್ ಕೋರಿದ್ದಾರೆ.

ಆರೋಪ ಏನು?

ಟ್ರಂಪ್ ಮತ್ತು ಅವರ ಕುಟುಂಬವು 2011ರಿಂದ 2021ರ ನಡುವೆ ಆಸ್ತಿ ಮೌಲ್ಯವನ್ನು ₹ 15,770 ಕೋಟಿಯಿಂದ ₹ 29,880 ಕೋಟಿಗೆ ಹೆಚ್ಚಿಸಿಕೊಂಡಿದೆ. ಆ ಮೂಲಕ ಅನುಕೂಲಕರ ಸಾಲ ಮತ್ತು ವಿಮಾ ಸೌಲಭ್ಯ ಪಡೆದಿದೆ ಎಂದು ಜೇಮ್ಸ್ ಆಪಾದಿಸಿದ್ದಾರೆ.

ಈಗಾಗಲೇ, ನ್ಯಾಯಾಧೀಶರಾದ ಆರ್ಥರ್ ಎಂಗೊರಾನ್ ಅವರು, ಸೆಪ್ಟೆಂಬರ್ 26ರಂದು ನೀಡಿರುವ ಆದೇಶದಲ್ಲಿ, ‘ಜೇಮ್ಸ್ ಅವರು ಟ್ರಂಪ್ ಹಾಗೂ ಅವರ ಅವಲಂಬಿತರು ಎಸಗಿರುವ ವಂಚನೆ ಬಗ್ಗೆ ಸಾಬೀತುಪಡಿಸಿದ್ದಾರೆ’ ಎಂದು ಹೇಳಿದ್ದಾರೆ. ಹಾಗಾಗಿ, ಟ್ರಂಪ್ ಎಷ್ಟು ಮೊತ್ತದ ದಂಡ ಪಾವತಿಸುತ್ತಾರೆ ಎಂಬ ಕುತೂಹಲ ಮೂಡಿದೆ.

‘ಸರಿಯಾದ ಚರಿತ್ರೆ ಬರೆಯಲು ಸಕಾಲ’


ದತ್ತಾತ್ರೇಯ ಹೊಸಬಾಳೆ

ನಾಗ್ಪುರ (ಪಿಟಿಐ): ‘ದೇಶದ ಬಗ್ಗೆ ಮಾತನಾಡುವುದನ್ನು ದ್ವೇಷದಿಂದ ನೋಡುತ್ತಿದ್ದ ಕಾಲವಿತ್ತು. ಈಗ ವಸಾಹತುಶಾಹಿ ಮನಸ್ಥಿತಿ ಅಂತ್ಯಗೊಂಡಿದೆ. ಭಾರತವು ಬೌದ್ಧಿಕ ಸ್ವಾತಂತ್ರ್ಯದತ್ತ ಸಾಗುತ್ತಿದೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘ ಆಯೋಜಿಸಿದ್ದ ‘ಅಖಿಲ ಭಾರತೀಯ ಶಿಷ್ಯಕ್ ಸಮ್ಮಾನ್ ಸಮಾರೋಪ’ದಲ್ಲಿ ಶಿಕ್ಷಕರು ಮತ್ತು ಪ್ರಾಧ್ಯಾಪಕರನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ಕತ್ತಲೆ ಸರಿದಾಗ, ಸೂರ್ಯನನ್ನು ನೋಡಲಾಗದ ವಿರೋಧಿ ಶಕ್ತಿಗಳು ಸದ್ದು ಮಾಡುತ್ತವೆ. ನಾವು ಬೆಳಕನ್ನು ಪ್ರೀತಿಸುವವರು. ಸಮಾಜವು ವಿರೋಧಿ ಶಕ್ತಿಗಳಿಗೆ ಹೆದರಬಾರದು, ತಲೆಬಾಗಬಾರದು’ ಎಂದು ಅವರು ಹೇಳಿದರು.

‘ಭಾರತದ 'ಸ್ವಯಂ' ಶಕ್ತಿಯನ್ನು ಜಾಗೃತಗೊಳಿಸುವ ಸಮಯ ಬಂದಿದೆ. ಭಾರತದ ಸರಿಯಾದ ಇತಿಹಾಸ ಮುನ್ನೆಲೆಗೆ ಬರಬೇಕಾಗಿದೆ‘ ಎಂದರು.

‘ರಾಷ್ಟ್ರ ಮತ್ತು ರಾಷ್ಟ್ರೀಯ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳ ಮೇಲೆ ವಿದ್ಯಾರ್ಥಿಗಳು ಪಿಎಚ್.ಡಿ ಮಾಡುವುದನ್ನು ತಡೆದ ಹಲವಾರು ಉದಾಹರಣೆಗಳು ನಮ್ಮ ಮುಂದಿವೆ. ದೇಶದ ಸರಿಯಾದ ಇತಿಹಾಸದ ಮೇಲೆ ಪಿಎಚ್.ಡಿ ಮಾಡಲು ಕೆಲವರಿಗೆ ಅನುಮತಿ ಸಿಕ್ಕಿಲ್ಲ’ ಎಂದು ಹೊಸಬಾಳೆ ತಿಳಿಸಿದರು.

‘ನನಗೆ ಇಂತಹ ಅನೇಕ ಘಟನೆಗಳು ತಿಳಿದಿವೆ. ಒಂದು ಕಾಲದಲ್ಲಿ ದೇಶದ ಬಗ್ಗೆ ಮಾತನಾಡುವುದನ್ನೇ ದ್ವೇಷದಿಂದ ನೋಡಲಾಗುತ್ತಿತ್ತು. ದಶಕಗಳ ವಸಾಹತು ಮನಸ್ಥಿತಿ ಈಗ ಕೊನೆಗೊಂಡಿದೆ. ವಸಾಹತುಶಾಹಿ ಮನಸ್ಥಿತಿಯನ್ನು ಅಂತ್ಯಗೊಳಿಸುವ ಪ್ರಯತ್ನಗಳೊಂದಿಗೆ, ನಾವು ಬೌದ್ಧಿಕ ಸ್ವಾತಂತ್ರ್ಯದತ್ತ ಸಾಗುತ್ತಿದ್ದೇವೆ. ಆದ್ದರಿಂದ, ಈ ಬೌದ್ಧಿಕ ಹೋರಾಟದಲ್ಲಿ ಬುದ್ಧಿಜೀವಿಗಳ ಅವಶ್ಯಕತೆ ತುಂಬಾ ಇದೆ’ ಎಂದು ಹೊಸಬಾಳೆ ಅಭಿಪ್ರಾಯಪಟ್ಟರು.

ಚೀನಾದಿಂದ ಚಂದ್ರಯಾನ

ಬೀಜಿಂಗ್ (ಪಿಟಿಐ): ಚೀನಾವು ಮತ್ತೊಮ್ಮೆ ಚಂದ್ರಯಾನಕ್ಕೆ ಸಿದ್ಧತೆ ನಡೆಸಿದ್ದು, ಈ ಕುರಿತು ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ ಎಂದು ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ ಕ್ಸಿನ್ಹುವಾ ವರದಿ ಮಾಡಿದೆ.

ಮುಂದಿನ ವರ್ಷ ‘ಚಾಂಗ್–6’ ಹೆಸರಿನ ಈ ಚಂದ್ರಯಾನಕ್ಕೆ ಮುಹೂರ್ತ ನಿಗದಿಯಾಗಿದ್ದು, ಪಾಕಿಸ್ತಾನದ ಬಾಹ್ಯಾಕಾಶ ಸಂಸ್ಥೆ ಅಭಿವೃದ್ಧಿಪಡಿಸಿದ ಪೇಲೋಡ್‌ವೊಂದನ್ನು ಚಂದ್ರನಲ್ಲಿಗೆ ಹೊತ್ತೊಯ್ಯಲಿದೆ ಎಂದು ಚೀನಾದ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಯ (ಸಿಎನ್‌ಎಸ್‌ಎ) ಹೇಳಿಕೆಯನ್ನು ಉಲ್ಲೇಖಿಸಿ ಕ್ಸಿನ್ಹುವಾ ತನ್ನ ವರದಿಯಲ್ಲಿ ತಿಳಿಸಿದೆ.

ಚಂದ್ರನ ದಕ್ಷಿಣ ಧ್ರುವದಲ್ಲಿರುವ ತಗ್ಗು ಪ್ರದೇಶದಲ್ಲಿ ನೌಕೆಯನ್ನು ಸುರಕ್ಷಿತವಾಗಿ ಇಳಿಸಿ , ಆ ಮೂಲಕ ಅಧ್ಯಯನ ನಡೆಸುವುದು ಚೀನಾದ ಈ ಯೋಜನೆಯ ಉದ್ದೇಶವಾಗಿದೆ ಎಂದು ಸುದ್ದಿ ಸಂಸ್ಥೆ ಹೇಳಿದೆ.

ಬಾಹ್ಯಾಕಾಶ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಹಕಾರವನ್ನು ವೃದ್ಧಿಸಿಕೊಳ್ಳುವ ಪ್ರಯತ್ನದ ಭಾಗವಾಗಿ ಚೀನಾವು ಚಂದ್ರಯಾನ ಯೋಜನೆಯಡಿ ಫ್ರಾನ್ಸ್, ಇಟಲಿಯಿಂದ ನಿರ್ಮಿಸಿರುವ ಉಪಕರಣಗಳನ್ನು ಬಾಹ್ಯಾಕಾಶಕ್ಕೆ ಹೊತ್ತೊಯ್ಯುತ್ತಿದೆ. ಹಾಗಾಗಿ, ಪಾಕ್ ಅಭಿವೃದ್ಧಿಪಡಿಸಿದ ಕ್ಯೂಬ್ ಸ್ಯಾಟ್ ಉಪಕರಣವನ್ನು ಆಗಸಕ್ಕೆ ಹೊತ್ತೊಯ್ಯಲಿದೆ ಎಂದು ಸಿಎನ್‌ಎಸ್‌ಎ ತಿಳಿಸಿದೆ.

ಖಾಸಗಿ ವಿಮಾನ ಪತನ: ಭಾರತದ ಉದ್ಯಮಿ ಸಾವು

ಜೊಹಾನಸ್‌ಬರ್ಗ್ (ಪಿಟಿಐ): ನೈಋತ್ಯ ಜಿಂಬಾಬ್ವೆಯಲ್ಲಿರುವ ವಜ್ರದ ಗಣಿ ಸಮೀಪ ಖಾಸಗಿ ವಿಮಾನವೊಂದು ಪತನಗೊಂಡು ಭಾರತ ಮೂಲದ ಕೋಟ್ಯಧಿಪತಿ ಉದ್ಯಮಿ ಹರ್ಪಾಲ್ ರಂಧಾವ ಮತ್ತು ಅವರ ಪುತ್ರ ಸೇರಿ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಗಣಿಗಾರಿಕೆ ಕಂಪನಿ ರಿಯೊಜಿಮ್ ಮಾಲೀಕತ್ವದ ಸೆಸ್ನಾ 206 ವಿಮಾನವು ಹರಾರೆಯಿಂದ ಮುರೊವಾ ವಜ್ರದ ಗಣಿಗೆ ತೆರಳುತ್ತಿದ್ದ ವೇಳೆ ಅವಘಡ ಸಂಭವಿಸಿತು. ಈ ವೇಳೆ ವಿಮಾನದಲ್ಲಿ ‘ರಿಯೊಜಿಮ್’ ಮಾಲೀಕ ಹರ್ಪಾಲ್ ರಂಧಾವ ಮತ್ತು ಅವರ ಪುತ್ರ ಹಾಗೂ ಇತರ ನಾಲ್ಕು ಮಂದಿ ಇದ್ದರು ಎಂದು ಇಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಬಳಿಕ ಅದು ಕೆಳಗೆ ಬೀಳುವ ಮುನ್ನ ಸ್ಫೋಟಗೊಂಡಿದೆ. ಮೃತರ ಪೈಕಿ ನಾಲ್ವರು ವಿದೇಶಿಯರು, ಇಬ್ಬರು ಮಾತ್ರ ಜಿಂಬಾಬ್ವೆ ಪ್ರಜೆಗಳು ಎಂದು ಪೊಲೀಸರು ತಿಳಿಸಿದ್ದಾರೆ ಎಂದು ‘ದಿ ಹೆರಾಲ್ಡ್’ ವರದಿ ಮಾಡಿದೆ.

ಮೃತರ ಗುರುತನ್ನ ಪೊಲೀಸರು ಇನ್ನಷ್ಟೇ ಬಹಿರಂಗ ಮಾಡಬೇಕಿದೆ. ಆದರೆ ಸಿನಿಮಾ ನಿರ್ದೇಶಕ ಹೋಪ್‌ವೆಲ್ ಚಿನೊನಿ ಅವರು ಸ್ನೇಹಿತ ರಂಧಾವ ವಿಮಾನ ಅವಘಡದಲ್ಲಿ ಮೃತಪಟ್ಟಿರುವುದನ್ನು ಖಚಿತಪಡಿಸಿದ್ದಾರೆ.



ಅಥ್ಲೆಟಿಕ್ಸ್‌ನಲ್ಲಿ ಮುಂದುವರಿದ ಪದಕ ಬೇಟೆ • ಭಾರತ 4X400 ಮೀ. ಮಿಕ್ಸೆಡ್ ರಿಲೇ ತಂಡಕ್ಕೆ ಎರಡನೇ ಸ್ಥಾನ

ಆನ್ಸಿ, ಪಾರುಲ್ ಚೌಧರಿಗೆ ಬೆಳ್ಳಿ ಪದಕ

ಹಾಂಗ್‌ಝೌ (ಪಿಟಿಐ): ಭಾರತದ ಪಾರುಲ್ ಚೌಧರಿ ಮತ್ತು ಪ್ರೀತಿ ಅವರು ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡರೆ, ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಆನ್ಸಿ ಸೋಜನ್ ಬೆಳ್ಳಿಯೆಡೆಗೆ ಜಿಗಿದರು.

ಏಷ್ಯನ್ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಸೋಮವಾರವೂ ಗಮನ ಸೆಳೆದ ಭಾರತದ ಅಥ್ಲೀಟ್‌ಗಳು ಒಟ್ಟು ನಾಲ್ಕು ಪದಕಗಳನ್ನು ಗೆದ್ದುಕೊಂಡರು.

ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ಪಾರುಲ್ ಚೌಧರಿ 9 ನಿ. 27.63 ಸೆ.ಗಳಲ್ಲಿ ಗುರಿ ತಲುಪಿದರು. ಕಂಚಿನ ಪದಕ ಗೆದ್ದ ಪ್ರೀತಿ ನಿಗದಿತ ದೂರ ಕ್ರಮಿಸಲು 9 ನಿ.43.32 ಸೆ.ಗಳನ್ನು ತೆಗೆದುಕೊಂಡರು. ಚಿನ್ನದ ಪದಕ ಬಹರೇನ್‌ನ ಯಾವಿ ವಿನ್‌ಫ್ರೆಡ್ ಮುತಿಲೆ (9 ನಿ. 18.28 ಸೆ.) ಅವರ ಕೊರಳಿಗೇರಿತು. ಕೂಟ ದಾಖಲೆ ಮಾಡಿದ ಯಾವಿ, ಸುಮಾರು 50 ಮೀ. ಅಂತರದ ಲೀಡ್‌ನೊಂದಿಗೆ ಮೊದಲಿಗರಾಗಿ ಗುರಿಮುಟ್ಟಿದರು.

ಪಾರುಲ್ ತಮ್ಮ ಹೆಸರಿನಲ್ಲಿರುವ ರಾಷ್ಟ್ರೀಯ ದಾಖಲೆ ಮತ್ತು ವೈಯಕ್ತಿಕ ಶ್ರೇಷ್ಠ ಸಮಯದ (9 ನಿ. 15.31 ಸೆ.) ಸನಿಹವೂ ಬರಲಿಲ್ಲ. ಬುಡಾಪೆಸ್ಟ್‌ನಲ್ಲಿ ನಡೆದಿದ್ದ ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಅವರು ಈ ಸಮಯ ಕಂಡುಕೊಂಡಿದ್ದರು.

ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಆನ್ಸಿ 6.63 ಮೀ. ದೂರ ಜಿಗಿದು ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಎರಡನೇ ಸ್ಥಾನ ಪಡೆದು ಸಂಭ್ರಮಿಸಿದರು. ಆತಿಥೇಯ ಚೀನಾದ ಶಿಗಿ ಕ್ಸಿಯಾಂಗ್ (6.73 ಮೀ.) ಚಿನ್ನ ಗೆದ್ದರೆ, ವಿಯೆಟ್ನಾಂನ ಎನ್‌ಗಾ ಯಾನ್ ಯುಯಿ (6.50 ಮೀ.) ಕಂಚು ತಮ್ಮದಾಗಿಸಿಕೊಂಡರು.

ಈ ಸ್ಪರ್ಧೆಯಲ್ಲಿ ಭಾರತದ ಪದಕ ಭರವಸೆ ಎನಿಸಿದ್ದ ಶೈಲಿ ಸಿಂಗ್ 6.48 ಮೀ. ಸಾಧನೆಯೊಂದಿಗೆ ಐದನೇ ಸ್ಥಾನ ಪಡೆದು ನಿರಾಶೆ ಅನುಭವಿಸಿದರು. 20 ವರ್ಷ ದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತೆ ಶೈಲಿ, ಲಯ ಕಂಡುಕೊಳ್ಳುವಲ್ಲಿ ವಿಫಲರಾದರು.

ರಿಲೇ ತಂಡಕ್ಕೆ ಬೆಳ್ಳಿ: ಮೊಹಮ್ಮದ್ ಅಜ್ಮಲ್, ವಿದ್ಯಾ ರಾಮರಾಜ್, ರಾಜೇಶ್ ರಮೇಶ್ ಮತ್ತು ಶುಭಾ ಅವರನ್ನೊಳಗೊಂಡ 4X400 ಮೀ. ಮಿಕ್ಸೆಡ್ ರಿಲೇ ತಂಡ ಬೆಳ್ಳಿ ಗೆದ್ದುಕೊಂಡಿತು.


ಸ್ಪರ್ಧೆಯಲ್ಲಿ ಭಾರತ ತಂಡ 3 ನಿ. 14.34 ಸೆ.ಗಳೊಂದಿಗೆ ಮೂರನೇ ಸ್ಥಾನ ಗಳಿಸಿತ್ತು. ಆದರೆ ಎರಡನೇ ಸ್ಥಾನ ಪಡೆದಿದ್ದ ಶ್ರೀಲಂಕಾ ತಂಡ ಅನರ್ಹಗೊಂಡ ಕಾರಣ, ಭಾರತಕ್ಕೆ ಬೆಳ್ಳಿ ಲಭಿಸಿತು. ಲೇನ್ ನಿಯಮ ಉಲ್ಲಂಘಿಸಿದ್ದಕ್ಕೆ ಲಂಕಾ ತಂಡವನ್ನು ಅನರ್ಹಗೊಳಿಸಲಾಯಿತು.

ಬಹರೇನ್ ತಂಡ (3 ನಿ. 14.02 ಸೆ.) ಚಿನ್ನ ಗೆದ್ದರೆ, ನಾಲ್ಕನೇ ಸ್ಥಾನ ಪಡೆದಿದ್ದ ಕಜಕಸ್ತಾನ ತಂಡಕ್ಕೆ (3 ನಿ. 24.85 ಸೆ.) ಕಂಚಿನ ಪದಕದ ಅದೃಷ್ಟ ಒಲಿಯಿತು.

ಪುರುಷರ 400 ಮೀ. ಹರ್ಡಲ್ಸ್‌ನಲ್ಲಿ ಸಂತೋಷ್ ಕುಮಾರ್ ತಮಿಳರಸನ್ (49.28 ಸೆ.) ಮತ್ತು ಯಶಸ್ ಪಾಲಾಕ್ಷ (49.61 ಸೆ.) ಅವರು ತಮ್ಮ ಹೀಟ್ಸ್‌ನಲ್ಲಿ ಎರಡನೇ ಸ್ಥಾನ ಪಡೆದು ಪದಕ ಸುತ್ತು ಪ್ರವೇಶಿಸಿದರು.

ಸಂದೇಶ್ ಜೆಸ್ಸಿ ಮತ್ತು ಸರ್ವೇಶ್ ಅನಿಲ್ ಕುಶಾರೆ ಅವರು 2.10 ಮೀ. ಸಾಧನೆಯೊಂದಿಗೆ ಪುರುಷರ ಹೈಜಂಪ್ ಫೈನಲ್‌ಗೆ ಅರ್ಹತೆ ಪಡೆದರು. ಮೊಹಮ್ಮದ್ ಅಫ್ಸಲ್ (1 ನಿ. 46.79 ಸೆ.) ಮತ್ತು ಕೃಷ್ಣನ್ ಕುಮಾರ್ (1 ನಿ. 49.45 ಸೆ.) ಅವರು ಪುರುಷರ 800 ಮೀ. ಹೀಟ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು.

ಪುರುಷರ 200 ಮೀ. ಓಟದಲ್ಲಿ ಭಾರತದ ಅಮ್ಲಾನ್ ಬೋರ್ಗೋಹೈನ್ (20.98 ಸೆ.) ಆರನೇ ಸ್ಥಾನ ಪಡೆಯಲಷ್ಟೇ ಶಕ್ತರಾದರು.



6.63 ಮೀ.
ದೂರ ಜಿಗಿದು ಆನ್ಸಿ ಸೋಜನ್ ವೈಯಕ್ತಿಕ ಶ್ರೇಷ್ಠ ಸಾಧನೆ



4X400 ಮೀ. ಮಿಕ್ಸೆಡ್ ರಿಲೇನಲ್ಲಿ ಸ್ಪರ್ಧಿಸಿದ ಭಾರತದ ಮೊಹಮ್ಮದ್ ಅಜ್ಮಲ್ (ಬಲ) ಮತ್ತು ವಿದ್ಯಾ ರಾಮರಾಜ್ –ಪಿಟಿಐ ಚಿತ್ರ



ಗುರಿಯತ್ತ ಮುನ್ನುಗ್ಗಿದ ಪಾರುಲ್ ಚೌಧರಿ (ಬಲ)

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	147	81	42	270
2	ಜಪಾನ್	33	44	45	122
3	ದಕ್ಷಿಣ ಕೊರಿಯಾ	31	39	63	133
4	ಭಾರತ	13	24	23	60
5	ಚೀನಾ ತೈಪೆ	12	10	17	39
6	ಉಜ್ಬೇಕಿಸ್ತಾನ	11	14	18	43
7	ಥಾಯ್ಲೆಂಡ್	10	7	16	33
8	ಉತ್ತರ ಕೊರಿಯಾ	7	10	5	22
9	ಹಾಂಗ್‌ಕಾಂಗ್	6	15	23	44
10	ಬಹರೇನ್	6	1	4	11

‘ಲಿಂಗತ್ವ ಅಲ್ಪಸಂಖ್ಯಾತ’ ಅಥ್ಲೀಟ್‌ನಿಂದಾಗಿ ಪದಕ ಕಳೆದುಕೊಂಡೆ: ಸ್ವಪ್ನಾ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಹೆಪ್ಟಾಥ್ಲಾನ್‌ನಲ್ಲಿ ಪದಕ ಗೆಲ್ಲುವಲ್ಲಿ ವಿಫಲವಾಗಿದ್ದ ಭಾರತದ ಸ್ವಪ್ನಾ ಬರ್ಮನ್ ಅವರು, ‘ಲಿಂಗತ್ವ ಅಲ್ಪಸಂಖ್ಯಾತ’ ಅಥ್ಲೀಟ್‌ನಿಂದಾಗಿ ಕಂಚಿನ ಪದಕ ಗೆಲ್ಲುವ ಅವಕಾಶ ಕಳೆದುಕೊಂಡೆ ಎಂಬ ಹೇಳಿಕೆ ನೀಡಿ ವಿವಾದ ಸೃಷ್ಟಿಸಿದ್ದಾರೆ.

ಸ್ವಪ್ನಾ ಅವರು 2018ರ ಜಕಾರ್ತ ಕೂಟದಲ್ಲಿ ಚಿನ್ನದ ಪದಕ ಗೆದ್ದಿದ್ದರು. ಆದರೆ ಭಾನುವಾರ ನಡೆದಿದ್ದ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು. ನಂದಿನಿ ಅಗಸರ ಕಂಚು ತಮ್ಮದಾಗಿಸಿಕೊಂಡಿದ್ದರು.

ನಂದಿನಿ ಅವರು ‘ಲಿಂಗತ್ವ ಅಲ್ಪಸಂಖ್ಯಾತ’ ಆಗಿದ್ದು, ಮಹಿಳೆಯರ ವಿಭಾಗದಲ್ಲಿ ಪಾಲ್ಗೊಳ್ಳಲು ಅರ್ಹಳಲ್ಲ ಎಂದು ಸ್ವಪ್ನಾ ಅವರು ತಮ್ಮ ‘ಎಕ್ಸ್’ ಖಾತೆಯಲ್ಲಿ ಬರೆದಿದ್ದಾರೆ. ಇದು ವಿವಾದಕ್ಕೆ ಕಾರಣವಾಗುತ್ತಿದ್ದಂತೆಯೇ ತಮ್ಮ ಖಾತೆಯಿಂದ ಪೋಸ್ಟ್ ಅಳಿಸಿ ಹಾಕಿದ್ದಾರೆ.

‘ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಅಥ್ಲೀಟ್‌ನಿಂದಾಗಿ ನನ್ನ ಕಂಚಿನ ಪದಕ ಕಳೆದುಕೊಳ್ಳಬೇಕಾಯಿತು. ಇದು ಅಥ್ಲೆಟಿಕ್ಸ್‌ನ ನಿಯಮಗಳಿಗೆ ವಿರುದ್ಧವಾಗಿದ್ದು, ನನ್ನ ಪದಕ ಮರಳಿ ಪಡೆಯಲು ಪ್ರಯತ್ನಿಸುವೆ. ನನಗೆ ಸಹಾಯ ಹಾಗೂ ಬೆಂಬಲ ಬೇಕಾಗಿದೆ’ ಎಂದು ಸ್ವಪ್ನಾ ಬರೆದುಕೊಂಡಿದ್ದರು.

ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷ ಆದಿಲ್ ಸುಮರಿವಾಲ ಅವರು ಈ ಬೆಳವಣಿಗೆಯ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. ಕ್ರೀಡಾಕೂಟ ಕೊನೆಗೊಂಡ ಬಳಿಕ ಎಎಫ್‌ಐ ಈ ವಿವಾದ ಬಗೆಹರಿಸಬಹುದು ಎಂದು ನಿರೀಕ್ಷಿಸಲಾಗಿದೆ.

ಉಷಾ ದಾಖಲೆ ಸರಿಗಟ್ಟಿದ ವಿದ್ಯಾ ರಾಮರಾಜ್

ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ನೀಡಿದ ವಿದ್ಯಾ ರಾಮರಾಜ್, ಹೀಟ್ಸ್‌ನಲ್ಲಿ 55.42 ಸೆ. ಸಾಧನೆಯೊಂದಿಗೆ ಫೈನಲ್ ಪ್ರವೇಶಿಸಿದರು. ದಿಗ್ಗಜ ಅಥ್ಲೀಟ್ ಪಿ.ಟಿ.ಉಷಾ, 1984 ರಲ್ಲಿ ಸ್ಥಾಪಿಸಿದ್ದ ರಾಷ್ಟ್ರೀಯ ದಾಖಲೆಯನ್ನು ಅವರು ಸರಿಗಟ್ಟಿದರು. ಇದೇ ವಿಭಾಗದಲ್ಲಿ ಕಣದಲ್ಲಿದ್ದ ಕರ್ನಾಟಕದ ಸಿಂಚಲ್ ಕಾವೇರಮ್ಮ (58.62 ಸೆ.) ಹೀಟ್ಸ್‌ನಲ್ಲಿ ಐದನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಲು ವಿಫಲರಾದರು.

ಚಿನ್ನದತ್ತ ತೇಜಸ್ವಿನ್ ಹೆಜ್ಜೆ



ಭಾರತದ ತೇಜಸ್ವಿನ್ ಶಂಕರ್ ಅವರು ಡೆಕಾಥ್ಲಾನ್ ನಲ್ಲಿ ಚಿನ್ನದ ಪದಕದತ್ತ ಹೆಜ್ಜೆಯಿಟ್ಟಿದ್ದಾರೆ. ಹತ್ತು ವಿವಿಧ ಸ್ಪರ್ಧೆಗಳನ್ನೊಳಗೊಂಡ ಪೈಪೋಟಿಯಲ್ಲಿ ಸೋಮವಾರ ನಡೆದ ಐದು ಸ್ಪರ್ಧೆಗಳ ಬಳಿಕ ಅವರು ಒಟ್ಟು 4,260 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಎರಡನೇ ಸ್ಥಾನದಲ್ಲಿರುವ ಚೀನಾದ ಸುನ್ ಕ್ವಿಹಾವೊ (4,010) ಅವರಿಗಿಂತ 250 ಪಾಯಿಂಟ್‌ಗಳ ಲೀಡ್‌ನಲ್ಲಿದ್ದಾರೆ.

100 ಮೀ. ಓಟ, ಲಾಂಗ್‌ಜಂಪ್, ಶಾಟ್‌ಪಟ್, ಹೈಜಂಪ್ ಮತ್ತು 400 ಮೀ. ಓಟದ ಸ್ಪರ್ಧೆಗಳು ಸೋಮವಾರ ನಡೆದವು. ತೇಜಸ್ವಿನ್ ಅವರು ಮೂರು ಸ್ಪರ್ಧೆಗಳಲ್ಲಿ (ಲಾಂಗ್‌ಜಂಪ್, ಹೈಜಂಪ್ ಮತ್ತು 400 ಮೀ. ಓಟ) ಅಗ್ರಸ್ಥಾನ ಪಡೆದರು. ಇನ್ನುಳಿದ ಐದು ಸ್ಪರ್ಧೆಗಳು – 110 ಮೀ. ಹರ್ಡಲ್ಸ್, ಡಿಸ್ಕಸ್ ಥ್ರೋ, ಪೋಲ್‌ವಾಲ್ಟ್, ಜಾವೆಲಿನ್ ಥ್ರೋ ಮತ್ತು 1,500 ಮೀ. ಓಟ ಮಂಗಳವಾರ ನಡೆಯಲಿವೆ.

ಚೆಸ್: ಪುರುಷರ ತಂಡಕ್ಕೆ ಜಯ, ಮಹಿಳೆಯರಿಗೆ ಹಿನ್ನಡೆ

ಹಾಂಗ್‌ಝೌ (ಪಿಟಿಐ): ಅಗ್ರ ಶ್ರೇಯಾಂಕದ ಭಾರತ ಪುರುಷರ ತಂಡ, ಏಷ್ಯನ್ ಗೇಮ್ಸ್ ಚೆಸ್ ತಂಡ ವಿಭಾಗದ ನಾಲ್ಕನೇ ಸುತ್ತಿನಲ್ಲಿ ಸೋಮವಾರ ಕಿರ್ಗಿಸ್ತಾನ ತಂಡವನ್ನು 3.5–0.5 ರಿಂದ ಸುಲಭವಾಗಿ ಸೋಲಿಸಿತು. ಆದರೆ ಮಹಿಳೆಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಚೀನಾ 2.5–1.5 ರಿಂದ ಎರಡನೇ ಶ್ರೇಯಾಂಕದ ಭಾರತ ವಿರುದ್ಧ ಹೋರಾಟದ ಜಯಪಡೆಯಿತು.

ಮೊದಲ ಬೋರ್ಡ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್, ಕಿರ್ಗಿಸ್ತಾನದ ಫಿಡೆ ಮಾಸ್ಟರ್ ಒರೋಜ್ಬೇವ್ ಅವರನ್ನು ಸೋಲಿಸಿದರೆ, ಎರಡನೇ ಬೋರ್ಡ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ, ಟೊಲೊಗೊನ್ ಅವರನ್ನು ಮಣಿಸಿದರು. ಅರ್ಜುನ್ ಇರಿಗೇಶಿ ಮತ್ತು ಸೆಜ್‌ಬೆಕೋವ್ ನಡುವಣ ಪಂದ್ಯ ‘ಡ್ರಾ’ ಆಯಿತು. ಅನುಭವಿ ಪಿ.ಹರಿಕೃಷ್ಣ, ಝೂಕ್ಸಿಲಿಕೋವ್ ಅವರನ್ನು ಸೋಲಿಸಿದರು. ಪ್ರಜ್ಞಾನಂದ ಈ ಪಂದ್ಯದಲ್ಲಿ ಆಡಲಿಲ್ಲ. ಮೂರನೇ ಶ್ರೇಯಾಂಕದ ಇರಾನ್ ತಂಡ 2.5–1.5 ರಿಂದ ನಾಲ್ಕನೇ ಶ್ರೇಯಾಂಕದ ಉಜ್ಬೇಕಿಸ್ತಾನ ತಂಡವನ್ನು ಸೋಲಿಸಿತು.

ಮಹಿಳೆಯರ ವಿಭಾಗದ ಮೊದಲ ಬೋರ್ಡ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್‌ಗಳಾದ ಕೋನೇರು ಹಂಪಿ ಮತ್ತು ಹೌ ಇಫಾನ್ ಡ್ರಾ ಮಾಡಿಕೊಂಡರು. ಡಿ.ಹಾರಿಕಾ ಮತ್ತು ವಂತಿಕಾ ಅಗರವಾಲ್ ಕೂಡ ತಮ್ಮ ಪಂದ್ಯಗಳನ್ನು ಡ್ರಾ ಮಾಡಿಕೊಂಡರು. ಆದರೆ ಮೂರನೇ ಬೋರ್ಡ್‌ನಲ್ಲಿ ತಾನ್ ಝೊಂಗಿ ಅವರು ಐಎಂ ವೈಶಾಲಿ ರಮೇಶ್‌ಬಾಬು ಅವರನ್ನು ಮಣಿಸಿದ್ದು, ಚೀನಾಕ್ಕೆ ನಿರ್ಣಾಯಕ ಮುನ್ನಡೆ ದೊರಕಿಸಿಕೊಟ್ಟಿತು.

ಆರ್ಚರಿ: ಭಾರತದ ಸ್ಪರ್ಧಿಗಳ ಪಾರಮ್ಯ



ಭಾರತದ ಅತಾನು ದಾಸ್

ಹಾಂಗ್‌ಝೌ (ಪಿಟಿಐ): ಭಾರತದ ರಿಕರ್ವ್ ಮತ್ತು ಕಾಂಪೌಂಡ್ ಆರ್ಚರಿ ಸ್ಪರ್ಧಿಗಳು ಸೋಮವಾರ ಏಷ್ಯನ್ ಕ್ರೀಡಾಕೂಟದಲ್ಲಿ ಪಾರಮ್ಯ ಮೆರೆದು ಆರು ವಿಭಾಗಗಳಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಓಜಸ್ ದೇವತಾಳೆ ಮತ್ತು ಜ್ಯೋತಿ ಸುರೇಖಾ ವೆನ್ನಂ ಅವರನ್ನು ಒಳಗೊಂಡ ಮಿಕ್ಸೆಡ್ ಕಾಂಪೌಂಡ್ ತಂಡವು ಯುಎಇಯ ಅಮ್ನಾ ಅಲವಾಧಿ ಮತ್ತು ಮೊಹಮ್ಮದ್ ಬಿನಾಮ್ರೊ ಅವರನ್ನು 159- 151ರಿಂದ ಹಿಮ್ಮೆಟ್ಟಿಸಿತು.

ಮಿಕ್ಸೆಡ್ ರಿಕರ್ವ್‌ನಲ್ಲಿ ಅತಾನು ದಾಸ್ ಮತ್ತು ಅಂಕಿತಾ ಜೋಡಿಯು ಮಲೇಷ್ಯಾದ ಸಯಾಕಿರಾ ಬಿಂಟಿ ಮಶಾಯಿಖ್ ಮತ್ತು ಮೊಹಮದ್ ಜರೀಫ್ ಸೈಹಿರ್ ಜೋಡಿಯನ್ನು 6-2 ಅಂತರದಿಂದ ಸೋಲಿಸಿತು.

ಪುರುಷರ ಕಾಂಪೌಂಡ್ ಸ್ಪರ್ಧೆಯಲ್ಲಿ ಓಜಸ್, ಅಭಿಷೇಕ್ ವರ್ಮಾ ಮತ್ತು ಪ್ರಥಮೇಶ್ ಜಾವಕರ್ ಅವರನ್ನು ಒಳಗೊಂಡ ತಂಡವು 15ನೇ ಶ್ರೇಯಾಂಕದ ಸಿಂಗಪುರ ತಂಡವನ್ನು 235–219 ರಿಂದ ಮಣಿಸಿತು.

ಮಹಿಳೆಯರ ಕಾಂಪೌಂಡ್ ಸ್ಪರ್ಧೆಯಲ್ಲಿ ಅಗ್ರ ಶ್ರೇಯಾಂಕದ ಜ್ಯೋತಿ, ಅದಿತಿ ಸ್ವಾಮಿ ಮತ್ತು ಪರ್ಣೀತ್ ಕೌರ್ ಅವರ ತಂಡವು ಕ್ವಾರ್ಟರ್ ಫೈನಲ್‌ಗೆ ಬೈ ಪಡೆದಿದೆ.

ಅತಾನು ದಾಸ್, ಧೀರಜ್ ಬೊಮ್ಮದೇವರ ಮತ್ತು ತುಷಾರ್ ಪ್ರಭಾಕರ್ ಒಳಗೊಂಡ ಪುರುಷರ ರಿಕರ್ವ್ ತಂಡವು 6-0 ಯಿಂದ ಹಾಂಗ್‌ಕಾಂಗ್ ತಂಡವನ್ನು ಸೋಲಿಸಿತು.

ಕಾಂಪೌಂಡ್ ಆರ್ಚರಿ ವೈಯಕ್ತಿಕ ವಿಭಾಗದ ಸ್ಪರ್ಧೆಯಲ್ಲೂ ಭಾರತದ ಪುರುಷ ಮತ್ತು ಮಹಿಳಾ ಸ್ಪರ್ಧಿಗಳು ಎಂಟರ ಘಟ್ಟ ಪ್ರವೇಶಿಸಿದರು.

ಕಬಡ್ಡಿ: ಡ್ರಾ ಪಂದ್ಯದಲ್ಲಿ ಭಾರತ

ಹಾಂಗ್‌ಝೌ (ಪಿಟಿಐ): ಭಾರತ ಮಹಿಳಾ ಕಬಡ್ಡಿ ತಂಡದವರು ಏಷ್ಯನ್ ಕ್ರೀಡಾಕೂಟದ ತಮ್ಮ ಮೊದಲ ಪಂದ್ಯದಲ್ಲಿ ಚೀನಾ ತೈಪೆ ಜತೆ 34–34 ರಿಂದ ಅನಿರೀಕ್ಷಿತ ಡ್ರಾ ಮಾಡಿಕೊಂಡರು.

ಗೆಲುವಿನ ನೆಚ್ಚಿನ ತಂಡ ಎನಿಸಿಕೊಂಡಿದ್ದ ಭಾರತಕ್ಕೆ ಪಂದ್ಯದುದ್ದಕ್ಕೂ ಸ್ಫೂರ್ತಿಯುತ ಪ್ರತಿರೋಧ ಒಡ್ಡಿದ ತೈಪೆ ತಂಡ, ಕೊನೆಯ ರೇಡ್‌ನಲ್ಲಿ ಬೋನಸ್ ಅಂಕ ಗಿಟ್ಟಿಸಿ ಡ್ರಾ ಸಾಧಿಸಿತು.

ಮಹಿಳಾ ತಂಡ ತನ್ನ ಮುಂದಿನ ಪಂದ್ಯದಲ್ಲಿ ಮಂಗಳವಾರ ದಕ್ಷಿಣ ಕೊರಿಯಾ ವಿರುದ್ಧ ಪೈಪೋಟಿ ನಡೆಸಲಿದೆ. ಪುರುಷರ ತಂಡದವರು ‘ಎ’ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಎದುರಿಸುವ ಮೂಲಕ ಪದಕದೆಡೆಗಿನ ಅಭಿಯಾನ ಆರಂಭಿಸಲಿದ್ದಾರೆ.

ರೋಲರ್ ಸ್ಕೇಟಿಂಗ್: ಭಾರತಕ್ಕೆ ‘ಡಬಲ್’ ಕಂಚು

ಹಾಂಗ್‌ಝೌ (ಪಿಟಿಐ): ಸೋಮವಾರ ಬೆಳಿಗ್ಗೆಯೇ ಭಾರತದ ರೋಲರ್ ಸ್ಕೇಟಿಂಗ್ ಪಟುಗಳು ಎರಡು ಕಂಚಿನ ಪದಕಗಳನ್ನು ಗೆದ್ದರು.

ಏಷ್ಯನ್ ಕ್ರೀಡಾಕೂಟದ ಒಂಬತ್ತನೇ ದಿನ ರೋಲರ್ ಸ್ಕೇಟಿಂಗ್ ಕ್ರೀಡೆಯಲ್ಲಿ ಪುರುಷ ಮತ್ತು ಮಹಿಳಾ ತಂಡಗಳೆರಡೂ ಪದಕ ಜಯಿಸಿದವು.

ಎರಡೂ ವಿಭಾಗಗಳಿಗೂ 3000 ಮೀ ರಿಲೆ ತಂಡ ಸ್ಪರ್ಧೆಯಲ್ಲಿ ಪದಕ ಒಲಿದವು. ಈ ಕ್ರೀಡೆಯಲ್ಲಿ ಭಾರತದ ಇದುವರೆಗಿನ ಸರ್ವಶ್ರೇಷ್ಠ ಸಾಧನೆ ಇದಾಗಿದೆ.

ಮಹಿಳಾ ವಿಭಾಗದಲ್ಲಿ; ಯುವ ಸ್ಕೇಟಿಂಗ್ ಪಟುಗಳಾದ ಕಾರ್ತಿಕಾ ಜಗದೀಶ್ವರನ್ ಮತ್ತು ಹೀರಲ್ ಸಾಧು ಅವರು 29 ವರ್ಷದ ಅರತಿ ಕಸ್ತೂರಿ ರಾಜ್ ಅವರೊಂದಿಗೆ ವೇಗದ ಸ್ಕೇಟಿಂಗ್‌ನಲ್ಲಿ ಪದಕ ಗಳಿಸಿದರು. ತಂಡವು 4ನಿ,34.861 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು.

ಈ ವಿಭಾಗದಲ್ಲಿ ತೈಪೆ (4ನಿ, 19.447ಸೆ) ಮತ್ತು ದಕ್ಷಿಣ ಕೊರಿಯಾ (4ನಿ,21.146ಸೆ) ತಂಡಗಳು ಚಿನ್ನ ಹಾಗೂ ಬೆಳ್ಳಿ ಗೆದ್ದವು.

ನಂತರದ ನಡೆದ ಪುರುಷರ ಸ್ಪರ್ಧೆಯಲ್ಲಿ ಆನಂದಕುಮಾರ್ ವೇಲಕುಮಾರ್, ಸಿದ್ಧಾಂತ್ ಕಾಂಬ್ಳೆ ಮತ್ತು ವಿಕ್ರಂ ಇಂಗಳೆ ಅವರಿದ್ದ ತಂಡವು 4ನಿ, 34.861ಸೆಕೆಂಡುಗಳಲ್ಲಿ ಕಂಚಿನ ಪದಕ ಜಯಿಸಿದರು.

ಈ ವಿಭಾಗದಲ್ಲಿಯೂ ತೈಪೆ (4ನಿ,05.692ಸೆ) ಮತ್ತು ದಕ್ಷಿಣ ಕೊರಿಯಾ (4ನಿ,05.702ಸೆ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗಳಿಸಿದರು.

‘ನಾವು ಇವತ್ತು ಪದಕ ಜಯದ ವಿಶ್ವಾಸದಲ್ಲಿದ್ದೆವು. ತೈಪೆ ಮತ್ತು ಕೊರಿಯಾ ತಂಡಗಳು ಒಡ್ಡಿದ ಕಠಿಣ ಪೈಪೋಟಿ ಎದುರಿಸುವ ಆತ್ಮವಿಶ್ವಾಸವೂ ಇತ್ತು. ಆ ಎರಡೂ ದೇಶಗಳೊಂದಿಗೆ ಸ್ಪರ್ಧಿಸಿ ಈ ಸಾಧನೆ ಮಾಡಿರುವುದು ಸಂತಸ ತಂದಿದೆ‘ ಎಂದು ಭಾರತ ತಂಡದ ಸಿದ್ಧಾಂತ್ ಕಾಂಬ್ಳೆ ಹೇಳಿದರು.

‘ಸ್ಪರ್ಧೆಯಲ್ಲಿ ನಮ್ಮ ತಂಡಕ್ಕೆ ಬೆಳ್ಳಿ ಜಯಿಸುವ ಅವಕಾಶ ಇತ್ತು. ಆದರೆ ಕೊನೆಯ ಲ್ಯಾಪ್‌ನಲ್ಲಿ ತಿರುವೊಂದರಲ್ಲಿ ನನ್ನ ಸ್ಕೇಟಿಂಗ್ ಚಕ್ರವು ಸ್ವಲ್ಪ ಜಾರಿತು. ಇದರಿಂದಾಗಿ ಬೇರೆ ತಂಡವು ನಮ್ಮನ್ನು ದಾಟಿ ಸಾಗಲು ಅವಕಾಶವಾಯಿತು‘ ಎಂದೂ ಕಾಂಬ್ಳೆ ಹೇಳೀದರು.





ಭಾರತ ಪುರುಷರ ಸ್ಕೇಟಿಂಗ್ ತಂಡ: ಆನಂದಕುಮಾರ್ ವೇಲಕುಮಾರ್, ವಿಕ್ರಂ ರಾಜೇಂದ್ರ ಇಂಗಳೆ ಮತ್ತು ಸಿದ್ಧಾಂತ್ ರಾಹುಲ್ (ಎಡ ಚಿತ್ರ). ಭಾರತದ ಮಹಿಳಾ ಸ್ಕೇಟಿಂಗ್ ತಂಡ ಕಾರ್ತಿಕಾ ಜಗದೀಶ್ವರನ್, ಆರತಿ ಕಸ್ತೂರಿ ರಾಜ್ ಮತ್ತು ಹೀರಲ್ ಸಾಧು –ಪಿಟಿಐ ಚಿತ್ರ

ಟೇಬಲ್ ಟೆನಿಸ್: ಸುತೀರ್ಥಾ- ಐಹಿಕಾ ಮುಖರ್ಜಿಗೆ ಕಂಚು

ಭಾರತದ ಜೋಡಿ ಚಾರಿತ್ರಿಕ ಸಾಧನೆ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಟೇಬಲ್ ಟೆನಿಸ್‌ನಲ್ಲಿ ಭಾರತದ ಸುತೀರ್ಥಾ ಮುಖರ್ಜಿ ಮತ್ತು ಐಹಿಕಾ ಮುಖರ್ಜಿ ಅವರ ಅಮೋಘ ಓಟಕ್ಕೆ ಕಂಚಿನ ಪದಕದೊಂದಿಗೆ ತೆರೆಬಿತ್ತು.

ಸೋಮವಾರ ನಡೆದ ಮಹಿಳೆಯರ ಡಬಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಭಾರತದ ಜೋಡಿ 3–4 ರಿಂದ ಉತ್ತರ ಕೊರಿಯಾದ ಸುಯಾಂಗ್ ಚಾ- ಸುಗಿಯಾಂಗ್ ಪಾಕ್ ಎದುರು ಸೋತಿತು. ಆದರೂ ಈ ವಿಭಾಗದಲ್ಲಿ ಇದೇ ಮೊದಲ ಬಾರಿ ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿತು.

ಸುತೀರ್ಥಾಮತ್ತು ಐಹಿಕಾ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾದ ವಿಶ್ವಚಾಂಪಿಯನ್ ಜೋಡಿ ಮೆಂಗ್ ಚೆನ್ ಮತ್ತು ಯಿದಿ ವಾಂಗ್ ಅವರಿಗೆ ಆಘಾತ ನೀಡಿತ್ತು.

ಸೆಮಿಫೈನಲ್‌ನಲ್ಲಿ ದಿಟ್ಟವಾಗಿ ಹೋ ರಾಡಿದರೂ 11-7, 8-11, 11-7, 8-11, 9-11, 11-5, 2-1 ರಿಂದ ಪರಾಭವಗೊಂಡರು. ಇದರೊಂದಿಗೆ ಏಷ್ಯನ್ ಗೇಮ್ಸ್‌ನ ಟಿಟಿಯಲ್ಲಿ ಭಾರತದ ಸವಾಲಿಗೆ ತೆರೆಬಿತ್ತು.



ಸುತೀರ್ಥಾ (ಎಡ) ಮತ್ತು ಐಹಿಕಾ –ಪಿಟಿಐ ಚಿತ್ರ

2018ರ ಕೂಟದಲ್ಲಿ ಪುರುಷರ ಮತ್ತು ಮಹಿಳೆಯರ ತಂಡ ವಿಭಾಗಗಳಲ್ಲಿ ಭಾರತ ಕಂಚು ಜಯಿಸಿತ್ತು. ಈ ಬಾರಿ ಮಹಿಳೆಯರ ಡಬಲ್ಸ್‌ನಲ್ಲಿ ಅಂತಹದೇ ಸಾಧನೆ ಮಾಡಿದೆ.

‘ಎದುರಾಳಿಗಳು ತೋರಿದಂತಹ ತಾಳ್ಮೆಯನ್ನು ತೋರಲು ನಾವು ವಿಫಲರಾದೆವು. ಕೊನೆಯ ಗೇಮ್‌ನಲ್ಲಿ ಅಲ್ಪ ಒತ್ತಡಕ್ಕೆ ಸಿಲುಕಿದೆವು. ಕೊರಿಯಾದ ಆಟಗಾರ್ತಿಯರು ಆಕ್ರಮಣಕಾರಿಯಾಗಿ ಆಡಿ ಪಾಯಿಂಟ್ ಗಿಟ್ಟಿಸಿಕೊಂಡರು’ ಎಂದು ಸುತೀರ್ಥಾ ಪ್ರತಿಕ್ರಿಯಿಸಿದರು.

ಏಳನೇ ಹಾಗೂ ನಿರ್ಣಾಯಕ ಗೇಮ್‌ನ ಆರಂಭದಲ್ಲೇ ಕೊರಿಯಾದ ಜೋಡಿ 6–1 ರಿಂದ ಮೇಲುಗೈ ಪಡೆಯಿತು. ಆ ಬಳಿಕ ಮರುಹೋರಾಟ ನಡೆಸಲು ಭಾರತದ ಆಟಗಾರ್ತಿಯರು ವಿಫಲರಾದರು.